
ಶ್ರೀಮದಾನಂದತೀರ್ಥ ಗುರುಭ್ಯೋನಮಃ

# ಶ್ರೀಮನ್ಮಧ್ವಾಚಾರ್ಯರ ಸಿದ್ಧಾಂತ ಸಾರ ಸಂಗ್ರಹ



ಸಂಗ್ರಹ, ಶೋಧನೆ, ವಿವರಣೆ, ಅನುವಾದ

ಪ್ರೊ॥ ಪಂ॥ ಬದರೀನಾಥಾಚಾರ್ಯ ಘೂಳೀ

ಮಾಧವ ಮಧ್ವ ಪ್ರಕಾಶನ

೧೬೪, ೭ನೇ ಅಡ್ಡರಸ್ತೆ, ೯ನೇ ಮುಖ್ಯರಸ್ತೆ

ಬಿ.ಇ.ಎಂ.ಎಲ್. ಬಡಾವಣೆ, ರಾಜರಾಜೇಶ್ವರೀನಗರ

ಬೆಂಗಳೂರು – ೫೬೦ ೦೯೮

SHREEMANMADHWACHARYARA SIDDHANTHA SAARA (Sangraha) Compiled and Edited by Prof. Badarinathacharya Ghooli M.A., Retired Professor and Published by Madhava Madhwa Prakashana No. 164, "Soudamini" 7th Cross, 9th Main, BEML Layout, Rajarajeshwarinagar, Bangalore-560 089 Phone : 080-28602191

First Edition : March 2006

© Prof. Badarinathachar Ghooli

Typeset (DTP) By
**P. S. RAGHAVENDRA**
Bangalore-560 050
Phone 080-22421294

ಹರಿಃ ಓಂ

**ಹರಿಯೇ ಸರ್ವೋತ್ತಮ – ವಾಯು ಜೀವೋತ್ತಮ**

## ಮುನ್ನುಡಿ

ಹರಿಯೇ ಸರ್ವೋತ್ತಮ – ವಾಯು ಜೀವೋತ್ತಮನೆಂದು, ಮಠಗಳಲ್ಲಿ ಭಕ್ತವೃಂದ ಗಟ್ಟಿಯಾಗಿ ಕೂಗುವುದನ್ನು ಸಾಧಾರಣವಾಗಿ ಕೇಳುತ್ತೇವೆ.

ಅಲ್ಲದೆ, ಮಧ್ವಮತ ಸಿದ್ಧಾಂತದ ಪದ್ಧತಿ ಬಿಡಬ್ಯಾಡಿ ಎನ್ನುವುದು ಸಾಮಾನ್ಯ ಹೇಳಿಕೆ. ವಿಚಾರವೇನೆಂದರೆ ಮಧ್ವ ಸಿದ್ಧಾಂತವೇನು ? ಹರಿಯೇ ಸರ್ವೋತ್ತನು ಹೇಗೆನ್ನುವುದನ್ನು ತಿಳಿಯದೇ ಕೂಗಿದ ಮಾತ್ರದಿಂದ ಮಾಧ್ವರೆನಿಸಿಕೊಳ್ಳುವುದಿಲ್ಲ. ನಾವು ಮಾಧ್ವರೆನಿಸಿಕೊಳ್ಳಬೇಕಾದರೆ ಶ್ರೀಮನ್ಮಧ್ವಾಚಾರ್ಯರ ತತ್ವಗಳನ್ನು ಸ್ವಲ್ಪವಾದರೂ ಅರ್ಥಮಾಡಿಕೊಳ್ಳಬೇಕಲ್ಲವೇ ?

ಆಚಾರ್ಯರ ಸಿದ್ಧಾಂತವನ್ನು ತಿಳಿಯುವುದಷ್ಟೇ ಅಲ್ಲದೆ, ಮಧ್ವಶಾಸ್ತ್ರದಲ್ಲಿ ತಿಳಿಸಿದಂತೆ ಆದಷ್ಟು ನಡೆದುಕೊಳ್ಳಬೇಕು. ಇಲ್ಲವಾದರೆ, ಹರಿ ಸರ್ವೋತ್ತಮ ಎಂದು ಸಾಮೂಹಿಕವಾಗಿ ಕೂಗಿದಾಗ ಎಮ್ಮೆ ಕೂಗಿದಂತಾಗುವುದು.

ಈ ದಿಶೆಯಲ್ಲಿ ಶ್ರೀಮನ್ಮಧ್ವಾಚಾರ್ಯರ ಸಿದ್ಧಾಂತ (ತತ್ವವಾದ) ಸಾರವನ್ನು ಶೋಧಿಸಿ, ಸಂಗ್ರಹಿಸಿ ಪ್ರಾಮಾಣಿಕವಾಗಿ ನಿರೂಪಿಸಲಾಗಿದೆ. ಶ್ರೀಮನ್ಮಧ್ವಮತ ಸಾರವನ್ನು ಶ್ರೀ ವ್ಯಾಸರಾಜರು ಒಂದು ಶ್ಲೋಕದಿಂದ ತಿಳಿಸಿ ಉದ್ಧಾರ ಮಾಡಿರುತ್ತಾರೆ. ಈ ಶ್ಲೋಕವು ಒಂಭತ್ತು ಅಂಶಗಳಿಂದ ಕೂಡಿರುತ್ತೆ. ಒಂದೊಂದು ಅಂಶವನ್ನೂ ತದನುಸಾರಿ ವೇದ, ಪುರಾಣಗಳ ಸಹಾಯಗಳಿಂದ ಸಮಸ್ತ ಮಾಧ್ವರಿಗೂ ಮನಮುಟ್ಟುವಂತೆ ಸುಲಭವಾಗಿ ಬರೆಯಲಾಗಿದೆ. ಆಚಾರ್ಯರ ಪೂರ್ವದಲ್ಲಿ ಇಪ್ಪತ್ತೊಂದು ಭಾಷ್ಯಕಾರರಿದ್ದರೂ ಅವರ ಸಿದ್ಧಾಂತ ಅಪೂರ್ಣವಾಗಿರುವಾಗ ಶ್ರೀ ವ್ಯಾಸರಿಂದ ಆಜ್ಞಾಪ್ತರಾಗಿ ವಾಯುದೇವರೇ ಮಧ್ವರಾಗಿ ಭುವಿಯಲ್ಲಿ ಅವತರಿಸಿ ವೇದೇತಿಹಾಸ ಗ್ರಂಥಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಮತ್ತು ಶ್ರೀವೇದವ್ಯಾಸರ ಅನುಮತಿ ಅವರ ಮತವನ್ನು ಸ್ಪಷ್ಟವಾಗಿ ತಿಳಿಸಲು ಇಪ್ಪತ್ತೆರಡನೇ ಭಾಷ್ಯ ಬರೆದ ಮಹಾ ಮುನಿಪುಂಗರು.

ನಾವು ಮಾಧ್ವರಾಗಿದ್ದೇವೆಂದು ಹೆಮ್ಮೆಪಡಬೇಕಾದರೆ ಆಚಾರ್ಯರ ಸತ್ಸಿದ್ಧಾಂತವೇನೆಂಬುದನ್ನು ಸ್ವಲ್ಪ ಮಟ್ಟಿಗಾದರೂ ತಿಳಿದು ಆದಷ್ಟು ಸಿದ್ಧಾಂತದಲ್ಲಿ ತಿಳಿಸಿರುವ ಮುಖ್ಯ ಅಂಶಗಳನ್ನು ಸ್ವಲ್ಪಮಟ್ಟಿಗಾದರೂ ಅನುಷ್ಠಾನಕ್ಕೆ ತರಬೇಕು. ಆಗ ಮಾತ್ರ ವಿಶ್ವ ಗುರುಗಳೆನಿಸಿದ ಶ್ರೀಮದಾಚಾರ್ಯರ ಸೇವೆ ಆಗಿ ಅವರ ಅನುಗ್ರಹಕ್ಕೆ ಪಾತ್ರರಾಗುತ್ತೇವೆ.

ಸುಮಾರು ೮೦೦ ವರ್ಷಗಳ ಹಿಂದೆ ದಕ್ಷಿಣ ಕನ್ನಡ ಉಡುಪಿಯ ಸಮೀಪ ಪಾಜಕಾ ಕ್ಷೇತ್ರದಲ್ಲಿ ವಾಯುದೇವರು ಅವತರಿಸಿ ಜಗತ್ತಿಗೆ ಬಂದು ಹೊಸ ವಿಶಿಷ್ಟ ತತ್ವವನ್ನು ಪ್ರತಿಪಾದನೆ ಮಾಡಿದಾಗ ಸಾಕಷ್ಟು ವಿರೋಧಗಳನ್ನು ಎದುರಿಸಬೇಕಾಯಿತು. ಅವರು ಎಲ್ಲವನ್ನೂ ವಿಮರ್ಶಿಸಿ, ಜಯಗಳಿಸಿ ದ್ವೈತ ವೇದಾಂತವನ್ನು ಆಚಂದ್ರಾರ್ಕವಾಗಿ ಬೆಳಗುವಂತೆ ಮಾಡಿದ ಧೀಮಂತರೇ ಶ್ರೀಮನ್ಮಧ್ವಾಚಾರ್ಯರು – ಪೂರ್ಣಪ್ರಜ್ಞರು – ಆನಂದದಾಯಕ (ಮೋಕ್ಷಪ್ರದ) ಸಚ್ಛಾಸ್ತ್ರವನ್ನು ರಚಿಸಿದಾಗ ಪರವಾದಿಗಳು ಆಚಾರ್ಯರ ದ್ವೈತ ವೇದಾಂತವನ್ನು ಒಪ್ಪಲೇಬೇಕಾಯಿತು.

ಹೀಗೆ ಜಗತ್ತು ಕಂಡ ಅಪೂರ್ವ ವೇದಾಂತ ದಾರ್ಶನಿಕರಲ್ಲಿ ಅಗ್ರಸ್ಥಾನವಲ್ಲದೆ, ಅದ್ವಿತೀಯವಾಗಿ ಮೆರೆಯುವಂತೆ ಮಾಡಿದ ಮಹಾಮಹಿಮರು.

ಶ್ರೀಮದಾಚಾರ್ಯರು ಬಹುಮುಖ ಪ್ರತಿಭೆ ಉಳ್ಳವರು. ಅವರ ಗ್ರಂಥಗಳು ಆಚಾರ್ಯರ ದಿಂಬವನ್ನೇ ತೋರಿಸುತ್ತದೆ – ವೇದ ವೇದಾಂತ ನಿರ್ಣಯಾತ್ಮಕ ಭಾರತ, ಭಾಗವತ, ದಶ ಪ್ರಕರಣಗಳು, ಉಪನಿಷತ್ತುಗಳಲ್ಲಿನ ನಿಜಾರ್ಥ, ನಿತ್ಯಾನುಷ್ಠಾನ ಮಾರ್ಗದರ್ಶನ, ತಂತ್ರವಿದ್ಯೆ, ವೈಜ್ಞಾನಿ ಸಂಪತ್ತು. ಹೀಗೆ ಒಬ್ಬ ಆಚಾರ್ಯರ ಜೀವಿತ ಕಾಲದಲ್ಲಿ ಆಯಿತೆಂದರೆ ಅವರ ಶೋಧನಾಶಕ್ತಿ, ಆಳ ಚಿಂತನೆ, ಆಕಾರದಲ್ಲಿನ ಸಮಸ್ತ ಸಿದ್ಧಾಂತಗಳ ವಿಮರ್ಶಾತ್ಮಕ ಅಧ್ಯಯನ ಮಾಡಿ ಮಧ್ವಮತದ ಹಿರಿಮೆ ತೋರಿಸಿದ ಯುಗ ಪುರುಷರು. ಉಡುಪಿ (ಪಾಜಕ) ಆಗ ಅಷ್ಟೇನೂ ಪ್ರಗತಿ ಕಾಣದ ಒಂದು ಗ್ರಾಮದಲ್ಲಿ ಜೀವಿಸಿ ಇಷ್ಟೊಂದು ಕೃತಿಗಳನ್ನು ರಚಿಸಿದ್ದಾರೆಂದರೆ ನಮಗೆ ವಿಸ್ಮಯವಾಗುವುದು. ಪ್ರವಾಸ ಈಗಿನಂತೆ ಅನುಕೂಲಗಳಿಲ್ಲದಿದ್ದಾಗ ಆಸೇತು ಹಿಮಾಚಲ ಸಂಚರಿಸಿ ಅನೇಕ ಪ್ರತಿವಾದಿಗಳನ್ನು ಪರಾಜಯಗೊಳಿಸಿ ದ್ವೈತ ವೇದಾಂತವನ್ನು ಬದರೀಯಲ್ಲಿಂದ ದಕ್ಷಿಣ ಭಾರತಾದ್ಯಂತ ಕಂಗೊಳಿಸುವಂತೆ ಮಾಡಿದ ಪವಾಡ ಪುರುಷರು. ಬಹುಭಾಷಾ ಪ್ರಾವೀಣ್ಯತೆ, ಭೀಮಸೇನರಂತೆ ಬಲಾಢ್ಯ, ಹನುಮಂತನಂತೆ ಲಂಘನ ನೋಡಿದರೆ ಅಮಾನುಷ ವ್ಯಾಪಾರವಲ್ಲದೇ ಮತ್ತೇನು ? ಹೀಗೆ The world had to concead the supreme philosophy of Sri Madhwa.

ಇಂತಹ ವಾಯುವ್ಯಂಶರಾದ ಆಚಾರ್ಯರ ಗ್ರಂಥಗಳ ಬಗ್ಗೆ ಅತಿಸೂಕ್ಷ್ಮ ಪರಿಚಯಾತ್ಮಕ ವಿವರಣೆ ಇಲ್ಲಿ ಕಾಣಬಹುದು.

ಇತಿ ಶ್ರೀ ಮಧ್ವಲ್ಲಭ ಗುರುಚರಣದಾಸ

೨೯–೧೦–೨೦೦೮ **ಪ್ರೊ॥ ಪಂ॥ ಬದರೀನಾಥಾಚಾರ್ಯ ಘೂಳೀ**

**ಹರಿಃ ಓಂ**

**ಶ್ರೀಮದಾನಂದತೀರ್ಥ ಗುರುಭ್ಯೋನಮಃ**

# ಶ್ರೀಮನ್ಮಧ್ವಾಚಾರ್ಯರ ಸಿದ್ಧಾಂತ ಸಾರ (ಸಂಗ್ರಹ)

**ಲಕ್ಷ್ಮೀಪತಿಂ ಸುಖಮುಖ್ಯೈರಭಿಲೈರ್ಗುಣೋಘೈಃ**
**ಪೂರ್ಣಂ ವ್ಯಪೇತ ನಿಖಿಲಾಘಮಚಿಂತಶಕ್ತಿಂ ।**
**ಪ್ರಾಣಾದಿಸರ್ವಜಗತೋ ಜನಿಪೂರ್ವಹೇತುಂ**
**ಮೋಕ್ಷೈಕಹೇತುಮನಿಶಂ ಪ್ರಣಮಾಮಿ ವಿಷ್ಣುಃ ॥**

**ನಿಖಿಲಾದ್ವೈತಸಿದ್ಧಾಂತಪ್ರಾಪ್ತಾಜ್ಞಾನವಿನಾಶಕಃ ।**
**ಶ್ರೀಮದಾಚಾರ್ಯಸೂರ್ಯೋಽಯಂ ದದ್ಯಾತತ್ತ್ವಪ್ರಕಾಶನಂ ॥**

**ಪ್ರಣಮ್ಯ ಶ್ರೀಮದಾನಂದತೀರ್ಥಾದಿಗುರುದೇಶಿಕಾನ್**
**ತೈಪ್ರೇರಿತಮಾತ್ರೇಣ ಕರೋಮಿ ಲೇಶತಃಸತ್ಸಿದ್ಧಾಂತಸಂಗ್ರಹಂಯಥಾಮತಿ**

## ಅವತಾರಿಕಾ

**ಹರಿಃ ಓಂ.** ಶ್ರೀಮದಾನಂದತೀರ್ಥರನ್ನು ಲೋಕವು ಕಂಡ ಅನುಪಮ ದಾರ್ಶನಿಕರು, ತತ್ವಜ್ಞಾನಿಗಳು, ಅಪೂರ್ವ ವಿದ್ವತ್ ಆಕರ್ಷಕ ಶರೀರ ಕಾಂತಿ, ಅಮಿತ ಭಗವದ್ಭಕ್ತಿ, ವೇದಾಂತ, ಜತೆಗೆ ವಿಶಿಷ್ಟ ವಿಜ್ಞಾನಿ. ಆರ್ತ ಜನರ ದುಃಖ ಪರಿಹಾರ ಮಾಡಿದ (ಮಾಡುವ) ಕರುಣಾಮೂರ್ತಿ. "The World has never seen a person with such a towering personality like Sri Madhwa. He is endowed with super human knowledge, with a deep mythological thinking and an unparallel researcher and scientist all rolled into one person"

ಶ್ರೀಮದಾನಂದತೀರ್ಥರನ್ನು ಕಂಡು, ಅವರ ವಾಣಿಯನ್ನು ಕೇಳಿದ ಮಹನೀಯರೇ ಅಪಾರ ಪುಣ್ಯವಂತರು.

## ಜಗತ್ತು ಕಂಡ ಶ್ರೀಮದಾನಂದತೀರ್ಥರು

ಶ್ರೀಮದಾನಂದತೀರ್ಥರ ದ್ವೈತ ಸಿದ್ಧಾಂತವಾಗಲಿ, ಆಚಾರ್ಯರ ಜೀವನದ ಬಗ್ಗೆ ಆಗಲಿ, ಹಿಂದೆ, ಅಂದರೆ ಈಗ್ಗೆ ೮೦ ವರ್ಷಗಳ ಹಿಂದೆ ಅಷ್ಟಾಗಿ

ಪ್ರಚಾರವಿದ್ದಿಲ್ಲವೆಂದೇ ಹೇಳಬಹುದು. ಶ್ರೀ ಶಂಕರರ ಅದ್ವೈತ ವ್ಯಾಪ್ತಕವಾದಷ್ಟು ಆಗಿದ್ದಿಲ್ಲ. ಕೆಲವೊಮ್ಮೆ ಮರೆಯುವ ಪ್ರಸಂಗವಿದ್ದಿತು. ಅಲ್ಲದೇ, ಕೆಲ ಲೇಖಕರು ಮಧ್ವಾಚಾರ್ಯರ ಸಿದ್ಧಾಂತವನ್ನು ವಿಪರೀತವಾಗಿ ಹಾಗೂ ಅಪಾರ್ಥ ಮಾಡಿ ಬರೆದಿರುತ್ತಾರೆ. ಪ್ರಾಯಶಃ ಅವರು ಆಚಾರ್ಯ ಮಧ್ವರ ತತ್ವಗಳನ್ನು ಸರಿಯಾಗಿ ತಿಳಿಯದೆ, ಮಧ್ವರ ಸಿದ್ಧಾಂತಕ್ಕೆ ತಮ್ಮದೇ ಆದ ಕಲ್ಪನೆಯಿಂದ ಹೇಳಿರುವುದು ವಿಷಾದನೀಯ. (ಮೈಸೂರು ಮಹಾರಾಜರ ಆಸ್ಥಾನ ವಿದ್ವಾನ್ ಶ್ರೀ ಹೆಚ್. ಎನ್. ರಾಘವೇಂದ್ರಾಚಾರ್ ಅವರು ಬರೆದ "Dwaita philosophy its place in the Vedanta 1941" ಕೃತಿಯಲ್ಲಿ ಸ್ವಲ್ಪ ಅಪಾರ್ಥ ಬೋಧಕ ವಿಷಯಗಳು ಕಂಡುಬರುವುದು. ಉದಾ: **"ಸ್ವರೂಪ ಸೃಷ್ಟಿ"** ಅಂಶದ ಬಗ್ಗೆ ಅವರು ನೀಡಿದ ವಿವರಣೆ ಸಂಪ್ರದಾಯಕ್ಕೆ ವಿರುದ್ಧವಾಗಿರುವುದರಿಂದ ಹೆಚ್ಚಿಗೆ ಮನ್ನಣೆ ಸಿಗಲಿಲ್ಲ. ಅಲ್ಲದೆ ಅವರು ಹೇಳಿದ್ದು ಅವರ ಮರಣಾ ನಂತರ ಸಮಾಪ್ತಿಯಾಯಿತು. ಶ್ರೀ ಸತ್ಯಧ್ಯಾನತೀರ್ಥರು ಖಂಡಿಸಿದರು. He was excommunicated)

ಶ್ರೀಮದಾಚಾರ್ಯರ ಸಿದ್ಧಾಂತವನ್ನು ಯಥಾವತ್ತಾಗಿ ತಿಳಿಸಿ ಅನುವಾದಿಸಿ ಇಂದಿಗೂ ಲೋಕದಲ್ಲಿ ಹೆಸರು ಪಡೆದಿದೆ, ಮಾನ್ಯವಾಗಿದೆ ಅಂದರೆ ಶ್ರೀಮಜ್ಜಯತೀರ್ಥರು, ಶ್ರೀವ್ಯಾಸರಾಜರು, ಶ್ರೀವಾದಿರಾಜರು, ಶ್ರೀರಘೋತ್ತಮರು ಮತ್ತು ಶ್ರೀರಾಘವೇಂದ್ರರು ದುಡಿದು ಆಚಾರ್ಯರು ನಾಟಿದ ತತ್ವವಾದ ಸಿದ್ಧಾಂತವನ್ನು ರಕ್ಷಿಸಿ, ಬೆಳೆಸಿ ಸರ್ವತೋಮುಖವಾಗಿ ಹೆಮ್ಮರವಾಗಿ ವ್ಯಾಪಿಸುವಂತೆ ಮಾಡಿದರು. ಅವರ ಶ್ರಮ ಆಸ್ಥೆ ವೈಷ್ಣವ ಜನಾಂಗಕ್ಕೆ ಕೊಟ್ಟ ದೊಡ್ಡ ನಿಧಿ. ಇದನ್ನು ಮರೆಯುವಂತಿಲ್ಲ.

**ವ್ಯಾಸೇನ ವ್ಯುಪ್ತಬೀಜಃ ಶ್ರುತಿಭುವಿ ಭಗವತ್ಪಾದಲಬ್ಧಾಂಕುರಶ್ರೀಃ**
**ಪ್ರತ್ನೈರೀಷತ್ಪ್ರಭಿನ್ನೋಽಜನಿ ಜಯಮುನಿನಾ ಸಮ್ಯಗುದ್ಭಿನ್ನಶಾಖಃ ।**
**ಮೌನೀಶವ್ಯಾಸರಾಜಾದುದಿತಕಿಸಲಯಃ ಪುಷ್ಪಿತೋಽಯಂ ಜಯೀಂದ್ರಾ**
**ದದ್ಯ ಶ್ರೀರಾಘವೇಂದ್ರಾದ್ವಿಲಸತಿ ಫಲಿತೋ ಮಧ್ವಸಿದ್ಧಾಂತಶಾಖೀ ॥**

ವಾದೀಂದ್ರರು

ಇದಕ್ಕೆ ಸಂವಾದಿಯಾಗಿ ನರಹರಿತೀರ್ಥರು, ಪುರಂದರದಾಸರು, ವಿಜಯದಾಸರು, ಗೋಪಾಲದಾಸರು ಹಾಗೂ ಜಗನ್ನಾಥದಾಸರು ತಮ್ಮ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳಿಂದ ಇನ್ನಷ್ಟು ಮೆರೆಗು ಕೊಟ್ಟಿರುತ್ತಾರೆ.



ಶ್ರೀಮದಾಚಾರ್ಯರ ಸಿದ್ಧಾಂತವನ್ನು ದ್ವೈತವೆಂದು ಎಲ್ಲಿಯೂ ಹೇಳಿಕೊಂಡಿಲ್ಲ. ತತ್ವವಾದವೆಂದೇ ಪ್ರಸಿದ್ಧಿ ಹೊಂದಿತು. ಶ್ರೀಮದಾಚಾರ್ಯರ ತತ್ವಗಳನ್ನು **"ದ್ವೈತ"** ಅಂತ ಕರೆದವರು ಅನ್ಯಮತೀಯರು.

ಶ್ರೀಮನ್ಮಧ್ವಾಚಾರ್ಯರನ್ನು **ಪೂರ್ಣಪ್ರಜ್ಞ, ಪೂರ್ಣಬೋಧರು** ಎಂದೇ ಮೊದಲ ಹೆಸರು. ಆಮೇಲೆ ಆನಂದದಾಯಕ ಶಾಸ್ತ್ರವನ್ನು ರಚಿಸಿದ್ದರಿಂದ **ಆನಂದತೀರ್ಥ**ರೆಂದು, ಪರವಾದಿಗಳನ್ನು ತರ್ಕ ಅನುಮಾನಾದಿಗಳಿಂದ ಪರಾಜಯಗೊಳಿಸಿದ್ದರಿಂದ **ಅನುಮಾನತೀರ್ಥ**ರೆಂಬುದಾಗಿಯೂ ಕರೆಯಲಾಯಿತು. ಮಧ್ವಾಚಾರ್ಯರನ್ನು ಶ್ರೀಮಧ್ವರು ಎಂದು ಮೊದಲು ಕರೆದಿಲ್ಲ. ಆದರೆ ಶ್ರೀ ಆಚಾರ್ಯರೇ ಹೇಳಿಕೊಂಡಿದ್ದಾರೆ, ತಾವು ಮಧ್ವರೆಂದು. ಬಳಿತ್ಥಾ ಸೂಕ್ತದಲ್ಲಿ ಉಲ್ಲೇಖವಿದೆ ಹಾಗೂ ಮಹಾಭಾರತ ತಾತ್ಪರ್ಯ ನಿರ್ಣಯ ಇತ್ಯಾದಿ ಮುಖ್ಯ ಗ್ರಂಥಗಳ, ಕೊನೆಗೆ ತಾವು ವಾಯುದೇವರ ಅವತಾರವೆಂದು, ಮೊದಲು ಹನುಮರಾಗಿ, ಆಮೇಲೆ ಭೀಮಸೇನರಾಗಿ, ಕೊನೆಗೆ ಮಧ್ವರಾಗಿ ಅವತರಿಸಿ ವೇದವ್ಯಾಸರ ಗ್ರಂಥಗಳಿಗೆ ಭಾಷ್ಯ, ವ್ಯಾಖ್ಯಾನ ಬರೆದಿದ್ದೇವೆ ಅಂತ ಹೇಳಿಕೊಂಡಿದ್ದಾರೆ.

**ಯಸ್ಯತ್ರೀಣ್ಯುದಿತಾನಿ ವೇದವಚನೇರೂಪಾಣಿ ದಿವ್ಯಾನಲಂ**
**ಬಟ್‌ತದ್ದರ್ಶತ ಮಿತ್ಥಮೇವ ನಿಹಿತಂ ದೇವಸ್ಯಭರ್ಗೋಮಹತ್ ।**
**ವಾಯೋರಾಮವಚನಯಂ ಪ್ರಥಮಕಂ ಪೃಕ್ಷೋದ್ವಿತೀಯಂ ।**
**ವಪುರ್ಮಧ್ವೋಯತ್ತು ತಿತ್ರೀಯಮೇವತದ ಮುನಾಗ್ರಂಥಃ ಕೃತಕೇಶವೇ ॥**

ಹೀಗೆ ಹೇಳಿಕೊಳ್ಳಲು ಅನೇಕ ಶೃತಿ, ಸ್ಮೃತಿ, ಪುರಾಣಗಳನ್ನು ಪ್ರಮಾಣ ಕೊಟ್ಟು ಸಮರ್ಥಿಸಿರುತ್ತಾರೆ. ಇಂದಿಗೂ ಅವರನ್ನು, ಅವರ ಅನುಯಾಯಿಗಳನ್ನು ಮಧ್ವಾಚಾರ್ಯರೆಂದು – ಮಾಧ್ವರು ಎಂದೇ ಎಲ್ಲರೂ ಕರೆಯಲಾಗಿದೆ.

ಶ್ರೀ ಆನಂದತೀರ್ಥರನ್ನು ಮಧ್ವಾಚಾರ್ಯರೆಂದು ವಾಯುದೇವರ ಮೂರನೇ ಅವತಾರವೆಂದೂ ತಿಳಿಸುವ ಶೃತಿ, ಸ್ಮೃತಿ, ಪುರಾಣಗಳ ಕೆಲವನ್ನು ಪರಿವಿಡಿಯಲ್ಲಿ ಬರೆಯಲಾಗಿದೆ. ಶ್ರೀ ಮಧ್ವರನ್ನು ದ್ವೈತಮತಸ್ಥಾಪನಾಚಾರ್ಯರೆಂದು ಅವರ ಅನುಯಾಯಿಗಳನ್ನು ದ್ವೈತಿಗಳೆಂದು ಕರೆಯಲು ಇದೇ ಕಾರಣ.

ದ್ವೈತ ಅಂದರೇನು ? (ದ್ವಿತೀಯ ಭಾವಃ) ದ್ವಿತ್ವ – ಎರಡು. ಭೇದ – ಜೀವ, ಈಶ್ವರ ಭೇದವನ್ನು ತಿಳಿಸುವ ಮತಕ್ಕೆ ದ್ವೈತಮತವೆನ್ನಲಾಗಿದೆ.

**ಶ್ರೀಮನ್ಮಧ್ವಮತದ ಸಿದ್ಧಾಂತ ಸಾರವೇನೆಂಬುದನ್ನು ತಿಳಿಯುವ ಪ್ರಯತ್ನ**

ಒಂದು ಮುಖ್ಯ ವಿಷಯ ಅವಶ್ಯ ತಿಳಿಯಬೇಕು.

ಶ್ರೀಮದಾನಂದತೀರ್ಥರು ತಮ್ಮ ಸಿದ್ಧಾಂತವನ್ನು ಹೊಸದಾಗಿ ಸೃಷ್ಟಿಸಿಲ್ಲ. ದ್ವೈತ ವೇದಾಂತವು ಅನಾದಿಕಾಲದಿಂದಲೂ ಇದ್ದಿತು. ಹಾಗೆ ಅದ್ವೈತ ರೂಪವು ಪೂರ್ವದಲ್ಲಿದ್ದಿತು.

"Sri Madhwa did not invent a new philosophy. This dualistic theory had been forgotten and given a secondary position and sometimes neglected. But it was Sri Madhwa decided to bring forth his theory into prominance and to bring forth his views he had to study many philosophies then existed. After careful research and study with critical view, then only he spelt out a theory that had to be given a rightful place in theistic world."

ಹೀಗೆ ಸಾಧಿಸಿ ತತ್ಸಿದ್ಧಾಂತವನ್ನು ಸ್ಥಾಪಿಸಲು ಸಾಕಷ್ಟು ವಿರೋಧಗಳನ್ನು ಎದುರಿಸಬೇಕಾಯಿತು. ಆದರೂ ದಿಟವಾಗಿ ವಾದಿಸಿ, ಜಯಗಳಿಸಿದರು. **"ಆರೂಢ್ಯ ಸರ್ವಶಾಸ್ತ್ರಾಣಿ ವಿಜಾರ್ಯಚ ಪುನಃ ಪುನಃ ಇದಮೇವ ನಿಮಿಷ್ಟಿನ್ನಂ ವೇದಶಾಸ್ತ್ರಾತ್ ಪರಂನಾಸ್ತಿ ನದೇವೋ ಕೇಶವಾತ್ಪರಂ"** ಎಂದು ಹೇಳಿದರೆಂದು ತಿಳಿದುಬರುವುದು.

ಇತ್ತೀಚಿನ ಶತಮಾನಗಳಲ್ಲಿ ಕೆಲವರು ಅನ್ಯ ಮತವನ್ನು ಅವಲಂಬಿಸಿದ್ದರೂ ಶ್ರೀಮದಾನಂದತೀರ್ಥರ ಸಿದ್ಧಾಂತವನ್ನು ಆಮೇಲೆ ಅವಲೋಕಿಸಿ, ತಮಗೆ ಮನಸ್ಸಿಲ್ಲದಿದ್ದರೂ ಶ್ರೀ ಮಧ್ವರ ತತ್ವವಾದಕ್ಕೆ ಅಗ್ರಸ್ಥಾನ ಕೊಡಬೇಕಾಯಿತು. ಡಾ॥ ರಾಧಾಕೃಷ್ಣನ್ ಶಂಕರರ ಸಿದ್ಧಾಂತದಲ್ಲಿ ಸಾಕಷ್ಟು ನ್ಯೂನತೆಗಳಿವೆ ಎಂದಿದ್ದಾರೆ. Many questions remain unanswered. Sri Shankara tries to explain it a way, without accounting for its base or authority. Whereas Sri Madhwa has laboured to establish his dualistic exposition on flattered position. We cannot deny the worthiness with hypothetical criticism.

**ಡಾ॥ ದಾಸ ಗುಪ್ತ** ಅವರೂ ಸಹ ಶ್ರೀ ಮಧ್ವರ ತತ್ವವು ಅಧಿಕೃತವಾಗಿ ಎಲ್ಲಾ ರೀತಿ ಸಿದ್ಧಾಂತ ಪ್ರಶ್ನೆಗಳಿಗೆ ಸೂಕ್ತ ಸಮಾಧಾನ, ಪರಿಹಾರ ಸಪ್ರಮಾಣಿಕವಾಗಿ ಸಾಧಿಸಿರುತ್ತಾರೆ ಎಂದಿದ್ದಾರೆ. ಇಂತಹ ಶ್ರೇಷ್ಠ ಉನ್ನತ ಸ್ಥಾನ ಪಡೆಯಲು ಶ್ರೀ ಜಯತೀರ್ಥರು ಶ್ರೀ ವ್ಯಾಸರಾಜರ ಕೊಡುಗೆ ಅಸಾಮಾನ್ಯ.



ಹೀಗೆ ಅನೇಕ ಪಾಶ್ಚಿಮಾತ್ಯ ಸಿದ್ಧಾಂತಿಗಳು ವಿವರಿಸುತ್ತಾ, Dr. Hucley, Dr. Bhuler, Max Mueller ಆದಿಯಾದವರ ಸಾರವೂ ಇದೇ ರೀತಿಯಾಗಿರುವುದು.

ಹಾಗಾದರೆ ಅನ್ಯ ಮತಾಚಾರ್ಯರು ಬೋಧಿಸಿದ ಸಿದ್ಧಾಂತ ಏನು ತಿಳಿಸುವುದು ? ಅವು ಹೇಗೆ ದುರ್ಬೋಧಗಳು ಶ್ರೀಮನ್ಮಧ್ವಾಚಾರ್ಯರ ಸಿದ್ಧಾಂತವನ್ನು ಸೂಕ್ಷ್ಮವಾಗಿ ತಿಳಿಯಿರಿ.

ಶ್ರೀಮದಾನಂದತೀರ್ಥರ ಅವತಾರ ಪೂರ್ವದಲ್ಲಿ ೨೧ ಭಾಷ್ಯಕಾರರು ಇದ್ದರೆಂದು ತಿಳಿಯುತ್ತದೆ. ಆದರೆ ಅವುಗಳ ಪೈಕಿ ಈಗ ಪ್ರಚಲಿತ (Still living philosophy) ವಾಗಿರುವುದು.

(೧) ಅತಿ ಪ್ರಾಚೀನ ಭಾಷ್ಯಕಾರರೆಂದರೆ ೨೦ನೇಯವರು ಶಂಕರಾಚಾರ್ಯರು,
(೨) ೨೧ನೇಯವರು ರಾಮಾನುಜಾಚಾರ್ಯರು.
(೩) ೨೨ನೇ ಭಾಷ್ಯಕಾರರು ಶ್ರೀಮದಾನಂದತೀರ್ಥರು.

**(೧) ಶ್ರೀಶಂಕರಾಚಾರ್ಯರ ಸಿದ್ಧಾಂತ (ಭಾಷ್ಯಸಾರ) "ಶ್ಲೋರ್ಥೇನ ಪ್ರವಕ್ಷಾಮಿ ಯದುಕ್ತಂಗ್ರಂಥಕೋಟಿಭಿಃ"**

**"ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರ"** ಬ್ರಹ್ಮ ಒಂದೇ ಸತ್ಯ. ಜಗತ್ತು ಮಿಥ್ಯಾ. ಬ್ರಹ್ಮನೇ ಜೀವಭಾವವನ್ನು ಹೊಂದಿರುತ್ತಾನೆ ಎಂದು ಶಂಕರ ಸಿದ್ಧಾಂತವನ್ನು ಅದ್ವೈತವೆನ್ನಲಾಗಿದೆ. ಶಂಕರರ ಸಿದ್ಧಾಂತವನ್ನು ಅವರ ಅನುಯಾಯಿಗಳೊಬ್ಬರು ಸ್ವಲ್ಪ ವಿಸ್ತಾರವಾಗಿ ವಿವರಿಸುತ್ತಾರೆ.

**ವಿವರಣೆ : ಬ್ರಹ್ಮೈಕ ಪರಮಾರ್ಥ ಸತ್ತದಿತರನ್ಮಾಯಯಾ ಮಯತ್ವಾನ್ಮೃಷಾ ।**
**ಬ್ರಹ್ಮೈವೇಕಮುಪಾಧಿ ಬಿಂಬಿತಮತೋ ಜೀವೇಶಭಾವಂಗತಂ ॥**
**ಭ್ರಾಂತಿಃ ಸಂಸ್ಮೃತಿರಸ್ಯ ತತ್ಪ್ರಶಮನಂ ಮುಕ್ತಿಸ್ತದಪ್ಯಾತ್ಮನೋ ।**
**ಬ್ರಹ್ಮೈಕ್ಯಾವಗಮಾತ್ ಶೃತಿಶ್ರವಣಾದಿತ್ಯಾಹುರದ್ವೈತಿನಃ ॥**

**ವಿವರಣೆ :** ಬ್ರಹ್ಮವೊಂದೇ ಪಾರಮಾರ್ಥಿಕ ಸತ್ಯವು. ಬ್ರಹ್ಮ ವ್ಯತಿರಿಕ್ತವಾದ ವಸ್ತು ಸಮಸ್ತವೂ ಮಾಯಾಮಯವಾದ್ದರಿಂದ ಮಿಥ್ಯಾ (ಸುಳ್ಳು) ಭೂತವಾಗಿರುವುದು. ಇನ್ನು ಬ್ರಹ್ಮನೇ ಉಪಾಧಿಯಾಗಿ ಪ್ರತಿಬಿಂಬಿಸುವುದರಿಂದ ಜೀವೇಶ ಭಾವವನ್ನು ಹೊಂದಿರುತ್ತಾನೆ. ಸಂಸಾರವು ಜೀವನ ಭ್ರಾಂತಿ. ಇಂತಹ ಭ್ರಾಂತಿ ತೊಲಗಬೇಕಾದರೆ ವೇದಾಂತ ವಾಕ್ಯ ಶ್ರವಣಾದಿಗಳಿಂದ, ಜ್ಞಾನದಿಂದ ಭ್ರಮೆಯು

ನಿವೃತ್ತಿ ಆಗುವುದೇ ಮುಕ್ತಿ ಮುಕ್ತಿಯು. ಜೀವ ಬ್ರಹ್ಮೈಕ ಭಾವವನ್ನು ತಿಳಿಸುವುದು ವೇದಾದಿ ಶಾಸ್ತ್ರಗಳು.

**(೨) ಶ್ರೀರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಮತ**

**ಶ್ರೀಮಲ್ಲಕ್ಷ್ಮಣಯೋಗಿನಸ್ತು ಭುವನಂಸತ್ಯಂ ತದೀಶಃಶ್ರಿಯಃ ।**
**ಕಾಂತೋ ಬ್ರಹ್ಮ ಸಏವ ಸೋऽಖಿಲತನುಃ ಭಿನ್ನಾಸ್ತತಶ್ಚೇತನಾಃ ॥**
**ಸತ್ಯಾಸಂಸೃತಿರೀಶನಿಗ್ರಹಕೃತಾ ಮುಕ್ತಿಸ್ತು ಭಕ್ತ್ಯಾದಿನಾ ।**
**ತತ್ಪ್ರಾಪ್ತಿಃ ಪರಮೇಪದೇತದನುಭೂತ್ಯಾಸ್ಯೇತಿ ಸಂಚಕ್ಷತೇ ॥**

**ವಿವರಣೆ :** ಲಕ್ಷ್ಮಣಯೋಗಿಗಳ ಪ್ರಕಾರ (ಶ್ರೀರಾಮಾನುಜಾಚಾರ್ಯರು) ಪ್ರಪಂಚವು ಸತ್ಯವೇ. ಪ್ರಪಂಚಕ್ಕೆ ಅಧಿಪತಿಯಾದ ಲಕ್ಷ್ಮೀಪತಿಯೇ ಪರಬ್ರಹ್ಮನು. ಸಮಸ್ತ ಚರಾಚರ ವಸ್ತುಗಳು ಪರಬ್ರಹ್ಮನ ಶರೀರವಾಗಿ ಧರಿಸಲ್ಪಟ್ಟಿದೆ. ಚೇತನಗಳು ಪರಬ್ರಹ್ಮನಿಗಿಂತ ಭಿನ್ನವಾಗಿರುವುದು. ಭಗವಂತನ ಆಜ್ಞಾಗಳನ್ನು ತಿರಸ್ಕರಿಸಿದ ಜೀವರುಗಳಿಗೆ ಜನನ ಮರಣ ಮುಖ್ಯ ರೂಪ ಸಂಸಾರವು ಹೊಂದುವುದು– ಸಂಸಾರವು ಸತ್ಯವೇ. ಇನ್ನು ಸಂಸಾರದಿಂದ ಬಿಡುಗಡೆ ಹೊಂದಲು ಪರಬ್ರಹ್ಮನಲ್ಲಿ ಭಕ್ತಿಯೇ ಮುಖ್ಯ ಉಪಾಯವು– ಪರಬ್ರಹ್ಮನಲ್ಲಿ ಪೂರ್ಣ ಶರಣಾಗತಿಯಿಂದ ಮುಕ್ತಿರೂಪ ಪರಬ್ರಹ್ಮಾನಂದ ಭಾವವನ್ನು ಹೊಂದುವುದು. ಪರಮಾತ್ಮ ಸಮಾನ ಆನಂದವನ್ನು ಪಡೆಯುವುದು.

**(೩) ಶ್ರೀಮದಾನಂದತೀರ್ಥರ ಸಿದ್ಧಾಂತವನ್ನು ಹೀಗೆ ವಿವರಿಸಲಾಗಿದೆ.**

**ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ವತೋ ।**
**ಭಿನ್ನಾಜೀವಗಣಾಃ ಹರೇರನುಚಾರಾಃ ನೀಚೋಚ್ಚ ಭಾವಂಗತಾಃ ॥**
**ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ ।**
**ಹ್ಯಕ್ಷಾದಿತ್ರಿತೀಯಂ ಪ್ರಮಾಣಮಖಲಾಮ್ನಾಯೈಕವೇದ್ಯೋಹರಿಃ ॥**

**ವಿವರಣೆ :** ಶ್ರೀಮನ್ಮಧ್ವಾಚಾರ್ಯರ ಮತಾನುರೀತ್ಯಾ ಕಣ್ಣಿಗೆ ಕಾಣುವ ಜಗತ್ತು ಸತ್ಯವಾದುದು. ಶ್ರೀಹರಿಯು ಈ ಜಗತ್ತಿಗೆ ಸೃಷ್ಟಿಕರ್ತ. ಸಂಹಾರಾದಿಗಳನ್ನೂ ಮಾಡುವವನು. ಜೀವರ ನಿಯಮನ ಜ್ಞಾನಾಜ್ಞಾನ ಬಂಧ ಮೋಕ್ಷದಾತ. ಶ್ರೀಹರಿ ಕರುಣಾಸಮುದ್ರನು. ಅನಂತಾನಂತ ಕಲ್ಯಾಣಗುಣಪೂರ್ಣನು – ಶ್ರೀ ರಮೇಶನಿಗೆ ಸರಿಸಮಾನರಾದವರೇ ಇಲ್ಲವೆಂದ ಮೇಲೆ ಅವನೇ ಸರ್ವೋತ್ತಮನು. ಜೀವರಾಶಿಗಳು, ಪರಮಾತ್ಮನಿಂದ ಭಿನ್ನರು. ಅಲ್ಲದೇ ಅವನ ಕಿಂಕರರು.



ಜೀವರುಗಳಲ್ಲಿ ಉತ್ತಮ, ಅಧಮ ಎಂಬ ತಾರತಮ್ಯವಿದೆ. ಇನ್ನು ಮುಕ್ತಿಯಾದರೋ ಜೀವರುಗಳ ಸ್ವರೂಪಾನಂದ ಭಾವವನ್ನು ಕೂಡಿರುವುದು. ಇಂತಹ ಮುಕ್ತಿ ಲಭಿಸಬೇಕಾದರೆ ಆ ಹರಿಯಲ್ಲಿ ನಿರ್ಮಲವಾದ ಭಕ್ತಿಯಿಂದ, ಅವನ ಪ್ರಸಾದವೇ ಮುಖ್ಯ ಹೇತುವು. ಶ್ರೀಮನ್ನಾರಾಯಣನ ಜ್ಞಾನ ಸರ್ವವೇದಾದಿಗಳ ಶ್ರವಣ ಮನನಾದಿಗಳಿಂದಲೇ ವೇದ್ಯನು. ವೇದಗಳ ಅಧ್ಯಯನ ಮೂರು ಪ್ರಮಾಣಗಳಿಂದ ಮಾಡಬೇಕು. ಈ ಮೂರು ಮುಖ್ಯ ಸಿದ್ಧಾಂತಗಳನ್ನು ಪರಸ್ಪರ ಹೊಂದಾಣಿಕೆ ಇರುವುದಲ್ಲದೆ, ವಿರುದ್ಧವಾಗಿರುವುವು. ಆದರೆ ಇವುಗಳಲ್ಲಿ ಒಂದು ಮಾತ್ರ ಸರಿ. ಸತ್ಯವೆಂದು. ಯಥಾರ್ಥ ಬೋಧವಾಗುವಲ್ಲಿ ಸಂದೇಹವಿಲ್ಲದೇ ಇರುವುದನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಕಂಡುಕೊಳ್ಳಬೇಕು.

ವಿಚಾರ ಮಾಡಿದಾಗ ಪೂರ್ವಾಗ್ರಹವಿಲ್ಲದೇ ವಿಮರ್ಶೆ ಮಾಡಿದಾಗ (ಅಭ್ಯಾಸ ಮಾಡಿದಾಗ) ಮೂರರಲ್ಲಿ ಒಂದು ಸಿದ್ಧಾಂತವು ಮಾತ್ರ ಯಥಾರ್ಥವನ್ನೇ ತಿಳಿಸುವುದಾಗಿ ಸ್ಪಷ್ಟವಾಗಬೇಕು. ಇಂತಹ ಯಥಾರ್ಥ ಬೋಧಕ ಪ್ರಮೇಯವು ಶ್ರೀಮದಾನಂದತೀರ್ಥರ ತತ್ವವಾದ. ಸರ್ವವೇದ, ಉಪನಿಷತ್ತು, ಸ್ಮೃತಿಗಳ ಹಾಗೂ ವೇದವ್ಯಾಸರ ಅಭಿಮತಕ್ಕೆ ಸರ್ವಸಮ್ಮತವೆಂದು ನಿಶ್ಚಯವಾಗಿರುವುದು.

ಹಿಂದೆ ತಿಳಿಸಿದ ಇಬ್ಬರು ಆಚಾರ್ಯರ ಮತವು ಬಾದರಾಯಣನ ಹೃದಯಾಭಿಪ್ರಾಯಕ್ಕೆ ಪ್ರತಿಕೂಲವೆಂದೇ ಸಿದ್ಧವಾಗುವುದು. (ಶ್ರೀ ಶಂಕರರ ಸಿದ್ಧಾಂತವನ್ನು ಅವರ ಅನುಯಾಯಿಗಳಲ್ಲಿ ವಿವಿಧ ವ್ಯಾಖ್ಯಾನಗಳು ಪರಸ್ಪರ ವಿರುದ್ಧವಾಗಿರುವುದು. ಇದರ ವಿವರಣೆ **ಅನುಬಂಧ**ದಲ್ಲಿ ಕಾಣಬಹುದು.)

ಇನ್ನು ಉಪೋದ್ಘಾತವಾದ ನಂತರ ಶ್ರೀಮನ್ಮಧ್ವಾಚಾರ್ಯರು ತಿಳಿಸಿರುವ ಒಂಭತ್ತು **ಪ್ರಮೇಯ ನವಮಾಲಿಕಾ**ಗಳನ್ನು ಸಂಕ್ಷೇಪವಾಗಿ ತಿಳಿಯೋಣ.

ಈ ಪ್ರಮೇಯ ನವಮಾಲಿಕಾಗಳು ಶ್ರೀವ್ಯಾಸರಾಜರಿಂದ ವಿರಚಿತವಾಗಿರುವುದು. ಒಂಭತ್ತು ಪ್ರಮೇಯಗಳು ಶ್ರೀಮನ್ಮಧ್ವಾಚಾರ್ಯರ ಮತಾನುಸಾರವಾಗಿದೆ.

**ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ವತೋ ।**
**ಭಿನ್ನಾಜೀವಗಣಾಃ ಹರೇರನುಚಾರಾಃ ನೀಚೋಚ್ಚ ಭಾವಂಗತಾಃ ॥**
**ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ ।**
**ಹ್ಯಕ್ಷಾದಿತ್ರಿತೀಯಂ ಪ್ರಮಾಣಮಖಲಾಮ್ನಾಯೈಕವೇದ್ಯೋಹರಿಃ ॥**

(೧) ಶ್ರೀಹರಿಯೇ ಸರ್ವೋತ್ತಮನು ಎನ್ನುವುದನ್ನು ಸಪ್ರಮಾಣವಾಗಿ ತಿಳಿಸಲಾಗಿದೆ. **(ಹರಿಃ ಪರತರಃ).** ವ್ಯಾಕರಣ ಪ್ರಕಾರ **(ಪರ ಪರತರ ಪರಮ).** ಪರ ಅಂದರೆ ಶ್ರೇಷ್ಠ, ಅಧಿಕವಾಗಿ **ಪರಮ** ಪ್ರಧಾನ ಶ್ರೇಷ್ಠಕ್ಕಿಂತಲೂ ಉತ್ತಮ. ಇಲ್ಲಿ **ಪರತರ** ಎಂಬ ಪ್ರಯೋಗದಿಂದ Superlative degree = ಉತ್ತಮೋತ್ತಮವೆಂದು ಅರ್ಥವಿದೆ. ಪರಮಾತ್ಮ ಬ್ರಹ್ಮರುದ್ರಾದಿ ಸರ್ವರಿಂದಲೂ ಅತ್ಯುತ್ತಮನು, ವಂದ್ಯನು. ಅಕ್ಷರ ವಾಚ್ಯಳಾದ ಲಕ್ಷ್ಮೀದೇವಿಗಿಂತಲೂ ಅತ್ಯುತ್ತಮನಾದ ಶ್ರೀಮನ್ನಾರಾಯಣನು ಜಗತ್ತಿನ ಸೃಷ್ಟಿಕರ್ತ, ಸಂಹಾರಕರ್ತನೂ ಉಪಲಕ್ಷಣತೆಯೂ ಸಿದ್ಧ್ಯಾದಿ ಅಷ್ಟ (ಅನಂತ) ಕರ್ತನು. ಜ್ಞಾನಾದಿ ಸದ್ಗುಣಗಳಿಂದ ಕೂಡಿರುವವನು. ನಿರ್ದೋಷನು. ಭಗವದ್ಭಕ್ತವತ್ಸಲನು. ವೈಷ್ಣವ ವಿಷ್ಣು ದ್ವೇಷಿಗಳನ್ನು ಸಂಹಾರಕರ್ತನಾದ ಶ್ರೀಲಕ್ಷ್ಮೀಪತಿಯೇ ಅತ್ಯುತ್ತಮನು ಎಂದು ಸಮಸ್ತ ವೇದ ಪುರಾಣಗಳಲ್ಲಿ ಸಾಧಿಸಿರುವುದು. (ಗೀತಾ ೧೫–೧೬–೧೭–೧೮)

(ಅ) ಶ್ರೀಹರಿಯು ಅಮಿತ ಗುಣಪೂರ್ಣನು. ಆದ್ದರಿಂದ ಅವನು ಬ್ರಹ್ಮಶಬ್ದದಿಂದ ಕರೆಯಲ್ಪಡುತ್ತಾನೆ. **ಬೃಹಂತೋಹ್ಯಸ್ಮಿನ್ ಗುಣಾಃ । ಬ್ರಹ್ಮಶಬ್ದಃ ಪರೇವಿಷ್ಣೌನಾನ್ಯತ್ರ ಕ್ವಚಿದಿಷ್ಯತೇ ॥**

(ಆ) **ಯತೋವಾ ಇಮಾನಿ ಭೂತಾನಿ ಜಾಯಂತೆ । ಯೇನ ಜಾತಾನಿ ಜೀವಂತಿ ।**
**ಯತ್ಪ್ರಯಂತ್ಯಭಿಸಂವಿಶಂತಿ । ತದ್ವಿಜಿಜ್ಞಾಸಸ್ವತದ್ಬ್ರಹ್ಮೇತಿ ॥**

ತೈ.ಉ.ಪು–೧೬೪

**ವಿಷ್ಣೋರ್ನುಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾನಿ ನಿಮಮೇರಹಾಂಸಿ**

ಋ.ಅಷ್ಟಕ ೨ ಅಧ್ಯಾಯ–೨ ವ–೨೪

ಶ್ರೀಮನ್ನಾರಾಯಣನ ಸಾಮರ್ಥ್ಯವನ್ನು ಇತ್ಥಂ ಎಂದು ಹೇಳಲಾಗುವುದಿಲ್ಲ. ಬ್ರಹ್ಮಾದಿಗಳು ಮತ್ತು ಸಾಕ್ಷಾತ್ ಲಕ್ಷ್ಮೀದೇವಿಗೂ ಶ್ರೀಹರಿಯ ಗುಣಗಳನ್ನು ಸಂಪೂರ್ಣವಾಗಿ ಎಣಿಸಲಿಕ್ಕೆ ಆಗದಿರುವವನು. ಇಂತಹ ಅಗಣಿತ ಗುಣ ಪರಿಪೂರ್ಣನಾದವನು ವಿಷ್ಣುವೇ ಎಂದು ವೇದವು ಸಾರುತ್ತಿದೆ.

ವಿಷ್ಣು ಎಂದರೆ **ವ್ಯಾಪ್ತ,** ವ್ಯಾಪಕನೆಂದು ಅರ್ಥವಿರುವುದು. ಇಂತಹ ವ್ಯಾಪ್ತತ್ವವು ರುದ್ರಾದಿಗಳಲ್ಲಿಯೂ ಕಾಣಬಹುದಾದ್ದರಿಂದ ನಾರಾಯಣನೇ ಜಗತ್ಸೃಷ್ಟಿಕರ್ತ ಅಂತ ಹೇಗೆ ಸಿದ್ಧವಾಗಿರುವುದು ? ಎನ್ನುವ ಆಕ್ಷೇಪಕ್ಕೆ ಉತ್ತರ. (ಸಮಾಧಾನ)



i) **ಏಕೋನಾರಾಯಣ ಆಸೀನ್ನ್ ಬ್ರಹ್ಮಾನ ಚ ಶಂಕರಃ**

ii) **ವಾಸುದೇವೋ ವಾ ಇದಮಗ್ರ ಮಾಸೀತ್ ನ ಬ್ರಹ್ಮಾ ನ ಚ ಶಂಕರಃ**

(ಋ.ಅ.೫)

ಪ್ರಳಯ ಕಾಲದಲ್ಲಿ ನಾರಾಯಣನೊಬ್ಬನೇ ಸ್ವತಂತ್ರನಾಗಿದ್ದನು. ಆಗ ಬ್ರಹ್ಮಾರುದ್ರರು ಇರಲಿಲ್ಲ. ಶ್ರೀಮನ್ನಾರಾಯಣನು ಜಗತ್ತಿಗೆ ಆಶ್ರಯನು ಅಂದರೆ ಈ ಪ್ರಪಂಚವೆಲ್ಲವೂ ನಾರಾಯಣನನ್ನೇ ಆಶ್ರಯಿಸಿರುವುದು.

**ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಂ** (ಮ.ಹಾ.ನ.ಉ)

**ಏಷಃ ಸರ್ವಃ ಏಷಸರ್ವಗತಃ ಏಷ ಸರ್ವೇಶ್ವರಃ ಏಷೋಽಚಿಂತ್ಯಃ ಏಷಪರಮಃ**

(ಭಾಲ್ಲ.ಶೃತಿ)

**ಸರ್ವಂ ವಿಸೃಜತಿ ಸರ್ವಂ ವಿಲಾಪಯುತಿ = ಅಂತರಸ್ಮಿನ್ನಿವಿಷ್ಟಃ ।** ಶ್ರೀಹರಿಯೇ ಸರ್ವಾಂತರ್ಯಾಮಿ. ಸೃಷ್ಟಿ, ಸ್ಥಿತಿ ಲಯಕರ್ತನು. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ನಾರಸಿಂಹ, ವಾಮನ, ಮತ್ಸ್ಯಾದಿ ರೂಪಗಳು ಇತ್ಯಾದಿ ಅನಂತರೂಪ ಧರಿಸಿರುವವನು, ಅನಾದಿನಿತ್ಯನು, ಪರಿಪೂರ್ಣನು, ನಾಶರಹಿತನು, ಅವ್ಯಯನು. ಮೂಲ ರೂಪಗಳಿದ್ದಂತೆ ಅವತಾರ ರೂಪಗಳಲ್ಲಿ ಸಂಪೂರ್ಣನು.

**ಸರ್ವೋತ್ಕರ್ಷೇ ದೇವದೇವಸ್ಯ ವಿಷ್ಣೋರ್ಮಹಾತಾತ್ಪರ್ಯಂ ನೈವಚನ್ಯತ್ರ ಸತ್ಯಂ। ಅವಾಂತರಂ ತತ್ಪರತ್ವಂ ತದನ್ಯತ್ಸರ್ವಾಗಮಾನಾಂ ಪುರುಷಾರ್ಥಃತತೋಽತಃ।** (ಪೈಂಗೀಶೃತಿ)

**ಅರ್ಥ :** ಬ್ರಹ್ಮಾದಿ ದೇವತೆಗಳಿಗೆ ವಿಷ್ಣುವೇ ತಮಗೆ ಅಧಿಪತಿಯಾಗಿರುವನೆಂದು ಸರ್ವ ವೇದಗಳು ಹರಿ ಸರ್ವೋತ್ತಮತ್ವವನ್ನು ಸಾರುತ್ತಿರುವುದು.

ಮಹಾವರಾಹದಲ್ಲಿ
**ಮುಖ್ಯಂ ಸರ್ವವೇದಾನಾಂ ತಾತ್ಪರ್ಯಂ ಶ್ರೀಪತೇಃ ಪರಂ ।**
**ಉತ್ಕರ್ಷೇತು ತದನ್ಯತ್ರ ತಾತ್ಪರ್ಯಂ ಸ್ಯಾದವಾಂತರಂ ॥**

ವೇದಾದಿ ಶಾಸ್ತ್ರಗಳಲ್ಲಿ ಬ್ರಹ್ಮರುದ್ರ ಇಂದ್ರಾದಿ ದೇವತೆಗಳಿಗೂ ಉತ್ತಮತ್ವವು ಹೇಳಲ್ಪಟ್ಟಿದೆ. ಅಂದ ಮೇಲೆ ಹರಿಯೊಬ್ಬನೇ ಉತ್ತಮನೆಂದು ಹೇಳುವುದು ಅಯುಕ್ತವೆಂದು ಪ್ರಶ್ನಿಸಬಾರದು.

**ಉತ್ತರ :** ಸರ್ವ ವೇದಗಳಿಗೆ ಶ್ರೀಮನ್ನಾರಾಯಣನೇ ಸರ್ವೋತ್ತಮನೆಂದು ತಿಳಿಸುವುದರಲ್ಲೇ ಮುಖ್ಯ ತಾತ್ಪರ್ಯ. ಅನ್ಯರಲ್ಲಿ ಉತ್ತಮತ್ವವು ಅಮುಖ್ಯವಾಗಿದೆ ಎಂದು ತಿಳಿಸುತ್ತದೆ. ನಾರಾಯಣನೇ ಸರ್ವೋತ್ತಮನೆಂದು ಸಾಧಿಸಲು ಇನ್ನೂ ಎರಡು ಪ್ರಮಾಣಗಳನ್ನು ತೋರಿಸುತ್ತಾರೆ.

೧) **ಉತ್ಪತ್ತಿ ಸ್ಥಿತಿ ಸಂಹಾರಾ ನಿಯತಿರ್ಜ್ಞಾನಮಾವೃತ್ತಿಃ ।**
**ಬಂಧಮೋಕ್ಷ್ಣಾ ಚ ಪುರುಷಾದನ್ಯಸ್ಮಾತ್ಸಹರಿರೇಕರಾಟ್ ॥** ಸ್ಕಾಂದ

೨) **ಅಜ್ಞಾನಾಂ ಜ್ಞಾನದೋ ವಿಷ್ಣುಃ ಜ್ಞಾನೀನಾಂ ಮೋಕ್ಷದಶ್ಚಸಃ ।**
**ಆನಂದದಶ್ಚ ಮುಕ್ತಾನಾಂ ಸ ಏವೈಕೋ ಜನಾರ್ದನಃ ॥**

ಸೃಷ್ಟ್ಯಾದಿಗಳು ಶ್ರೀಹರಿಯಿಂದಲೇ ಆಗುವುದು. ಅವನೊಬ್ಬನೊಂದಲೇ ಆಗುವುದು. ಹಾಗೇ ಶ್ರೀಹರಿಯ ಅನುಗ್ರಹದಿಂದ ಅಜ್ಞರಿಗೆ ಜ್ಞಾನಪ್ರದನು. ಹೀಗೆ ಜ್ಞಾನಸಂಪಾದನೆಯಾದವರಿಗೆ ಮೋಕ್ಷದಾತನು. ಮುಕ್ತರಿಗೂ ಆನಂದಪ್ರದನಾದ ಮುಕುಂದನು ಅನಂತನು ಸರ್ವೋತ್ತಮನು.

ಸಂಸಾರದಲ್ಲಿದ್ದ ಭಕ್ತರನ್ನು ವಿಷ್ಣು ಬಂಧನದಿಂದ ಬಿಡಿಸಿ ಅವನ ಪ್ರಸಾದದಿಂದ ಮುಕ್ತಿದಾತನಾದ್ದರಿಂದ ಶ್ರೀಹರಿಯೇ ಸರ್ವೋತ್ತಮನು ಎಂದು ಅನೇಕ ಶೃತಿ ಸ್ಮೃತಿಗಳು ಸಾರುತ್ತಿವೆ. ರುದ್ರದೇವರು ಮುಕ್ತಿದಾತರೆಂದು ಏಕೆ ತಿಳಿಯಬಾರದು?

**ಉತ್ತರ :** ರುದ್ರದೇವರೇ ಹೇಳಿಕೊಂಡಿದ್ದಾರೆ. ''ಭಕ್ತರೇ ಕೇಳಿ. ನಾನು ಭೋಗಪ್ರದನಷ್ಟೇ. ಮೋಕ್ಷ ಕೊಡುವ ಅಧಿಕಾರ ಶ್ರೀಹರಿಯೊಬ್ಬನಿಗೆ'' **''ಅಹಂಭೋಗ ಪ್ರದೋವತ್ಸ ಮೋಕ್ಷಮಿಚ್ಛೇತ್ ಜನಾರ್ದನಾತ್''** ಎಂದು ಹೇಳಿಕೊಂಡಿದ್ದರಿಂದ ಜಗಜ್ಜನ್ಮಾದಿ ಕರ್ತನಾದ ನಾರಾಯಣನೇ ಸರ್ವೋತ್ತಮನೆಂದು ತಿಳಿಸಲು **''ಹರಿಃ ಪರಿತರಃ''** ಎನ್ನುವುದು ಸಾಧಿಸಿದಂತಾಯಿತು.

೨) **ಸತ್ಯಂ ಜಗತ್** – ನಮ್ಮ ಕಣ್ಣಿಗೆ ಪರಿದೃಶ್ಯವಾದ ಜಗತ್ತು ಸತ್ಯವು. ಭಗವಂತನು ಮಾಯಾರೂಪ ಜಗತ್ತನ್ನು ಸೃಷ್ಟಿಸಿಲ್ಲ. Lord Vishnu is not a magician who created this world which ultimately disappeared into nothing.

**ಆಕ್ಷೇಪ :** ಜಗತ್ತು ಮಿಥ್ಯಾ ಅಂತ ಶ್ರೀ ಶಂಕರಾಚಾರ್ಯರು ಹೇಳಿದ್ದಾರೆ. ಅದಕ್ಕೆ ಪ್ರಮಾಣ ಕೊಡುತ್ತಾ **''ಪ್ರಪಂಚೋ ಯದಿ ವಿದ್ಯೇತ ನಿವರ್ತತೆ ನ ಸಂಶಯಃ। ಮಾಯಾಮಾತ್ರ ಮಿದಂ ದ್ವೈತಯದ್ವೈತಂ ಪರಮಾರ್ಥಃ ॥''** (ಮಾಂಡೂಕ ಉ. ೨ ಖಂ. ೯) ಎಂಬುದನ್ನು ತೋರಿಸಿದ್ದಾರೆ.



**ಅರ್ಥ :** ''ಪ್ರಪಂಚವು ಒಂದು ವೇಳೆ ಸತ್ಯವೇ ಆಗಿದ್ದಲ್ಲಿ ನಿವೃತ್ತಿಯಾಗುವುದಿಲ್ಲ. ಇದೆಲ್ಲವೂ ಮಾಯಾಮಾತ್ರವು. ದ್ವೈತದಂತೆ ಅದ್ವೈತವು ಪಾರಮಾರ್ಥಿಕವು.'' ಹೀಗೆ ಕೆಲ ವಾಕ್ಯಗಳಿಂದ ಬ್ರಹ್ಮಜೀವೈಕ್ಯ ಬೋಧನೆ ಇರುವುದು ಎಂಬ ಪ್ರಶ್ನೆಗೆ,

**ಸಮಾಧಾನ :** ಮೇಲಿನ ಉಪನಿಷತ್ತಿನ ವಾಕ್ಯವು ಅಪಾತತಃ ಜಗನ್ಮಿಥ್ಯಾತ್ವವನ್ನು ಸಾದಿಸಲು ಹೊರಟಿದೆ ಎಂದು ಮೇಲಿನ ಅರ್ಥಕ್ಕೆ ಹೊಂದಾಣಿಕೆ ಇರಬಹುದು (ಇದ್ದಂತೆ ಕಾಣುತ್ತದೆ). ಆದರೆ ಶ್ರೀಮದಾಚಾರ್ಯರ ಉಪನಿಷತ್ ಭಾಷ್ಯದಲ್ಲಿ ನಿಜಾರ್ಥ ತಿಳಿಯಬೇಕು. ಜಗತ್ತು ಮಿಥ್ಯಾ ಅಂತ ತಿಳಿಸುವ ಉದ್ದೇಶವಿಲ್ಲ. ಪ್ರತ್ಯಕ್ಷ, ಇತ್ಯಾದಿ ಯಾವ ಪ್ರಮಾಣವೂ ಇರದಿದ್ದಾಗ ಮಿಥ್ಯಾತ್ವವನ್ನು ಹೇಳುವುದು ಕೇವಲ ಕಲ್ಪನಾ. ಅನುಚಿತ. ಅನೇಕ ಸ್ಮೃತಿಗಳು ಸತ್ಯಾತ್ವವನ್ನು ಸಾಧಿಸಲು ನಿರವಕಾಶ ವಾಕ್ಯಗಳು ಸ್ಪಷ್ಟವಾಗಿ ಹೇಳುತ್ತಿವೆ.

ಶ್ರೀಮದಾಚಾರ್ಯರು ಈ ಉಪನಿಷತ್ತಿನಲ್ಲಿರುವ ವಾಕ್ಯಕ್ಕೆ ಭಾಷ್ಯದಲ್ಲಿ ಹೀಗೆ ತಿಳಿಸಿರುತ್ತಾರೆ.

**ತನ್ವಾ ಸ್ವಸ್ವಾಮಿ ಸಂಬಂಧಃ ಪ್ರಪಂಚೋಽಸ ಶರೀರಿಣಃ ।**
**ವಸ್ತುತೋಽಸ್ಯೌ ನಚೈವಾಸ್ತಿ ಪರಮಸ್ಯ ವಶೇಯತಃ ॥**
**ತನ್ವಾದಿಕಸ್ತಥಾಪ್ಯೇಷಹ್ಯಭಿಮಾನಾತ್ ಪ್ರದೃಶ್ಯತೆ ।**
**ಅತಃ ಸ ವಿದ್ಯತ ಇತಿ ಹ್ಯಂಗೀಕಾರೋ ಭವೇದ್ಯದಿ ।**
**ತಥಾಪಿ ಭಗವಜ್ಞಾನಾತ್ಸ ನಿವರ್ತೇದ ಸಂಶಯಃ ॥** (ಬ್ರಹ್ಮತರ್ಕೆ)

**ವಿವರಣೆ :** ಜೀವನಿಗೆ ಇದು ನನ್ನ ಮನೆ, ದೇಹವೆಂಬುವುಗಳ ಮೇಲೆ ಸ್ವಾಮಿತ್ವವು ಸ್ವತಂತ್ರವಾಗಿ ಇರುವುದಿಲ್ಲ. ಕಾರಣ ಅವೆಲ್ಲವೂ ಭಗವದಧೀನವು. ನಾನು ಇವೆಲ್ಲಕ್ಕು ಒಡೆಯ ಎನ್ನುವುದು ಕೇವಲ ಭ್ರಾಂತಿಯಿಂದ ತಿಳಿದಿದ್ದರೂ, ಅಭ್ರಾಂತಿಯು ಪರಮಾತ್ಮನ ವಿಷಯಜ್ಞಾನದಿಂದ ನಾಶವಾಗುವುದು. ಇದು ನಿಶ್ಚಯ [ಪ್ರಪಂಚವು ಮಿಥ್ಯಾ ಅಂತ ಹೇಳಲೂ ಬರುವುದಿಲ್ಲ. ಭಗವದಧೀನವಾದವುಗಳ ಮೇಲೆ ಅಧಿಕಾರ ಜ್ಞಾನವು ಪರಮಾತ್ಮನ ಜ್ಞಾನ. (ಅವನೇ ನಿಜವಾಗಿ ಸ್ವಾಮಿ. ನಾನು ಅಸ್ವತಂತ್ರ)ವೆಂಬ ಅರಿವು ಬಂದಾಗ ಭ್ರಾಂತಿಯು ನಾಶ ಹೊಂದುವುದೇ ವಿನಃ ಅಸತ್ಯವಾದ ಜಗತ್ತು ನಾಶ ಹೊಂದೀತು ಎಂದು ಅರ್ಥವಲ್ಲ]. ಹೀಗೆ ಉಪನಿಷತ್ತಿನ ಮೊದಲ ವಾಕ್ಯದ ವ್ಯಾಖ್ಯಾನವು.

ಖಂಡನತ್ರಯದಲ್ಲಿ ವಿಸ್ತೃತವಾಗಿ ಹೇಳಿದ್ದಾರೆ. ಈ ರೀತಿ ವಿಂಗಡನೆ ಯಾವ

ವೇದ ಶೃತಿ ಪುರಾಣಗಳಲ್ಲಿ ತಿಳಿಸಿಯೇ ಇಲ್ಲದಿದ್ದಾಗ ಕೇವಲ ಊಹಾಪೋಹಗಳಿಂದ ಸಜ್ಜನರನ್ನು ತಪ್ಪು ದಾರಿಗೆ ಕೊಂಡೊಯ್ಯುತ್ತಾರೆ.

ಜಗತ್ತು ಮಿಥ್ಯೆವೆನ್ನುವ ವಿಷಯದಲ್ಲಿ ಪ್ರತ್ಯಕ್ಷ ಅನುಭವಾದಿಗಳಲ್ಲಿ ಪ್ರಮಾಣವೇ ಇರುವುದಿಲ್ಲ. ಪ್ರಮಾಣತ್ರಯಗಳಾದ ಪ್ರತ್ಯಕ್ಷ ಅನುಮಾನ ಆಗಮಗಳೆಲ್ಲವೂ ಸ್ಪಷ್ಟವಾಗಿ ಜಗತ್ತಿಗೆ ಪರಮ ಸತ್ಯವೆಂದೇ ತಿಳಿಸುತ್ತಿರುವಾಗ ಅಂಗೀಕರಿಸಬೇಕು. ಹೀಗೆ ಜಗತ್ತು ಸತ್ಯವೆಂದೇ ಸಿದ್ಧವಾಯಿತು.

ಇಲ್ಲಿಯವರೆಗೆ ಶ್ರೀಮನ್ನಾರಾಯಣನೇ ಸರ್ವೋತ್ತಮ. ಸೃಷ್ಟ್ಯಾದಿಕರ್ತನೆಂದು ತಿಳಿಸಿ ಅಂತಹ ಪರಮಾತ್ಮನು ಸತ್ಯವಾದ ಜಗತ್ತನ್ನೇ ಸೃಷ್ಟಿ ಮಾಡಿದ್ದಾನೇ ಆಗಲಿ ಮಿಥ್ಯಾಭೂತವಾದದ್ದನ್ನು ನಿರ್ಮಿಸಿಲ್ಲವೆನ್ನುವುದನ್ನು ಅನೇಕ ಪ್ರಮಾಣಗಳಿಂದ ಸಾಧಿಸಿ, ಈಗ ಬ್ರಹ್ಮ ಜೀವೈಕ್ಯವನ್ನು ಖಂಡಿಸಲು ಜೀವರ ವಿಷಯ ತಿಳಿಸಲು ಮೂರು ಅಂಶಗಳಾದ ಭಗವಂತನಿಂದ ಅತ್ಯಂತ ಭಿನ್ನರು. ಐಕ್ಯವಿಲ್ಲ. ಜೀವ ಜೀವರಲ್ಲಿಯೂ ಭೇದವಿದೆ. ಜೀವರೆಲ್ಲರೂ ಪರಮಾತ್ಮನ ನಿಯಮ್ಯರು. ಶ್ರೀಹರಿಯ ದಾಸರು, ಅನುಚರರು ಜೀವರುಗಳಲ್ಲಿ ನೀಚ, ಉಚ್ಚ ಭಾವವುಳ್ಳವರು ಎನ್ನುವುದನ್ನು ಸ್ವಲ್ಪ ಸೂಕ್ಷ್ಮವಾಗಿ ವಿಚಾರ ಮಾಡೋಣ.

೩) **ಭೇದೋ ಜೀವಗಣಾಃ ನೀಚೋಚ್ಚ ಭಾವಂಗತಾಃ**

ಜೀವ–ಬ್ರಹ್ಮ ಭೇದ, ಜೀವ–ಜೀವ ಭೇದ, ಜೀವ–ಜಡ ಭೇದ, ಜಡ–ಜಡ ಭೇದ, ಬ್ರಹ್ಮ–ಜಡ ಭೇದ ಎಂದು ಐದು ತತ್ವಗಳನ್ನು ಒಪ್ಪದಿದ್ದಲ್ಲಿ ಉತ್ತಮ, ಅಧಮ, ಪೂಜ್ಯ, ಪೂಜಿತ, ಭಾವವು ಕೊಡುವುದಿಲ್ಲ. ತಾರತಮ್ಯ ಶಾಸ್ತ್ರಸಮ್ಮತವು. ಶೃತಿಗಳಿಂದ ಸಿದ್ಧವಾದ ಭೇದವು ಇಲ್ಲಿ ಸಮರ್ಥಿಸಲಾಗಿದೆ.

ಆದರೆ ಮಾಯಾವಾದಿಗಳ ಪ್ರಕಾರ ಭೇದವು ವ್ಯಾವಹಾರಿಕ, ಪ್ರಾತಿಭಾಸಿಕ ಭೇದವೆಂದು ಹೇಳಲು ಯಾವ ಪ್ರಮಾಣವೂ ಇರುವುದಿಲ್ಲ. ಜೀವ ಬ್ರಹ್ಮ ಭೇದವು ಸಂಸಾರಾವಸ್ಥೆಯಲ್ಲಿ ಮಾತ್ರ. ಇದು ಕೇವಲ ವ್ಯಾವಹಾರಿಕ ಭೇದ. ಮುಕ್ತಿಯಲ್ಲಿ ಜೀವಬ್ರಹ್ಮ ಐಕ್ಯವಿರುವುದು ಪಾರಮಾರ್ಥಿಕ ಸತ್ಯವು. ಈ ವಿವರಣೆ ಅತ್ಯಂತ ಅಪ್ರಮಾಣಿಕ, ಶಾಸ್ತ್ರವಿರುದ್ಧವು. ಸಂಸಾರದಲ್ಲಿಯೂ, ಮುಕ್ತಿಯಲ್ಲಿಯೂ ಯಥಾರ್ಥ ಭೇದವಿರುವುದು ಎಂಬುದನ್ನು ಪ್ರತ್ಯಕ್ಷ ಅನುಮಾನ ಆಗಮಗಳಿಂದ ಸಿದ್ಧವಿರುವಾಗ ಐಕ್ಯ ಬೋಧನೆಯು ಪ್ರಮಾಣ ವಿರುದ್ಧವು.



**ಆಕ್ಷೇಪ :** ಹಾಗಾದರೆ ಅಥರ್ವ ಉ.ನಲ್ಲಿ (೫ ಖಂಡ ಮಂತ್ರ ೭)

**ಗತಾಃ ಕಲಾಃ ಪಂಚದಶ ಪ್ರತಿಷ್ಠಾ ದೇವಾಶ್ಚಸರ್ವೇಪ್ರತಿದೇವತಾಸು ।**
**ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ ಪರೇಽವ್ಯಯೇ ಸರ್ವ ಏಕೀಭವಂತಿ**

ಕಲಾಭಿಮಾನಿ ದೇವತೆಗಳ ಸಂಗಡ ಭಗವಂತನಲ್ಲಿ ಸಾನ್ನಿಧ್ಯವೆನ್ನುವುದನ್ನು ತಿಳಿಸುತ್ತದೆ.

ಕಲಾಭಿಮಾನಿ ದೇವತೆಗಳು ಯಾರು ? = ೧. ಪ್ರಾಣ – ೨. ಶ್ರದ್ಧಾ – ೩. ಆಕಾಶ – ೪. ವಾಯು – ೫. ಜ್ಯೋತಿಷ್ – ೬. ಜಲ – ೭. ಪೃಥಿವಿ – ೮. ಇಂದ್ರಿಯ – ೯. ಮನಸ್ಸು – ೧೦. ಅನ್ನ – ೧೧. ವೀರ್ಯ – ೧೨. ತಪಸ್ಸು – ೧೩. ಮಂತ್ರ – ೧೪. ಶ್ಲೋಕ – ೧೫. ನಾಮ ಈ ಹದಿನೈದು ಕಲೆಗಳಿಗೆ ಕ್ರಮವಾಗಿ ೧. ಪ್ರಾಣ – ೨. ವಾಣಿ – ೩. ಗಣಪತಿ – ೪. ಮರುತ್ – ೫. ಅಗ್ನಿನಾಮಕ ಪಾವಕ – ೬. ಬುಧ – ೭. ಶನಿ – ೮. ಇಂದ್ರ – ೯. ರುದ್ರ – ೧೦. ಚಂದ್ರ – ೧೧. ವರುಣ – ೧೨. ವಹ್ನಿ – ೧೩. ಸ್ವಾಹಾ – ೧೪. ಪರ್ಜನ್ಯ – ೧೫. ಉಷಾ ಕ್ರಮವಾಗಿ ನಿಯಾಮಕರು. ಇಷ್ಟು ಹೇಳಿ ಮುಕ್ತಿಯಲ್ಲಿಯೂ ಉತ್ತಮರಾದವರು ಅವರಿಗಿಂತ ಕೆಳಗಿನವರನ್ನು ನಿಯಮಿಸುತ್ತಾರೆ. ಎಲ್ಲಾ ಕರ್ಮಾಭಿಮಾನಿ ದೇವತೆಗಳು, ಜೀವರು ಎಲ್ಲರೂ ಶ್ರೀಹರಿಯನ್ನು ಪ್ರವೇಶಿಸಿ ಪರಮಾತ್ಮನಂತೆ ದುಃಖರಹಿತ ಆನಂದವನ್ನು ಅನುಭವಿಸುತ್ತಾರೆ. ಹರಿಯ ಸಾನ್ನಿಧ್ಯದಲ್ಲಿ ಒಂದೇ ಸ್ಥಾನದಲ್ಲಿ ವಾಸುಮಾಡುತ್ತಾರೆ ಎಂದು ಉಪನಿಷತ್ತಿನ ಅರ್ಥ. ಇದಕ್ಕೆ ವ್ಯತಿರಿಕ್ತವಾಗಿ ಅರ್ಥೈಸುವುದು ಅಪ್ರಮಾಣ. ಏಕೆಂದರೆ ಶ್ರೀಹರಿಯಲ್ಲಿ ಎಲ್ಲರೂ ಐಕ್ಯವನ್ನು ಹೊಂದುತ್ತಾರೆ ಎಂದು ಹೇಳಿ ಅಪಾರ್ಥ ಮಾಡಿರುವುದು ಪ್ರಮಾಣ ವಿರುದ್ಧ.

**''ಏಕೀ ಭವಂತಿ''** ಒಂದೇ ಆಗುತ್ತಾರೆ ಅಂತ ಅರ್ಥವು ಸರಿಯಲ್ಲ. ಐಕ್ಯವೆಂದರೆ ಸ್ಥಾನೈಕ್ಯ. ಮತ್ಯೈಕ್ಯವೆಂದಿದೆ.

೧. **''ಏಕೀ ಭೂತಾತು ಸಾಸೇನಾ ಪಾಂಡವಾನಭ್ಯ ವರ್ತತಾ''** ಪಾಂಡವರು ಕುರುಕ್ಷೇತ್ರದಲ್ಲಿ ಕೌರವ ಸೈನ್ಯವು ಐಕ್ಯವಾಗಿ ಎದುರುಗೊಂಡರು ಎಂದು ಮೇಲಿನ ಅರ್ಥ. ಆದರೆ ಕೌರವ ಸೈನ್ಯವು ಒಂದೇ ಪ್ರದೇಶದಲ್ಲಿ ಸೇರಿದ್ದರು ಎಂಬಂತೆ ಸ್ಥಾನೈಕ್ಯವನ್ನೆ ಸ್ವೀಕರಿಸಬೇಕು. ಇಲ್ಲವಾದರೆ ಕೌರವ ಸೈನ್ಯವೆಲ್ಲವೂ ಐಕ್ಯವಾಯಿತು ಅಂತ ಹೇಳಿದಾಗ ಎಷ್ಟು ಅಪ್ರಮಾಣ ಅನುಚಿತ !

೨. **ಜೀವಸ್ಯ ಪರಮೈಕ್ಯಂ ತು ಬುದ್ಧಿಸಾರೂಪ್ಯ ಮೇವತು ।**
**ಏಕಸ್ಥಾನಾ ನಿವಾಸೋವಾ ವ್ಯಕ್ತಿಸ್ಥಾನಮಪೇಕ್ಷ್ಯಸಃ ॥**
**ನಸಾರೂಪ್ಯೈಕತಾ ತಸ್ಯ ಮುಕ್ತಸ್ಯಾಪಿವಿರೂಪತಃ ।**
**ಸ್ವಾತಂತ್ರ ಪೂರ್ಣತೇಽಲ್ಪತ್ವಪಾರತಂತ್ರೇ ವಿರೂಪತಃ ॥** (ಪರಮಸ್ಮೃತಿಃ)

**ವಿವರಣೆ :** ಜೀವರು ಪರಮಾತ್ಮನಿಂದ ಐಕ್ಯವೆಂದರೆ ಪರಮಾತ್ಮನ ವಿಷಯವಾಗಿ ಜ್ಞಾನಿಗಳಿಗೆ ಸಮಬುದ್ಧಿ ಉಳ್ಳವರು ಎಂದು ತಿಳಿಯಬೇಕು. ಒಂದೇ ಸ್ಥಾನದಲ್ಲಿ (ಪ್ರದೇಶದಲ್ಲಿ) ಆವಾಸವೆಂದೇ ತಿಳಿಯಬೇಕು. ಮುಕ್ತರಿಗೂ ವಿರೂಪ (ಅನುರೂಪವಲ್ಲದ)ವಾದ್ದರಿಂದ ಪರಮಾತ್ಮನ ಸ್ವರೂಪವೆಂದಲ್ಲ. ಬ್ರಹ್ಮನು ಸ್ವತಂತ್ರನು. ಪೂರ್ಣಾನಂದಾದಿಗುಣವಿಶಿಷ್ಟನು. ಜೀವನಾದರೋ (ಮುಕ್ತಿಯಲ್ಲಿಯೂ) ಅಸ್ವಾತಂತ್ರ್ಯತ್ವ, ಅಲ್ಪಜ್ಞತ್ವ, ಪರಾಧೀನತ್ವವಿರುವಾಗ ಐಕ್ಯವಾಗುವುದು ಎಂದು ಹೇಳುವುದು ನಿರವಕಾಶ ಶೃತಿಗೆ ಅಪಾರ್ಥ ಮಾಡುವುದರಿಂದ ಪ್ರಮಾದವೇ ಆಗುವುದು. ಜೀವಬ್ರಹ್ಮ ಭೇದವೇ ಉಚಿತವು ಹಾಗೂ ಶಾಸ್ತ್ರಸಮ್ಮತವು.

೩. **ಸರ್ವೇವೇದಾ ಹರೇರ್ಭೇದಂ ಸರ್ವಸ್ಮಾಜ್ಞಾಪಯಂತಿಹಿ** (ನಾರಾಯಣ ಶೃತಿಃ)

ಸಮಸ್ತವಾದ ವಸ್ತುಗಳಿಂದ ಜೀವೇಶ್ವರ ಭೇದವನ್ನೇ ತಿಳಿಸುತ್ತಿರುವ ವೇದಗಳು.

೪. **ಯದಾಪಶ್ಯಃ ಪಶ್ಯತೇ ರುಗ್ಮವರ್ಣಂ ಕರ್ತಾರಮೀಶಂಪುರುಷಂ ಬ್ರಹ್ಮಯೋನಿಮ್ । ತದಾ ವಿದ್ವಾನ್ ಪುಣ್ಯ ಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯ ಮುಪೈತಿ॥** (ಅಥರ್ವ ೫-೩)

ಈ ಉಪನಿಷತ್ತಿನ ಕೊನೆಗೆ **"ಪರಮಂ ಸಾಮ್ಯ ಮುಪೈತಿ"** ಎಂಬ ವಾಕ್ಯಕ್ಕೆ ರಾಮಾನುಜೀಯರ ಪ್ರಕಾರ ಯಾವಾಗ ಮುಕ್ತರು ಭಂಗಾರ ವರ್ಣವಿದ್ದ ಬ್ರಹ್ಮನನ್ನು ನೋಡುತ್ತಾರೆ. ಕೂಡಲೇ ಎಲ್ಲ ಪಾಪ ಪುಣ್ಯಗಳು ನಾಶವಾಗಿ ಸಮಾನಾಂದಾನುಭವವನ್ನು ಪಡೆಯುತ್ತಾರೆ ಎಂದು ಹೇಳುತ್ತಾರೆ. ಇದೂ ಸಹ ಅಪ್ರಮಾಣ (ಇದರಿಂದ ಜೀವನು ಬ್ರಹ್ಮನೇ ಆಗುತ್ತಾನೆ. ಇದನ್ನೇ ವಿಶಿಷ್ಟಾದ್ವೈತ ಎನ್ನಲಾಗಿದೆ.)

**ಸಾಮ್ಯಮುಪೈತಿ** ಎಂಬುದಕ್ಕೆ ಶ್ರೀಮದಾಚಾರ್ಯರು ಹೀಗೆ ತಿಳಿಸುತ್ತಾರೆ. ಆ ಮತವೂ ಅದ್ವೈತಮತವಾದವನ್ನು ಒಂದರ್ಥದಲ್ಲಿ ಅಂಗೀಕರಿಸಿದೆ ಎಂದು ಹೇಳಬಹುದು. ಈ ಉಪನಿಷತ್ತಿನಲ್ಲಿ ಮೂರು ಮುಖ್ಯ ವಾಕ್ಯಗಳಿವೆ.



ಅ) ವಿದ್ವಾನ್ ಪುಣ್ಯಪಾಪೇ ವಿಧೂಯ.

ಆ) ನಿರಂಜನಂ

ಇ) ಪರಮಂ ಸಾಮ್ಯಮುಪೈತಿ

**ಅ)** ವಿದ್ವಾನ್ ಜ್ಞಾನಿಯು (ಅಪರೋಕ್ಷ ಜ್ಞಾನಿಯು) ಈವರೆವಿಗೂ ಸಂಪಾದಿಸಿದ ಅನಿಷ್ಟ ಕರ್ಮ ರೂಪ ಪುಣ್ಯವನ್ನು, ಅಪ್ರಾರಬ್ಧ ಪಾಪರಾಶಿಯನ್ನು ಕಳೆದುಕೊಂಡಂತಾಗಿ.

**ಆ) ನಿರಂಜನಂ** untinged free from falsehood ನಿರ್ದೋಷನಾದ ಪರಬ್ರಹ್ಮನನ್ನು ಯಾವಾಗ ನೋಡುತ್ತಾನೋ ಅಂತಹ ಜ್ಞಾನಿಯು ಸರ್ವ ಪಾಪಗಳನ್ನು ಕಳೆದುಕೊಂಡವನಾಗಿ ನಿತ್ಯ ನಿರ್ದುಖಾ ಪೂರ್ಣ ಆನಂದವನ್ನು ಆನಂದ ಸ್ವರೂಪನಾದ ಬ್ರಹ್ಮನ ಸಾಮ್ಯವನ್ನು ಪಡೆಯುತ್ತಾನೆ.

**ಇ)** ಇಲ್ಲಿ ಸಾಮ್ಯ ಅಂದರೆ ಬ್ರಹ್ಮಜ್ಞಾನಿಗೆ ಯೋಗ್ಯವಾದ ಆನಂದರೂಪ ಸುಖವನ್ನು ಹೊಂದುತ್ತಾನೆ ವಿನಃ ಪರಬ್ರಹ್ಮನಂತೆ ಪೂರ್ಣಾನಂದಾದಿ ಸ್ವರೂಪವನ್ನು ಹೊಂದುವುದಿಲ್ಲ, ಇಲ್ಲವಾದರೆ ಹಿಂದೆ ತಿಳಿಸಿದ ಐಕ್ಯವೆಂದು ಹೇಳಿದಂತಾಗುವುದು. ಇದು ಸರ್ವಥಾ ಅಪ್ರಮಾಣ. ಸಮ ಎಂದರೆ ಸಮೀಪ, ಹತ್ತಿರ. ಮುಕ್ತಿಯೂ ನಾಲ್ಕು ವಿಧ. **ಸಾಲೋಕ್ಯ, ಸಾಮೀಪ್ಯ, ಸಾರೋಪ್ಯ ಮತ್ತು ಸಾಯುಜ್ಯ. ಸಾಮೀಪ್ಯ** – ಶ್ರೀಹರಿಮಂದಿರದ ಅತಿ ಹತ್ತಿರವೆಂದೇ ಅರ್ಥ.

ಶ್ರೀರಾಮಾನುಜೀಯರು ಮಾಯಾವಾದವನ್ನು ಖಂಡಿಸಿದರಾದರೂ ಕೊನೆಗೆ ಅವರ ಸಿದ್ಧಾಂತವನ್ನು ಇನ್ನೊಂದು ರೀತಿಯಿಂದ ಜೀವ ಬ್ರಹ್ಮೈಕ್ಯವನ್ನು ಹೇಳಿದರು. ಜೀವ ಬ್ರಹ್ಮ ಭೇದವನ್ನು ತಿಳಿಸುವ ಶೃತಿ ಸೂತ್ರಗಳು ಸ್ಮೃತಿಗಳಿಂದ ತಿಳಿಸಲಾಗುವುದು.

೧) **ದ್ವಾಸುಪರ್ಣಾಸಯುಜಾಸಖಾಯಾ ಸಮಾನಂವೃಕ್ಷಂ ಪರಿಷಸ್ಯಜಾತೆ ।**
**ತಯೋರನ್ಯಃ ಪಿಪ್ಪಲಂ ಸ್ವಾಡ್ವತ್ತ್ಯನಶ್ನನ್ನನ್ಯೋಽಭಿಚಾಕಶೀತಿ ॥**
(ಅಥರ್ವ ೫-೧ ಯ.ವೇ. ಅ-೨.೩.೧೫)

ಜೀವನು ವೃಕ್ಷ, ಫಲವನ್ನು (ಕರ್ಮರೂಪ ಸಾರಾಸಾರ) ಅರುಚಿಯಾಗಿದ್ದರೂ ರುಚಿಯಿದೆ ಅಂತ ಸೇವಿಸುತ್ತಾ ಕೃಶನಾಗುತ್ತಾನೆ. ಆದರೆ ಅದೇ ಗಿಡವಲ್ಲದೆ ಪರಮಾತ್ಮನೆಂಬ ಮತ್ತೊಂದು ಪಕ್ಷಿಯು ವೃಕ್ಷಫಲವನ್ನು ಸ್ವೀಕರಿಸದೇ ಕೃಶನಾಗದೇ ಇರುತ್ತಾನೆ / ದೃಢಕಾಯನಾಗಿರುತ್ತಾನೆ. ಜೀವನೆಂಬ ಒಂದು ಪಕ್ಷಿ ತಾನು ಮಾಡಿದ ಕರ್ಮಫಲಾನುಭವ ರೂಪ ಹಣ್ಣನ್ನು ತಿನ್ನುತ್ತಾ ದಿನೇ ದಿನೇ ಕೃಶವಾಗುವುದು.

ಭಗವಂತನೋ ಆ ವೃಕ್ಷ (ಶರೀರ)ದಲ್ಲಿ ಇದ್ದರೂ ಜೀವನಿಂದ ಮಾಡಿದ ಕರ್ಮಫಲವನ್ನು ಸ್ವೀಕರಿಸದೇ ಶಶ್ವದೇಶ ಪ್ರಕಾರನಾಗಿ ಪ್ರಕಾಶಿಸುತ್ತಾನೆ.

೨) **ಸತ್ಯ ಆತ್ಮಾ ಸತ್ಯೋ ಜೀವಃ ಸತ್ಯಂ ಭಿದಾ ಸತ್ಯಂ ಭಿದಾ ॥**

ಪರಮಾತ್ಮನೂ ಜೀವನೂ ಸತ್ಯರು. ಭೇದವೂ ಸತ್ಯವು ಎಂದು ಪೈಂಗೀಶೃತಿ ಘಂಟಾಘೋಷವಾಗಿ ಭೇದವನ್ನೇ ಸಾರುತ್ತದೆ.

೩) **ಓಂ ಭೇದವ್ಯಪದೇಶಾಚ್ಚ** ಬ್ರ.ಸೂ. ೧-೧-೧೭
**ಓಂ ಭೇದವ್ಯಪದೇಶಾಚ್ಚಾನ್ಯಃ** ಬ್ರ.ಸೂ. ೧-೧-೨೧
**ಓಂ ಭೇದ ವ್ಯಪದೇಶಾತ್** ಬ್ರ.ಸೂ. ೧-೩-೫
**ಓಂ ಸ್ಥಿತ್ಯದನಾಭ್ಯಾಂಚ** ಬ್ರ.ಸೂ. ೧-೧-೩-೭
**ಓಂ ಪೃಥಗುಪದೇಶಾತ್** ಬ್ರ.ಸೂ. ೨-೩-೨೮. ಹೀಗೆ ಬ್ರಹ್ಮಸೂತ್ರಗಳು ಭೇದವನ್ನೇ ಹೇಳುತ್ತಿರುವುದು. ಜೀವಬ್ರಹ್ಮನಿಂದ ಅತ್ಯಂತ ಭಿನ್ನನು ಎಂದು ತಿಳಿಸುವುದು.

**ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ** (ಗೀತಾ ೧೫)

ಇಂತು ಭೇದ ಪ್ರತಿಪಾದಕಗಳಾದ ನೂರಾರು ನಿರವಕಾಶ ಶೃತಿ ಸ್ಮೃತಿಗಳು ಸಾರುತ್ತಿರುವಾಗ ಜೀವ ಬ್ರಹ್ಮೈಕ್ಯವನ್ನು ತಿಳಿಸಲು ಒಂದಾದರೂ ಶೃತಿಗಳಲ್ಲಿ ಕಾಣಲಾಗದು.

## ನೀಚೋಚ್ಚ ಭಾವಂಗತಾಃ

(ತಾರತಮ್ಯಂಚ ಮುಕ್ತಾನಾಂ) - ಅನುಬಂಧ ೨

ದೇವತೆಗಳಲ್ಲಿ ಚತುರ್ಮುಖ ಬ್ರಹ್ಮದೇವರಿಂದ ಆರಂಭಿಸಿ ತೃಣಕಾಷ್ಟ ಜೀವರವರೆಗೆ ತಾರತಮ್ಯವಿರುವುದು. ನೀಚೋಚ್ಚ ಭಾವ ಅಂದರೇನು ? ನೀಚ = ಅಧಮ, ಕೆಳದರ್ಜೆಯ ಮನುಷ್ಯ ಎಂದು ನಿಘಂಟುವಿನ ಅರ್ಥ. ಆದರೆ ಶಾಸ್ತ್ರದ ಭಾಷೆಯಲ್ಲಿ ಅವರು = ಶ್ರೇಷ್ಠನಾಗದವನು - ತಾರತಮ್ಯವಾಗಿ - ಉತ್ತಮರು, ಮಧ್ಯಮರು, ಅಧಮರೆಂದೇ ಇರುವುದು. ಜ್ಞಾನ, ಬಲ, ವೀರ್ಯ, ಸಂಪತ್ತು ಇತ್ಯಾದಿಗಳನ್ನು ಹೊಂದಿದವರು ಉತ್ತಮರು. ಇವುಗಳನ್ನು ಹೊಂದದೇ ಇರುವವರನ್ನು ಅನುತ್ತಮರು. ಹೀಗೆ ಕರೆಯಲಾಗಿದೆ. (ಅವರವರು ನೀಚರು)



ಈ ರೀತಿ ತಾರತಮ್ಯವು ಇವತ್ತಿಗೂ ಲೋಕಾನುಭವವಿದೆ. ಎಲ್ಲರೂ ಒಂದೇ ಅಂತ ಹೇಳುವವರೇ ಅನುಷ್ಠಾನಕ್ಕೆ ತಂದಿರುವುದಿಲ್ಲ. ಇದನ್ನೇ Socialism ಅಂತ ಹೇಳಬಹುದು. (ಸಾಮ್ಯವಾದ). ಶ್ರೀಮದಾನಂದತೀರ್ಥರೊಬ್ಬರೇ Socialism ಬಗ್ಗೆ ಸ್ಪಷ್ಟವಾಗಿ ತಿಳಿಸಿ ಪ್ರತಿಪಾದಿಸಿದ್ದು.

Socialism ಅಂದರೇನು ? Aldaus Huckley ಹೇಳುತ್ತಾನೆ. Socialism is a Social order, a system to be adopted to make a human society function in an orderly manner. It is a harmonious method for peaceful society to build. In short, this system imparts an important philosophy "each according to his Capacity and each according to his Need" If put into practice, peaceful co-existence will bring and ensures equal opportunity to participate in building a Social Society.

ಅಂದರೆ ಲೋಕದಲ್ಲಿ ಜನರು ತಮ್ಮ ತಮ್ಮ ಯೋಗ್ಯತೆ ಅಗತ್ಯಗಳಿಗನುಸಾರ ಸಂಪತ್ತನ್ನು ಹಂಚಿಕೊಳ್ಳಬೇಕು. ಇದು ಲೋಕಾನುಭವ. ಹೀಗೆ ತಾರತಮ್ಯವಿದ್ದರೇನೇ ಜಗತ್‌ಚಕ್ರ ಸುಗಮವಾಗಿ ಸಾಗುವುದು. ಈ ಸಿದ್ಧಾಂತವನ್ನೇ ಶ್ರೀಮದಾಚಾರ್ಯರು ನೀಚ - ಉಚ್ಚ (ತಾರತಮ್ಯ)ವೆಂದು ಸಾಧಿಸಿದರು. ಕೆಲವರು ಸಮತಾವಾದಿಗಳೆಂದು ಹೇಳಿಕೊಂಡವರು ಶ್ರೀಮಧ್ವರ ಅಭಿಮತವನ್ನು ಟೀಕೆ ಮಾಡಿ ಸಮಾಜವನ್ನು ಒಡೆಯುವ ಸಿದ್ಧಾಂತ ಅಂತ ನಿಂದಿಸಿದರು. ಆದರೆ ಅವರಿಗೆ ಟೀಕೆ ಮಾಡಿ ನಾವೆಲ್ಲಾ (ಮಾನವರೆಲ್ಲಾ) ಒಂದೇ ಸಮ ಅಂತ ರಮಣೀಯವಾಗಿ ಉಪನ್ಯಾಸ ಮಾಡಿದರೇ ಆಗಲಿ ವಸ್ತುತಃ ಅವರೆಲ್ಲ ನೀಚ-ಉತ್ತಮ ಪ್ರಕಾರ ಅನುಷ್ಠಾನ ಮಾಡುತ್ತಾರೆ.

ಎಲ್ಲರೂ ಒಂದೇ ಆಗಿದ್ದಲ್ಲಿ ದೇಶಕ್ಕೆ ರಾಷ್ಟ್ರಪತಿ ಒಬ್ಬನೇ ಏಕೆ ಬೇಕು ? ಪ್ರಜಾರಾಜ್ಯ ಪ್ರಜೆಗಳೆಲ್ಲಾ ರಾಜರೇ ಆದರೆ ಲೋಕಸಭಾ ಸದಸ್ಯರೇಕೆ ಬೇಕು?

ದೊಡ್ಡವರು ದೊಡ್ಡವರೇ. ಕಿರಿಯರು ಕಿರಿಯರೇ.... ಇದು Practical. ಶ್ರೀಮದಾಚಾರ್ಯರನ್ನು ಬಿಟ್ಟು ಅನ್ಯರು ತಪ್ಪು ವ್ಯಾಖ್ಯಾನ ಮಾಡಿ ದೇಶದ ಅಧೋಗತಿಯ ಕಡೆಗೆ ಕೊಂಡೊಯ್ಯುತ್ತಾರೆ. ಈ ರೀತಿ ತಾರತಮ್ಯ ಮಾನವ ಲೋಕದಲ್ಲಷ್ಟೇ ಅಲ್ಲದೆ ದೇವಲೋಕದಲ್ಲಿಯೂ ಕಾಣುತ್ತೇವೆ.

ಇದನ್ನು ಬಿಟ್ಟು ಜೀವರೆಲ್ಲಾ ಬ್ರಹ್ಮರೇ ಆಗುತ್ತಾರೆ ಎನ್ನುವ ವಾದ ಅಪ್ರಮಾಣ.

ಅನುಭವ ವಿರೋಧ. ಶೃತಿ ಸ್ಮೃತಿಗಳಲ್ಲಿ ಸ್ಪಷ್ಟವಾಗಿ ದೇವತೆಗಳಲ್ಲಿಯೂ ಆನಂದ ತಾರತಮ್ಯವಿರುವುದೆಂದು ತೈತ್ತರೀಯದಲ್ಲಿ ತಿಳಿಸಲಾಗಿದೆ.

ಶ್ರೀಲಕ್ಷ್ಮೀಪತಿಯು ಸಮಸ್ತ ದೇವತೆಗಳಿಗಿಂತ ಅತ್ಯುತ್ತಮನು. **ಸಾಕಾಷ್ಠಾಸಾಪರಾಗತಿಃ** (ಕಾಠಕ)

ಭಗವಂತನಿಗೆ ಸಮಾನರು ಇಲ್ಲವೇ ಇಲ್ಲ.

**ತತ್ಸಮೋನಾಸ್ತಿ ಪರಮೋಹರಿರೇವ ನ ಚಾಪರಃ ।**
**ಮುಕ್ತಾನಾಂ ಪತಯೋದೇವಾಃ ದೇವಾನಾಂಚ ಪ್ರಜಾಪತಿಃ ।**
**ತಸ್ಯ ವಿಷ್ಣುರ್ನರ್ಚೈವೇದಂ ಪಾರಾವರ್ಯಂ ವಿನಶ್ಯತಿ ॥**

ಮುಕ್ತರಿಗೆ ದೇವೇಂದ್ರಾದಿ ದೇವತೆಗಳು ಉತ್ತಮರು. ನಿಯಾಮಕರು. ಇಂದ್ರಾದಿ ದೇವತೆಗಳಿಗೆ ಚತುರ್ಮುಖ ಬ್ರಹ್ಮದೇವರು. ಬ್ರಹ್ಮದೇವರಿಗೆ ಲಕ್ಷ್ಮೀಪತಿಯಾದ ನಾರಾಯಣನು ಸರ್ವೋತ್ತಮನು, ನಿಯಾಮಕನು. ಹೀಗೆ ಮುಕ್ತಿಯಲ್ಲಿಯೂ ಈ ರೀತಿ ನೀಚ, ಉತ್ತಮ ಭಾವವು ನಾಶ ಹೊಂದುವುದಿಲ್ಲ. ಅಂದ ಮೇಲೆ ಲೋಕದಲ್ಲಿಯೂ ಸರ್ವದಾ ತಾರತಮ್ಯ ಇರುವುದು, ಇರಬೇಕು.

**ತಾರತಮ್ಯ ಪರಿಜ್ಞಾನಾದನುತ್ಥಾನಂ ತಮೋ ವ್ರಜೇತ್ ॥**

ತಾರತಮ್ಯವನ್ನು ತಿಳಿಯದೇ ಬೊಗಳುವರು ನಿತ್ಯ ನರಕವನ್ನು ಹೊಂದುತ್ತಾರೆ. ತಾರತಮ್ಯ ಜ್ಞಾನದಿಂದ ಪುರುಷಾರ್ಥಗಳು ಸಿಗುವುದು. ಆದ್ದರಿಂದ ತಾರತಮ್ಯ ಜ್ಞಾನ ಅವಶ್ಯ ಪಡೆದು ಪಾಲಿಸಿದರೆ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗುತ್ತಾರೆ. ತಾರತಮ್ಯ ಮಾನವರಿಂದ ಮೊದಲುಗೊಂಡು ಶ್ರೀಮನ್ನಾರಾಯಣನ ಪರ್ಯಂತ ಕೋಷ್ಟಕದಲ್ಲಿ ಕಾಣಬಹುದು (ಅನುಬಂಧ – ೨)

## ಹರೇರನುಚರಾಃ

ಸಮಸ್ತ ಜೀವರುಗಳು ಬ್ರಹ್ಮದೇವರಿಂದ ಮೊದಲ್ಗೊಂಡು ಮನುಷ್ಯ ಪರ್ಯಂತ ಎಲ್ಲರೂ ಶ್ರೀಹರಿಯ ಸೇವಕರು. ಪರಮಾತ್ಮನೇ ನಿಯಾಮಕನು. ಜೀವರು ಶ್ರೀಭಗವಂತನು ದಾಸಾನುದಾಸರು.

ಆದರೆ ಕೆಲವರು ಶಿವನ ದಾಸರೆಂದು, ಇನ್ನೂ ಕೆಲವರಿಗೆ ಶಕ್ತಿಯ ದಾಸರು. ಗಣಪತಿಯ ದಾಸರೆಂದೂ ಇನ್ನೂ ವಿಚಿತ್ರವೆಂದರೆ ಭದ್ರಕಾಳಿಯ ದಾಸರೆಂದೂ,



ಸತ್ಯಸಾಯಿ ಬಾಬಾ ದಾಸರೆಂದೂ, ಅಯ್ಯಪ್ಪನ ದಾಸರೆಂದೂ ತಮ್ಮ ಮನಬಂದಂತೆ ಕೇಳಿ ಅವರನ್ನು ಸರ್ವೋತ್ತಮತ್ವೇನ ಆರಾಧಿಸುತ್ತಾರೆ. ಎಂತಹ ವಿಚಿತ್ರ ಕಲ್ಪನೆ. ಇವೆಲ್ಲವೂ ಪ್ರಮಾಣ ವಿರುದ್ಧ, ಶಾಸ್ತ್ರ ವಿರುದ್ಧ. ಶ್ರೀಹರಿಯನ್ನು ಬಿಟ್ಟರೆ ಬಾಕಿ ಯಾರಿಗೂ ಉತ್ತಮತ್ವ ಕೊಡುವುದಿಲ್ಲ.

ಅಲ್ಲದೇ ಜೀವರೇ ಬ್ರಹ್ಮ ಸ್ವರೂಪನೆಂದು ಹೇಳುವ ಪರವಾದಿಗಳು, ಜೀವನೇ ಸರ್ವೋತ್ತಮನೆಂದೂ ಏಕೆ ಹೇಳಿಲ್ಲ ? ಕಾರಣ, ಯಾವ ಶಾಸ್ತ್ರ, ವೇದ, ಪುರಾಣಗಳನ್ನು ಪರಾಮರ್ಶೆ ಮಾಡಿದವರಿಗೆ ಮೇಲೆ ತಿಳಿಸಿದಂತೆ ಕೇವಲ ಕಾಲ್ಪನಿಕ ದುಷ್ಟ ಮಾರ್ಗ. ಸಮಸ್ತ ಜೀವರು ಪರಮಾತ್ಮನ ಸೇವಕರು. ಹರಿಯೊಬ್ಬನೇ ನಿಯಾಮಕನು. **ಚತುರ್ಭಿಸ್ಸಾಕಂ ನವತಿಂ ಚ ನಾಭಿಶ್ಚಕ್ರಂ ಸವೃತ್ತಂ ವ್ಯತೀಪರವಿವತ್** (ಯು. ೨ –೨ನೇ ಅಧ್ಯಾಯ, ವರ್ಗ ೨)

**ಅಪೂರ್ಣೋಽಯಂ ಜೀವಸಂ ಘೂಽಸ್ವತಂತ್ರಃ ಪೂರ್ಣೋಹರಿರ್ಯಾಃ ಸ್ಯಾದಸ್ವತಂತ್ರಃ ಕುತಸ್ಸಃ ॥**

ಅಪೂರ್ಣರು ಅಸ್ವತಂತ್ರರಾದ ಜೀವರು. ಹರಿಯು ದಾಸರು ಶ್ರೀಮನ್ನಾರಾಯಣನೊಬ್ಬನೇ ಪರಿಪೂರ್ಣನು ಸ್ವತಂತ್ರನು.

**ಏಕಃ ಶಾಸ್ತಾನದ್ವಿತೀಯೋಽಸ್ತಿ ಶಾಸ್ತ** (ಭಾಗವತ)

ಶ್ರೀ ಹರಿಯೊಬ್ಬನೇ ಶಾಸಕನು. ಮತ್ತೊಬ್ಬ ಶಾಸಕನು ಇರುವುದಿಲ್ಲ. (ಸ್ವರಾಚ)

**ಈಶ್ವರಃಸರ್ವ ಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।**
**ಭ್ರಾಮಯನ್ ಸರ್ವಭೂತಾನಾಂ ಯಂತ್ರಾರೂಢಾನುಮಾಯಯಾ ॥**
**ತಮೇವ ಶರಣಂಗಚ್ಛ ಸರ್ವಭಾವೇನಭಾರತ** (ಗೀತಾ ೧೭)

ಶ್ರೀಕೃಷ್ಣನು ತನ್ನ ಸಂಕಲ್ಪಾನುಸಾರ ಸರ್ವಪ್ರಾಣಿಗಳ ಹೃದಯದಲ್ಲಿ ವಾಸಮಾಡುತ್ತಾ ಅವರನ್ನು ಒಂದು ಯಂತ್ರದಂತೆ (ಗೊಂಬೆಗಳಂತೆ) ತಿರುಗಿಸುತ್ತಾನೆ. ಆದ್ದರಿಂದ ನನ್ನನ್ನೇ ಶರಣು ಹೊಂದು ಎಂದಿದ್ದಾನೆ.

**ದ್ರವ್ಯಂಕರ್ಮಚ ಕಾಲಶ್ಚ ಸ್ವಭಾವೋ ಜೀವ ಏವ ಚ ।**
**ಯದನು ಗ್ರಹ ಸಂತಿ ನ ಸಂತಿ ಯದುಪೇಕ್ಷಯಾ ॥** (ಭಾಗ)

ದ್ರವ್ಯ ಕರ್ಮ ಕಾಲ ಸ್ವಭಾವ ಜೀವರು ಪರಮಾತ್ಮನ ಅನುಗ್ರಹದಿಂದಲೇ

ಇರುತ್ತಾರೆ. ಶ್ರೀಶನು ಮುನಿದರೆ ಇರಲಾರರು (ಆತನ ಅನುಗ್ರಹ ತಪ್ಪಿದರೆ ಇರುವುದುಂಟೆ ?)

ಇಷ್ಟು ಪ್ರಮಾಣಗಳಿಂದ ಶ್ರೀನಾರಾಯಣನೇ ಸರ್ವತಂತ್ರ ಸ್ವತಂತ್ರ ನಿಯಾಮಕ. ಜೀವರೆಲ್ಲಾ ಅವನಿಂದ ನಿಯಮ್ಯರು. ಪೂರ್ಣ ಅಧೀನರು ಎಂದು ತಿಳಿಸಲಾಗಿದೆ.

ಇಷ್ಟು ವಿಷಯಗಳನ್ನು ತಿಳಿಯುವ ಜ್ಞಾನವಾಗಬೇಕಾದರೆ ಶ್ರೀಹರಿಯು ಪ್ರತ್ಯಕ್ಷಗೋಚರನಲ್ಲ. ಶಾಸ್ತ್ರ ಶ್ರವಣ, ಮನನ, ಅಧ್ಯಯನಾದಿಗಳಿಂದಲೇ ಅವನ ವಿಷಯ ಜ್ಞಾನವಾಗುವುದು. ಶ್ರೀಪತಿಯು ಆಗಮೈಕ್ಯವೇದ್ಯ ಶಾಸ್ತ್ರಗಮ್ಯ ಆಮ್ನಾಯೈಕ ವೇದ್ಯನೆಂದು ಹೇಳಿದ್ದೇವೆ. ಆಗಮ ಆಮ್ನಾಯಗಳು ಯಾವುವು ? ತಿಳಿಯಬೇಕು. ಆಮ್ನಾಯ = ವೇದಗಳ ಅಭ್ಯಾಸ, ಆಗಮ = ಶಾಸ್ತ್ರ ಇವುಗಳ ಅಧ್ಯಯನದಿಂದಲೇ ಭಗವಂತನ ವಿಷಯಜ್ಞಾನ ಪಡೆಯುವುದು.

ಆದ್ದರಿಂದ ಎಲ್ಲಾ ವೇದಶಾಸ್ತ್ರಗಳು ಮುಖ್ಯವಾಗಿ ಹರಿಯೇ ಪ್ರತಿಪಾದ್ಯನು ಎಂದು ತಿಳಿಯಬೇಕು.

ಆಗಮಗಳೆಂದರೆ ? ನಾಲ್ಕು ವೇದಗಳು, ಮೂಲ ರಾಮಾಯಣ, ಪಾಂಚರಾತ್ರಾಗಮ + ಮಹಾಭಾರತ ಇವುಗಳನ್ನು ಆಗಮಶಾಸ್ತ್ರಗಳೆಂದು ಕರೆಯಲಾಗಿದೆ. ಇದನ್ನೇ ಶಾಸ್ತ್ರವೆನ್ನಲಾಗಿದೆ. **ತಸ್ಮಾತ್ಶಾಸ್ತ್ರಂ ಪ್ರಮಾಣಂ**

ಶಾಸ್ತ್ರವೆಂದರೇನೆಂದು ತಿಳಿಯೋಣ. ಆಗಲೇ ತಿಳಿಸಿದಂತೆ ಪರಮಾತ್ಮನು ಸದಾಗಮಗಳಿಂದಲೇ ಪಡೆಯಲು ಸಾಧ್ಯ. ಪ್ರತ್ಯಕ್ಷ ಅನುಮಾನಗಳಿಂದ ಆಗುವುದಿಲ್ಲ. **''ಸದಾಗಮೈಕ ವಿಜ್ಞೇಯಂ ಸಮತೀತ ಕ್ಷರಾಕ್ಷರಂ''** ಎಂದು ಶ್ರೀಮದಾಚಾರ್ಯರು ತಿಳಿಸಿರುತ್ತಾರೆ.

**ಮುಖ್ಯ ವಿಷಯ :** ಪ್ರತ್ಯಕ್ಷವು ಎಷ್ಟು ಪ್ರಮಾಣವೋ ಅಷ್ಟೇ ಆಗಮಗಳೂ ಪ್ರಮಾಣ. **''ಪ್ರತ್ಯಕ್ಷವಚ್ಚ ಪ್ರಾಮಾಣ್ಯಂ ಆಗಮಸ್ಯ ಏವ ಹಿ''** (ಅನುವ್ಯಾಖ್ಯಾನ)

ಆಗಮಗಳಲ್ಲಿ ಶ್ರೀಹರಿಯ ಪಾರಮ್ಯವನ್ನು ತಿಳಿಯೋಣ.

**ನೇಂದ್ರಿಯಾಣಿ ನಾನುಮಾನಂ ವೇದಾ ಹ್ಯೇವೈನಂ ವೇದಯಂತಿ ತಸ್ಮಾದಾಹುರ್ವೇದಾಃ ॥** (ಪಿಪ್ಪಲಾದಿಶೃತಿ)

ಕಣ್ಣು ಇತ್ಯಾದಿ ಇಂದ್ರಿಯಗಳಾಗಲಿ, ಅನುಮಾನಗಳಾಗಲಿ, ಭಗವಂತನನ್ನು



ತಿಳಿಸುವುದಿಲ್ಲ. ಪರಮಾತ್ಮನನ್ನು (ಅವನ ವಿಷಯಜ್ಞಾನ) ತಿಳಿಯುವುದು ವೇದಗಳಿಂದ ಮಾತ್ರ. ಹಾಗೆಂದೇ ಆಗಮಗಳಿಗೆ ವೇದಗಳೆಂದೇ ಹೆಸರು. ಅನುಮಾನಿಸುತ್ತೇವೆ, ಆದ್ದರಿಂದ ಭಗವಂತನ ಸ್ವರೂಪವನ್ನು ತಿಳಿಯುತ್ತೇವೆ ಅನ್ನುವುದು ಸರಿಯಲ್ಲ.

**ನೈಷಾತರ್ಕೇಣ ಮತಿರಾಪನೇಯಾ ಪ್ರೋಕ್ತಾऽನ್ಯೇನೈವಸುಜ್ಞಾನಾಯಪ್ರೇಷ್ಠಾ** (ಕಾಠಕ)

ಕೇವಲ ಅನುಮಾನ(ತರ್ಕ)ಗಳಿಂದ ತಿಳಿಯುವಂತಿಲ್ಲ. ಬ್ರಹ್ಮಜ್ಞಾನಿಗಳಿಂದ ವೇದಾರ್ಥವನ್ನು ಉಪದೇಶ ಪಡೆದಾಗ ಮಾತ್ರ ಭಗವಂತನ ವಿಷಯ ಜ್ಞಾನವಾಗುವುದು.

**ವೈದ್ಯಶ್ಚಸರ್ವೈ ರಹಮೇವವೇದ್ಯ** (ಗೀತಾ)

**ಸರ್ವೇವೇದಾ ಯತ್ಪದಮಾಮನಂತಿ ತಪಾಂಶಿ ಸರ್ವಾಣಿ ಚ ಯದ್ವಂತಿ** (ಕಾಠಕ)

**ನಾರಾಯಣಪರಾವೇದಾಃ** (ಶೃತಿ)

**ವಾಸುದೇವ ಪರಾವೇದಾಃ**

**ಓಂ ಶಾಸ್ತ್ರ ಯೋನಿತ್ವಾತ್ ಓಂ** (ಬ್ರಹ್ಮ ಸೂ. ೧.೧.೩)

**ವೇದೇರಾಮಾಯಣೇ ಚೈವ ಪುರಾಣೇ ಭಾರತೇತಥಾ । ಆದಾವಂತೇ ಚ ಮಧ್ಯೇಚ ವಿಷ್ಣುಸ್ಸರ್ವತ್ರಗೀಯತೆ** (ಅಥ.ಉ)

ಹೀಗೆ ಅನೇಕ ಪ್ರಮಾಣಗಳು ನಾರಾಯಣನ ಜ್ಞಾನವು ಆಗಮಾದಿಗಳಿಂದಲೇ ಸಾಧ್ಯವೆಂಬುದು ಸಿದ್ಧವಾಯಿತು.

ಇಷ್ಟು ತಿಳಿಸಿ ಪ್ರಮಾಣಗಳು ಮೂರು. ಇದರಲ್ಲಿ ಆಗಮವೇ ಜ್ಞಾನದಾಯಕವೆಂದು ತಿಳಿಯಬೇಕು.

ಪ್ರಮಾಣಗಳು ಮೂರು – ಪ್ರತ್ಯಕ್ಷ, ಅನುಮಾನ ಮತ್ತು ಆಗಮವೆಂದು. ಪ್ರತ್ಯಕ್ಷ ಪ್ರಬಲ ಪ್ರಮಾಣ. ಪ್ರತ್ಯಕ್ಷದಿಂದ ತಿಳಿದ ಜ್ಞಾನ ಸುಳ್ಳಾಗುವುದಿಲ್ಲ. ಪ್ರಬಲ ಪ್ರಮಾಣ. ಸುಳ್ಳು ಅಂತ ಹೇಳಲು ಬರುವುದಿಲ್ಲ. ಅನುಮಾನ, ತರ್ಕ ಮನಬಂದಂತೆ ವಾದಿಸಬಹುದೇ ವಿನಃ ಸಿದ್ಧಾಂತ ಸ್ಥಾಪನೆ ಆಗದು. **''ಕಾಮಾಚ್ಚಾನಾನುಪೇಕ್ಷಾತ್ಓಂ''**

ಪ್ರತ್ಯಕ್ಷಕ್ಕೆ ಎಲ್ಲೆ (limit) ಇದೆ. (ಇಂದ್ರಿಯಗಳಿಂದ ತಿಳಿಯುವುದು) ಆದರೆ

ಅತೀಂದ್ರಿಯವಾದ ವಸ್ತುವಿನ ಬಗ್ಗೆ ಇಂದ್ರಿಯಗಳು ಸಮರ್ಥವಲ್ಲ. ಆದ್ದರಿಂದ ಆಗಮಗಳೇ ಪರಮಶ್ರೇಷ್ಠ ಪ್ರಮಾಣ.

ನಾಸ್ತಿಕವಾದಿಗಳಾದ ಚಾರ್ವಾಕರು, ಬುದ್ಧ, ಜೈನರು ವೇದಗಳ ಪ್ರಾಮಾಣ್ಯವನ್ನು ಒಪ್ಪುವುದಿಲ್ಲ. ಪ್ರತ್ಯಕ್ಷ ಮಾತ್ರ ಪ್ರಮಾಣವೆನ್ನುವರು. ಇನ್ನೂ ಕೆಲವರು ವೇದ ಪ್ರಾಮಾಣ್ಯವನ್ನು ಒಪ್ಪುತ್ತಾರಾದರೂ ವೇದಗಳಲ್ಲಿ ಕರ್ಮಕಾಂಡ, ಜ್ಞಾನಕಾಂಡವೆಂದು ವಿಭಾಗ ಮಾಡಿಕೊಂಡು ಜ್ಞಾನಕಾಂಡವೇ ಶ್ರೇಷ್ಠವೆನ್ನುವರು. ಅಪೌರುಷೇಯವಾದ ವೇದಗಳಲ್ಲಿ ಈ ರೀತಿ ಎರಡು ಭಾಗಗಳಿರುವುದು ಎಂದು ಅವರಿಗೆ ಯಾರು ಹೇಳಿದರು ? ಹೇಗೆ ತಿಳಿಯಿತು ?

ಶ್ರೀಮದಾಚಾರ್ಯರು ವೇದಗಳಿಗೆ ಮೂರು ಅರ್ಥವಿರುವುದಾಗಿ ತಿಳಿಸಿ ಎಲ್ಲ ವೇದಗಳು ಭಗವಂತನನ್ನೇ ಪ್ರತಿಪಾದಿಸುವುದೆಂದು ಸಮರ್ಥಿಸಿ ವೇದಗಳಲ್ಲಿ ಕರ್ಮಕಾಂಡ, ಜ್ಞಾನಕಾಂಡಗಳಿರುವುದಾಗಿ ಎಲ್ಲಿಯೂ ತಿಳಿಸಿಲ್ಲವೆಂದಿದ್ದಾರೆ.

**"ವೇದೈಶ್ಚ ಪಂಚರಾತ್ರೈಶ್ಚ ಭಕ್ತ್ಯಾಯಜ್ಞೈಸ್ತಥೈವ ಚ ದೃಶ್ಯೋಽಹಂ ನಾನ್ಯಥಾ ದೃಶ್ಯೋ ವರ್ಷಕೋಟಿಶತೈರಪಿ ।"** ಎಂದು ವರಾಹ ಪುರಾಣ ಪ್ರಾಮಾಣ್ಯವನ್ನು ತಿಳಿಸಿರುತ್ತಾರೆ.

ಆದ್ದರಿಂದ ವೇದಪುರಾಣಗಳಲ್ಲಿ ಆಮೂಲಾಗ್ರವಾಗಿ ಪರಾಮರ್ಶೆ ಮಾಡಿದಾಗ ಸಾಕ್ಷಾನ್ನಾರಾಯಣನೇ ಪರಮ ಸರ್ವೋತ್ತಮ, ಜ್ಞೇಯನೆಂದು ತಿಳಿಸಿದಿರಿ. ಇಂತಹ ಉತ್ತಮ ಜ್ಞಾನದಿಂದ ಲಭಿಸುವ ಫಲವೇನು ? ಅದಕ್ಕೆ ಸಾಧಕವೇನೆಂಬ ಪ್ರಶ್ನೆಗೆ ಮುಕ್ತಿಯೇ ಫಲವೆಂದು. **"ಮುಕ್ತಿರ್ನೈಜಸುಖಾನುಭೂತಿರಮಲಾಭಕ್ತಿಃ ಶ್ಚತತ್ಸಾಧನಂ"** ಎಂದು ಹೇಳಿ ಮುಖ್ಯ ಫಲವು ಮುಕ್ತಿಯೇ. ಅಂತಹ ಮುಕ್ತಿಯನ್ನು ಪಡೆಯಲೂ ಶ್ರೀಹರಿಯಲ್ಲಿ ಭಕ್ತಿಯೂ ಮುಖ್ಯ ಕಾರಣ (ಸಾಧನ).

ಆಯಿತು. **ಮುಕ್ತಿ ಎಂದರೇನು ?** ಅದರ ಸ್ವರೂಪವೆಂತಹದ್ದು ? ತಿಳಿಸಿರಿ. ಮುಕ್ತಿಯ ಬಗ್ಗೆ ಒಬ್ಬ ಆಂಗ್ಲ ಕವಿ ಹೀಗೆ ಪ್ರಾರ್ಥಿಸುತ್ತಾನೆ. Keep thou my feet. I do not ask to see the distance ... one step enough for me. ಹೇ ದೇವ. ನನ್ನ ಹೆಜ್ಜೆಯು ಮುಂದುವರೆಯುವಂತೆ ಮಾಡು. ಎಷ್ಟು ದೂರವೆನ್ನುವುದನ್ನು ನಾನು ನೋಡಬಯಸುವುದಿಲ್ಲ. ಆದರೆ ಒಂದು ಹೆಜ್ಜೆ ಮುಂದೆ ನಡೆಯುವಂತೆ (ನಿನ್ನ ಹತ್ತಿರ ಸಾಗಲು) ಮಾಡು ಸ್ವಾಮಿ... ಎಂದಿದ್ದಾನೆ. ಎಷ್ಟು ಸುಂದರವಾಗಿ



ವಿನಮ್ರತೆಯಿಂದ ಪ್ರಾರ್ಥಿಸುತ್ತಾನೆ (ಕಾರ್ಡಿನಲ್ ನ್ಯೂಮನ್ ಪ್ರೇಯರುಗಳು) Lead kindly light ಈ ಒಂದು ಕಾವ್ಯ ನಾನು ಹೈಸ್ಕೂಲಿನಲ್ಲಿದ್ದಾಗ ನನ್ನ English Teacher ಬೋಧಿಸಿದ್ದು ನೆನಪಿಗೆ ಬಂತು. ಕಾರ್ಡಿನಲ್ ನ್ಯೂಮನ್ ಪ್ರಾರ್ಥನೆಯಲ್ಲಿ ಭಗವಂತನ ಕಡೆಗೆ ಒಂದೊಂದು ಹೆಜ್ಜೆ ಇಡುವುದು ಅವನ ಹತ್ತಿರ ಹೋಗುವುದು ಅಂತಿಷ್ಟೇ ಇದೆ. ಆದರೆ ಭಗವಂತನ ಕಡೆಗೆ ಹೋಗಬೇಕಾದರೆ ಭಗವಂತನ ಲೋಕ ಎಂಥದ್ದು ? ಹೆಜ್ಜೆ ಹೆಜ್ಜೆ ಇಡುವುದೆಂದರೆ ಏನು ಅರ್ಥ ? ತಿಳಿಯುವುದಿಲ್ಲ. ಕಾಡಿನಲ್ಗೆ ಮುಕ್ತಿಯ ಸ್ವರೂಪದ ಬಗ್ಗೆ ಜ್ಞಾನವಿಲ್ಲ. ಹೆಜ್ಜೆ ಇಡುವುದೆಂದರೆ ಭಕ್ತಿಯಿಂದ ಅವನನ್ನು ಪ್ರಾರ್ಥಿಸಬೇಕೆನ್ನುವುದು ಮಾತ್ರ ತಿಳಿಯಬೇಕು. ನಾವೂ ಸಹ ಅಷ್ಟೇ ನಮ್ರತೆಯಿಂದ ಪ್ರಾರ್ಥಿಸಬೇಕು. ಆದರೆ ಭಗವಂತನ ಲೋಕಕ್ಕೆ ಹೋಗಬೇಕಾದರೆ ನಾವು ಭಕ್ತಿ ಭಾವದಿಂದ ಆ ಲೋಕವು ವೈಕುಂಠವು ನಮಗೆ ಲಭ್ಯವಾಗಲು ಅದಕ್ಕಾಗಿ ನಾವು ಎಷ್ಟು ಪ್ರಯತ್ನಿಸಬೇಕು ? ಎಷ್ಟು ಜನ್ಮಾಂತರಗಳನ್ನು ದಾಟಿ ಅವನ ಅನುಗ್ರಹ ಸಂಪಾದನೆಯಿಂದ ಸಾಧ್ಯವೆನ್ನುವುದನ್ನು ಅರಿಯಬೇಕು, ಅಂದ ಮೇಲೆ ಗುರಿಯಿಲ್ಲದ ಹೆಜ್ಜೆ ಆಗಬಾರದು. ಗುರಿ ಮುಟ್ಟಬೇಕು. ಶ್ರೀರಮಾರಮಣನ ಪವಿತ್ರ ಲೋಕದ (ಮುಕ್ತಿಯ) ಬಗ್ಗೆ ಕೂಲಂಕಷವಾಗಿ ತಿಳಿಯಲು ಪ್ರಯತ್ನಿಸಬೇಕು. ಶ್ರೀ ಕೃಷ್ಣ **"ಬಹೂನಾಂ ಜನ್ಮನಾಂಮಂತೆ ಜ್ಞಾನವಾನ್ ಪ್ರಪದ್ಯತೆ"** ಎಂದಿದ್ದಾನೆ.

**ಮುಕ್ತಿಯ ಸ್ವರೂಪ – ವೈಕುಂಠ**

**"ಯದ್ಗತ್ವಾ ನನಿವರ್ತಂತೆ ತದ್ಧಾಮ ಪರಮಂ ಮವ"** ಇಂತು ಈ ಸಂಸಾರಾಖ್ಯ ದುಃಖಮಯವಾದುದು ಮತ್ತೆ ಮತ್ತೆ ತಿರುಗಿಬಾರದಂತೆ ನಿತ್ಯ ಆನಂದಸ್ವರೂಪವಾದ ಲೋಕವೇ ಭಗವಂತನ ಪರಮ ಮಂಗಳ ಲೋಕ. ನಾವು ಇಂತಹ ಲೋಕವನ್ನು ಪಡೆಯಬೇಕು ಅಲ್ಲವೇ ?

ಚತುರ್ವಿಧ ಪುರುಷಾರ್ಥಗಳೆನಿಸಿದ ಧರ್ಮ, ಅರ್ಥ, ಕಾಮ, ಮೋಕ್ಷವೆಂದು ಶಾಸ್ತ್ರಗಳು ಸಾರುತ್ತಿವೆ.

ಧರ್ಮ ಮಾಡಬೇಕು. ಮೋಕ್ಷ ಹೊಂದಲೂ ಕಾರಣ ಧರ್ಮದಿಂದ ಅರ್ಥ (ಸಂಪತ್ತು) ವಿನಿಯೋಗಿಸಬೇಕು. ಕಾಮ ಇಷ್ಟ, ಇಚ್ಛೆ, ಆಶೆ ಇವೆಲ್ಲವೂ ಧರ್ಮದ ಚೌಕಟ್ಟಿನಲ್ಲಿ ಇರಬೇಕು.

ಹಾಗಾದರೆ ಧರ್ಮ–ಮೋಕ್ಷವನ್ನು ತಂದುಕೊಡುವುದು ಈ ನಾಲ್ಕು ಎಷ್ಟು ಅರ್ಥಗರ್ಭಿತವಾಗಿದೆ ಎನ್ನುವುದನ್ನು ತಿಳಿಯಬೇಕು.

ಇಷ್ಟು ಸ್ವಲ್ಪ ವಿಷಯ ತಿಳಿಸಿ ಜೀವನಿಗೂ ಮುಕ್ತಿಗೂ ಹೇಗೆ ಸಂಬಂಧ ಎನ್ನುವುದನ್ನು ತಿಳಿಸಲಾಗಿದೆ.

ಮುಕ್ತಿಯ ಬಗ್ಗೆ ನಮ್ಮ ದೇಶದಲ್ಲಿ ಹಾಗೂ ಪರದೇಶಗಳಲ್ಲಿರುವ ದಾರ್ಶನಿಕರು ಏನು ಹೇಳುತ್ತಾರೆ ವಿಚಾರ ಮಾಡೋಣ.

ನಮ್ಮ ದೇಶದಲ್ಲಿ ಅತಿ ಪ್ರಾಚೀನ ಮತ ಪ್ರವರ್ತಕರಾದ ಬೌದ್ಧ, ಜೈನ, ಅದ್ವೈತ (Pantheists, Monists) ಏಕತ್ವವಾದಿಗಳು, ವಿಶಿಷ್ಟಾದ್ವೈತ, ಕ್ರಿಶ್ಚಿಯನ್ ಹೀಗೆ ಅವರಿಗೆ ತೋಚಿದಂತೆ ವಿವರಿಸುತ್ತಾರೆ. ಬೌದ್ಧ ಮತದ ಪ್ರಕಾರ ಜೀವನು ಕೊನೆಗೆ ನಿರ್ವಾಣವನ್ನು ಹೊಂದುವುದೇ ಮುಕ್ತಿ. ನಿರ್ವಾಣವೆಂದರೆ ದೇಹದ ನಾಶದೊಂದಿಗೆ ಜೀವನೂ ನಾಶ ಹೊಂದುವುದು. ಅಂದರೆ ಜೀವನು ಶಾಶ್ವತವಾಗಿ ನಾಶ (ಅಳಿಸಿಹೋಗುವುದು) Total annihilation of the soul ಸರ್ವನಾಶ ನಿರ್ನಾಮ. ಬೌದ್ಧರು ನಾಲ್ಕು ವಿಧ (೧) ಮಾಧ್ಯಮಿಕ (೨) ಯೋಗಾಚಾರ (೩) ಸಾಂಕ್ರಾಂತಿಕಾಃ (೪) ವೈಭಾಷಿಕಾಃ ಎಂದು. ಬೌದ್ಧ, ಜೈನ ದರ್ಶನದ ಬಗ್ಗೆ ಅನುಬಂಧದಲ್ಲಿ ವಿವರಣೆ ನೋಡಿ. ಜೈನಧರ್ಮದ ಪ್ರಕಾರ ಜೀವನು ಕರ್ಮಬಾಹಿರನಾಗಿ ದೇಹದಂಡನೆ ಅಹಿಂಸೆಯೇ ಪರಮ ಧರ್ಮವೆಂದು ಕೊನೆಗೆ ದೇಹ ನಾಶವಾದ ನಂತರ ಜೀವನು ವಾಯುವಿಯನ್ನು (ಗಾಳಿಯಲ್ಲಿ) ಬೆರೆತು ಮೇಲೆ ಮೇಲೆ ಹೋಗುವುದೇ (ಸತತಂ ಊರ್ಧ್ವಗಮನಂ) ಮುಕ್ತಿ. ಹೀಗೆ ಮುಕ್ತಿ ಹೊಂದಿದವರನ್ನು ತೀರ್ಥಂಕರರೆನ್ನುತ್ತಾರೆ. (ವಿವರಗಳಿಗೆ ಅನುಬಂಧದಲ್ಲಿ ನೋಡಿ).

ಅದ್ವೈತ ಮತ ಪ್ರಕಾರ ಜೀವನು ಬ್ರಹ್ಮೈಕ್ಯ ಹೊಂದುವುದು ಮೋಕ್ಷವೆನ್ನಲಾಗಿದೆ. ವಿಶಿಷ್ಟಾದ್ವೈತದಂತೆ ಜಗತ್ತು ನಿತ್ಯವೇ ಶ್ರೀಹರಿಯೂ ಸರ್ವೋತ್ತಮನು, ಜೀವನು ಸತ್ಯ ಕೊನೆಗೆ ಜೀವರು ಬ್ರಹ್ಮನಿಗೆಷ್ಟು ಆನಂದವಿರುವುದೋ ಅಷ್ಟೂ ಆನಂದಪೂರ್ಣನಾಗುತ್ತಾನೆ. ತಾರತಮ್ಯವಿಲ್ಲ (ಪರಮಂ ಸಾಮ್ಯಮುಪೈತಿ) ಎಂದಿದ್ದಾರೆ. ಶಕ್ತಿ ವಿಶಿಷ್ಟಾದ್ವೈತ ಮತ ಪ್ರವರ್ತಕರಲ್ಲಿ ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ, ಬಸವಣ್ಣ (ಬಸವೇಶ್ವರ)ರು ಪ್ರಮುಖರು. ಇವರಲ್ಲಿ ಎರಡು ವಿಧ – ಸೂನ್ಯವಾದಿಗಳು, ಶಿವೈಕ್ಯವಾದಿಗಳು. ಮೊದಲು ಮೂರು ಮಂದಿ ಸೂನ್ಯವಾದಿಗಳು. ಬಸವೇಶ್ವರ ಶಿವೈಕ್ಯ ಸೂನ್ಯವಾದಿಗಳು.



ಜೀವನು ದೇಹ ಮರಣಾ ನಂತರ ಸೂನ್ಯವಾಗುವುದು (ಗಾಳಿಯಲ್ಲಿ ಗಾಳಿ ಬೆರೆತಂತೆ) ಬಸವೇಶ್ವರನು ಶಿವೈಕ್ಯವಾಗುವುದೇ ಮುಕ್ತಿ. ಜಂಗಮರು ಸಿದ್ಧರು ಎಂದು ಅನೇಕ ವಿಧ. ಮೈಲಾರಲಿಂಗರು ಒಂದು. ಸೂನ್ಯವಾದಿಗಳಾದ ಲಿಂಗಾಯತರು ಅವರಲ್ಲಿ ಒಬ್ಬ "ಬಯಲುಗಳಿಕೆಯ ಬೆಳಕು ಎಂಬ ಪುಸ್ತಕ ಬರೆದು ನನಗೆ ತೋರಿಸಿದರು – ಜೋಳದರಾಶಿ ದೊಡ್ಡಣ್ಣ."

ಇನ್ನು ಕ್ರಿಶ್ಚಿಯನ್ ಮತದ ಪ್ರಕಾರ ಮೋಕ್ಷವೆಂದರೆ ಸಂಸಾರದಿಂದ ಬಿಡುಗಡೆ (Salvation) a deliverance from the bondage of sin. Salvation means eternal happiness with consciousless in the presence of God.

ಕೊನೆಗೆ ಇಸ್ಲಾಂ ಧರ್ಮದ ಪ್ರಕಾರ ದೇಹ ನಾಶವಾದಾಕ್ಷಣ ಜೀವನು ನಾಶ ಹೊಂದುತ್ತಾನೆ. ಪುನರ್ಜನ್ಮವಿರುವುದಿಲ್ಲ. Jannath ಮೋಕ್ಷ (ಸ್ವರ್ಗ)ದಲ್ಲಿ ಸಂಪಾದ ಚಿಲುಮೆಗಳು, ತೋಟಗಳು, ಸುಗಂಧಿತ ಪುಷ್ಪವನ ಸ್ತ್ರೀಯರು ಆನಂದಕೊಡುವವರು. ಸಾತ್ವಿಕರಿಗೆ ಮಾತ್ರ ಇಂತಹದರಲ್ಲಿ ಪ್ರವೇಶವಿರುವುದು. ಕ್ರಿಸ್ತ ಇಸ್ಲಾಂಮರ ಬಗ್ಗೆ ಅನುಬಂಧ ನೋಡಿ.

ಇಷ್ಟು ವಿವಿಧ ದರ್ಶನಗಳ ಸೂಕ್ಷ್ಮ ಪರಿಚಯವಾದಾಗ ಯಾವ ಮತವೂ ಪ್ರಾಮಾಣಿಕವಿಲ್ಲ. ಎಲ್ಲವೂ ವಿರುದ್ಧವಾಗಿ ಬೋಧಿಸುವುದು. ಶ್ರೀಮದಾನಂದತೀರ್ಥರ ತತ್ತ್ವವಾದದ ಪ್ರಕಾರ ಮುಕ್ತಿಯ ಬಗ್ಗೆ ಅವರ ಸ್ವರೂಪ ಲಕ್ಷಣವು ಸಪ್ರಮಾಣಿಕವಾಗಿ ಆಧಾರಸಹಿತ convincing ಆಗಿ ನಿರೂಪಿಸಲಾಗಿದೆ.

## ಮಧ್ವಮತಾನುರೀತ್ಯ ಮುಕ್ತಿ

ಮುಕ್ತಿ (ಮೋಕ್ಷ) ಜೀವನು ತನ್ನ ಸ್ವರೂಪ ಅಭಿವ್ಯಕ್ತಿ ಆನಂದಾನುಭವವನ್ನು ಭಗವಂತನ ಅನುಗ್ರಹದಿಂದಲೇ ಸಾಧ್ಯ. ಅವರಿಗೆ ಪರಮಾತ್ಮನ ಲೋಕದಲ್ಲಿ ವಾಸಿಸುವುದು.

**"ನಚ ಪುನರಾವರ್ತತೇ"** ಪುನಃ ಈ ಸಂಸಾರಾಖ್ಯ ಬಂಧನವು ಆಗಿ ಬರುವುದಿಲ್ಲ. ನಿತ್ಯ ಮುಕ್ತನಾಗಿರುತ್ತಾನೆ.

"ನೈಜ ಸುಖಾನುಭುಕ್ತಿ" ಬ್ರಹ್ಮಸೂತ್ರ ಕೊನೇ ಸೂತ್ರದ ಪ್ರಕಾರ no returning (according to Sutra to this Mundane world) ಎಲ್ಲಾ ವೈದಿಕ

ಮತಾಚಾರ್ಯರಲ್ಲಿ ಈ ವಿಷಯ ಭಿನ್ನಾಭಿಪ್ರಾಯವಿರುವುದಿಲ್ಲ. All agree that heaven or paradise is not a temporary abode of the soul but a permanent habitation from which there is no coming back to this Mundane world. According to Cicero "Happiness is no happiness that is Lost for there is no facility where there is a constant dread of its cessation." ಸುಖಾನುಭವವು ಕಡಿಮೆಯಾಗುವ ಪಕ್ಷದಲ್ಲಿಅದು ಸುಖವೆಂದು ಹೇಳಲಾಗದು. ಮುಕ್ತಿಯಲ್ಲಿ ಸುಖಾನುಭವಕ್ಕೆ ಭಯಾನಕವಾಗಿ ನಿಂತುಹೋಗುವುದೆಂಬ ಭಯವಿರುವುಕೆ ಇದ್ದರೆ ಅದನ್ನು ಮುಕ್ತಿ ಎನ್ನಲಾಗದು.

ವಿಚಿತ್ರ ವ್ಯಾಖ್ಯಾನವೆಂದರೆ, ಸ್ವಾಮಿ ದಯಾನಂದ ಸರಸ್ವತಿಯವರು ಆರ್ಯ ಸಮಾಜ ಪ್ರವರ್ತಕರು. ಹೀಗೆ ಅವರ ಮಾತಿನಲ್ಲೇ ತಿಳಿಯೋಣ. ಆಂಗ್ಲ ಭಾಷೆಯಲ್ಲಿ ಡಾ॥ ಭಾರದ್ವಾಜರ ತರ್ಜುಮೆ ಆಗಿದ್ದನ್ನು ತಿಳಿಸಲಾಗಿದೆ. ದಯಾನಂದ ಸರಸ್ವತಿಯವರು ಮುಕ್ತಿಯು ನಿರಂತರ ಶಾಶ್ವತ ಸುಖರೂಪವಲ್ಲವೆಂದು ತಿಳಿಸುತ್ತಾ "he negates that Mukti is eternal and the souls last resting place permanently from where he does not return to this world. According to his hypothesis eternal bliss (Mukti) is regarded as transitory state of living. Mukti has a limited period. Souls who attain Mukti live their for a certain period of years. As per his calculation, computerised its duration arrives 3,11,040,000,000,000 years. This long duration is quite sufficient for the souls to satisfy their appitites.

Further he says, souls with their limited capacities cannot earn infinite bliss. Eternal bliss is equivalent to this indefinite bliss. He argues souls who enter eternal bliss cannot think of (even imagine) returning to this Mundane world. Then if Mukta jeevas enter the Mukti in such large number, then Mukta loka could become overcrowded. As a result of this (1) in Mukti there will not be enough space even to walkabout. (2) Then in this human world population gradually gets depopulated. Therefore there must be regular change between the inhabitants of the two worlds. Secondly souls who enter eternal bliss enjoy happiness for a long period. Get bored satisfied and think for a change.



Eternal bliss (Mukti) is just like a imprisonment. Just as in this world Mukti is not like an eternal damnation but for a short period say 20/25 years. Hence souls earn / long to come back free from eternal confinement. (Dr. Bharadwaj's translation of Sathyartha Prakash is quoted with my own comment)

ಸತ್ಯಾರ್ಥ ಪ್ರಕಾಶ ಕರ್ತೃಗಳಾದ ದಯಾನಂದ ಸರಸ್ವತಿ ಪಂಜಾಬಿನವರು. ಶ್ರೇಷ್ಠ ವಿದ್ವಾಂಸರು. ಆರ್ಯ ಸಮಾಜವೆಂಬ ಸಂಸ್ಥೆಯನ್ನು ಸ್ಥಾಪಿಸಿದರು. ಸಾಕಷ್ಟು ಅನುಯಾಯಿಗಳು ಇದ್ದರು. ಇದ್ದಾರೆ. ವೇದ ಪ್ರಾಮಾಣ್ಯವನ್ನು ಒಪ್ಪುತ್ತಾರೆ. ನಾಲ್ಕು ವೇದಗಳಿಗೆ ವ್ಯಾಖ್ಯಾನ ಮಾಡಿರುತ್ತಾರೆ. ಆದರೆ ಉಪನಿಷತ್ತುಗಳಲ್ಲಾಗಲಿ ಬ್ರಹ್ಮಸೂತ್ರಗಳಲ್ಲಾಗಲಿ, ಪುರಾಣಗಳನ್ನಾಗಲಿ ಪ್ರಮಾಣತ್ವೇನ ಸಮ್ಮತಿಸುವುದಿಲ್ಲ.

ವೇದಗಳಿಗೆ ತಮ್ಮದೇ ಆದ ವ್ಯಾಖ್ಯಾನ ಅವುಗಳಲ್ಲಿ ಹೇಳಿದಂತೆಯೇ ಆರ್ಯರು ಆಚರಿಸಬೇಕು. ಎಲ್ಲರೂ ಸಜ್ಜನರೇ. ದುರ್ಜನರೆಂಬುದು ಇರುವುದಿಲ್ಲ. ಹೀಗಾಗಿ ಎಲ್ಲಾ ಸಜ್ಜನರೂ ವೇದಗಳನ್ನೋದಿ ಮುಕ್ತಿ ಪಡೆಯುತ್ತಾರೆ. ತಾರತಮ್ಯ ಇಲ್ಲ. ವೇದಾಧ್ಯಯನಕ್ಕೆ ಎಲ್ಲರೂ ಅಧಿಕಾರಿಗಳೇ ಎಂದು ಬೋಧಿಸಿದರು. ಇರಲಿ. ಇವರು ನೀಡಿದ ಮುಕ್ತಿಯ ಬಗ್ಗೆ ವ್ಯಾಖ್ಯಾನ ಹೆಚ್ಚಿನ ಖಂಡನೆ ಅಗತ್ಯವಿಲ್ಲ. ಅಸಂಬದ್ಧ, ಅಪ್ರಾಮಾಣ್ಯ ಕೇವಲ ಕಾಲ್ಪನಿಕವೆಂದಷ್ಟೇ ಹೇಳಬಹುದು.

Perverted explanation needs no comment or criticism. Followers of Sri Madhwa knew about this unethical explanation but ignored it because the discussion proposed by Dayananda is irresponsible unauthentic misleading and his comment is totally against the philosophy of Vedas. A devil quoting scriptures ಎಂಬಂತೆ ಇರುವುದು.

ಶ್ರೀ ಮಧ್ವಸಿದ್ಧಾಂತದ ಪ್ರಕಾರ ಮುಕ್ತಿ ಮುಕ್ತರ ವಿಷಯ ಸ್ವಲ್ಪ ಈ ಹಿಂದೆ ವಿವರಿಸಲಾಗಿದೆ. ಈಗ ಪ್ರಮಾಣ ಆಧಾರ ಸಹಿತ ತಕ್ಕ ಮಟ್ಟಿಗೆ ಸೂಕ್ಷ್ಮವಾಗಿ ತಿಳಿಸುತ್ತೇನೆ.

ಶ್ರೀಮದಾನಂದತೀರ್ಥರ ಸಿದ್ಧಾಂತದ ಪ್ರಕಾರ, ಮುಕ್ತಿ ಎಂದರೆ ಜೀವನ ಸ್ವಸ್ವರೂಪ ಅಭಿವ್ಯಕ್ತಿ ಅನುಭವ ರೂಪ ಆನಂದ ಪಡೆಯುವುದು. (೧) ಶ್ರೀಹರಿಯೇ ಸರ್ವೋತ್ತಮನೆಂಬ ಜ್ಞಾನ ಹೊಂದಿದ ಮೇಲೆ ಫಲ ರೂಪ ಮುಕ್ತಿಯೇ ಪ್ರಯೋಜನ.

ಇಂತಹ ಉತ್ಕೃಷ್ಠ ಪ್ರಯೋಜನ ಸಿಗದಿದ್ದವನು ಪ್ರಯತ್ನವೇ ಮಾಡುವುದಿಲ್ಲ. ಎಂತಹ ಮೂಢನೂ ಪ್ರಯೋಜನ ಪಡೆಯಲು ಪ್ರಯತ್ನಿಸುತ್ತಾನೆ. ಅದಕ್ಕಾಗಿ ಶ್ರೀಶನಲ್ಲಿ ಭಕ್ತಿಗಾಗಿ ಜ್ಞಾನ ಪಡೆಯಬೇಕು. **ಪ್ರಯೋಜನಮನುದ್ದಿಶ್ಯ ನಮಂ ದೋಪಿ ಪ್ರವರ್ತತೆ** ಎಂಬ ಉಕ್ತಿ ಹೇಳುತ್ತದೆ. ಈಗಾಗಲೇ ತಿಳಿಸಿದಂತೆ ತಾರ್ಕಿಕರು ೨೧ ದುಃಖ ಉಧ್ವಂಸವಾದಾಗ ಮುಕ್ತಿಯಾಗುವುದು ಎನ್ನುತ್ತಾರೆ.

ಮಾಯಾವಾದಿಗಳು – ಜೀವಬ್ರಹ್ಮೈಕ್ಯವೇ ಮುಕ್ತಿಯೆಂದು.

ರಾಮಾನುಜೀಯರು – ಜೀವರು ಲಕ್ಷ್ಮೀಪತಿತ್ವ ಹೊರತು ಬ್ರಹ್ಮಾನಂದ ಸಾಮ್ಯವೇ ಮುಕ್ತಿ. ಹೀಗೆ ಅನೇಕರು ಅನೇಕ ರೀತಿಯಾಗಿ ಯುಕ್ತಿಯ ಲಕ್ಷಣವನ್ನು ಹೇಳಿದ್ದು ಶೃತಿ ಸ್ಮೃತಿಗಳಿಗೆ ವಿರುದ್ಧವಾಗಿ ಅಪ್ರಮಾಣ ನಂಬಲೂ ಸಾಧ್ಯವಲ್ಲ.

ಶ್ರೀಮದಾಚಾರ್ಯರು ಮುಕ್ತಜೀವರು ಸ್ಪಷ್ಟವಾಗಿ ತಮಗೂ ಪರಬ್ರಹ್ಮನಿಗೂ ಅಸಮತೆ (disparity) ಇರುವುದಾಗಿ ಪ್ರತ್ಯಕ್ಷ ಜ್ಞಾನವಿರುವುದು. (ತಾನು–ಹರಿ ಎಂದಿಗೂ ಯಾವ ರೀತಿಯು ಸಮಾನತೆ ಇರುವುದಿಲ್ಲವೆಂಬ ಅಪರೋಕ್ಷ ಜ್ಞಾನವಿರುವುದು. ಕಾರಣ ಜೀವನು ಅಲ್ಪನು. ಅಜ್ಞಾನ ಬಲ ವೀರ್ಯಾದಿಗಳಿರುವುದೆಂದು, ಬ್ರಹ್ಮನ ಸಮಾನ ಮನಸಾ ವಿಚಾರ ಮಾಡಲಾರನು. ಬ್ರಹ್ಮಸಾದರೋ **''ಬಲವಮಾನಂದ ಓಜಸ್ಸಸಹೋಜ್ಞಾನಮನಾರುಲಂ । ಸ್ವರೂಪಾಣ್ಯವಜೀವಸ್ಯ ವ್ಯಂಜಂತೆ ಪರಮಾದ್ವಿಭೋಃ''** (ಶೃತಿ) ಆದ್ದರಿಂದ ಮುಕ್ತಜೀವನು ಬ್ರಹ್ಮನಿಂದ ಭಿನ್ನನಷ್ಟೇ ಅಲ್ಲದೆ, ಬ್ರಹ್ಮನ ಅವಲಂಬಿ ಆಶ್ರಿತನಾಗಿರುವನೆಂಬ ಅಪರೋಕ್ಷವೂ, ಮುಕ್ತರಲ್ಲಿ ತಾರತಮ್ಯವು ಮುಕ್ತರು ಮುಕ್ತಿಯೋಗ್ಯರು. ಅವರಲ್ಲಿಯೂ ತಾರತಮ್ಯವಿರುವುದೆಂದು ತಿಳಿಸಲು **ಜೀವ ಭೇದೇನ್ಯೈವ ಜಗತ್ಸರ್ವಂ ಭೇದೇನ್ಯೈಶಂ ಗುಣ್ಯೈಃಸಹ । ಭೇದೇನ ಜೀವಾನನ್ಯೋನ್ಯಂ ಮುಕ್ತಾಃ ಪಶ್ಯಂತಿ ಸರ್ವಶಃ ॥** (ಬೃಹದಾರಣ್ಯಕಭಾಷ್ಯ)

ಮುಕ್ತಿಯು ಒಂದು ರೀತಿಯ ಆಧ್ಯಾತ್ಮಿಕ ಪ್ರಪಂಚ. ಯಾವ ವಿಧವಾದ ಪ್ರಾಕೃತ ಸಂಬಂಧವಿರುವುದಿಲ್ಲ. ಜೀವನು ಇಂತಹ ಪ್ರಕೃತಿ ಸಂಬಂಧದಿಂದ ಬಿಡುಗಡೆ ಹೊಂದುವನು. ಆಧ್ಯಾತ್ಮಿಕ ದೃಷ್ಟಿ, ಇಂದ್ರಿಯಗಳಿಂದ ಸುಖವನ್ನು ಅನುಭವಿಸುವನು.

**''ವಿಮುಕ್ತೈಸ್ಯಚಿನ್ಮಾತ್ರಏವದೇಹೋ ಭವತಿ ಚಿನ್ಮಾತ್ರಾಣಿಕರಣಾನಿ''** (ನ್ಯಾಯವಿವರಣ)



ಮುಕ್ತರು ವಿವಿಧ ಸುಖ ಭೋಗಗಳನ್ನು ಅನುಭವಿಸುವರು. ಅವರವರ ಯೋಗ್ಯತೆಗನುಸಾರವಾಗಿ ಭಗವಂತನಲ್ಲಿ ಭಕ್ತಿ ಅವನ ಪ್ರೀತಿ ಸಂಪಾದನೆಯಲ್ಲಿಯೂ ಆನಂದವನ್ನು ಅನುಭವಿಸುತ್ತಾರೆ.

**''ಹರೇರುಪಾಸನಾ ಚಾತ್ರಸದೈವ ಸುಖರೂಪಿಣೇ ।**
**ನತು ಸಾಧನ ಭೂತಾ ಸಾ ಸಿದ್ಧಿರೇವಾತ್ರ ಸಾಯತಃ'' ॥** (ಬ್ರಹ್ಮಸೂತ್ರಭಾಷ್ಯ)

ವೈಕುಂಠದಲ್ಲಿ ಸದಾ ಹರಿಸ್ಮರಣೆ ಚಿಂತನೆ ಅರ್ಚನೆಯಲ್ಲೇ ಆನಂದ ಪಡೆಯುತ್ತಾರೆ. ಅಲ್ಲಿ ಭಕ್ತಿಯೇ ಅವರ ಸ್ವರೂಪವೇ ಆಗಲಿ ಭಕ್ತಿಯು ಸಾಧನಮಾರ್ಗವಲ್ಲ.

**''ಭಕ್ತಿಶ್ಚ ಸ್ವರೂಪೈವ ಮುಕ್ತಾನಾಂ ನತುಸಾಧನಂ''** (ನ್ಯಾಯವಿವರಣೆ)

ಈ ಅಮಂಗಳಕರವಾದ ಘೋರ ಸಂಸಾರವೆಂಬ ನದಿಯನ್ನು ದಾಟಿ ಸರ್ವರಿಗೂ ಆಶ್ರಯನಾದ ಸರ್ವೇಶ್ವರನಾದ ಪರಮಾತ್ಮನನ್ನು ಹೊಂದಿ ಅವನಿಂದ ಸ್ವಯೋಗ್ಯವಾದ ಆನಂದಗಳನ್ನು ಪಡೆಯುತ್ತಾನೆ.

**''ಇಮಾಂ ಘೋರಾಮಶಿವಂ ನದೀಂ ತೀರ್ತ್ವಾತಂ ಸೇತುಮಾಪ್ಯೈತೆ**
**ನೈವ ಸೇತೂನಾಮೋದತೇ ಆನಂದೀಭವತಿ''** (ಮೌದ್ಗಲಶೃತಿಃ)
**ಬಹುನಾಽತ್ರ ಕಿಮುಕ್ತೇನ ಯಾವಚ್ಛ್ವೇತಂ ನ ಗಚ್ಛತಿ ।**
**ಯೋಗೀತಾವನ್ನಮುಕ್ತಾಃ ಸ್ಯಾದೇಷ ಶಾಸ್ತ್ರಸ್ಯನಿರ್ಣಯಃ ॥**

ಶಾಸ್ತ್ರನಿರ್ಣಯವು ಹೀಗಿರುವುದು. ಅನೇಕ ವಾಕ್ಯಗಳಿಂದೇನು ಪ್ರಯೋಜನ? ಶ್ವೇತ ದ್ವೀಪಕ್ಕೆ ಹೋಗುವವರೆಗೂ ಮುಕ್ತಿವೆನಿಸಲಾರನು.

**ಶ್ವೇತದ್ವೀಪಂ ತತೋಗತ್ವಾಂ ದೃಷ್ಟ್ವಾಂ ವಿಷ್ಣುಂ ಚತೇತತಃ ।**
**ಅನುಜ್ಞಾತಾಃ ಪ್ರಮೋದಂತೇ ನಿದುಃಖಾಸ್ತು ಧರಾದಿಷು ॥**

ಕೆಲ ಮುಕ್ತರು ಶ್ವೇತದ್ವೀಪಕ್ಕೆ ಹೋಗಿ ಭಗವಂತನ ದರ್ಶನ ಪಡೆದು ಅಲ್ಲಿ ಹರಿಯಿಂದ ಆಜ್ಞಪ್ತರಾಗಿ ಭೂಮಿಯಲ್ಲಿ ಅವತರಿಸಿ ದುಃಖಾದಿಗಳಿದ್ದಂತೆ ಆನಂದವನ್ನು ಹೊಂದಿಕೊಂಡು ಇರುತ್ತಾರೆ. (ಉದಾ : ಪ್ರಹ್ಲಾದಾದಿ ಮಹಾನುಭಾವರು). ಅನಂತಪದ್ಮನಾಭ ವ್ರತಕಥಾದಲ್ಲಿ ಕೌಂಡಿನ್ಯನೆಂಬ ಬ್ರಾಹ್ಮಣನ ಪಾಪಕರ್ಮಕ್ಕೆ ಪ್ರಾಯಶ್ಚಿತ್ತವಾಗಿ ಅನಂತನನ್ನು ಕಾಣಲೂ ತಿರುಗಿತಿರುಗಿ ಬೇಸತ್ತು ಕೂತಿರುವಾಗ ಸ್ವಾಮಿಯೇ ವಿಪ್ರ ವೇಷದಿಂದ ಬಂದು ತನ್ನ ಲೋಕವಾದ

ಶ್ವೇತದ್ವೀಪದಲ್ಲಿರುವ ಶ್ರೀನಾರಾಯಣನನ್ನು ತೋರಿಸುತ್ತಾನೆ ಎಂದಿದೆ. ಈ ದ್ವೀಪವು ಈ ಲೋಕದಲ್ಲಿಯೇ ಇರುವುದು. ಅಲ್ಲಿಗೆ ಹೋದವರು ತಿರುಗಿ ಬರುತ್ತಾರೆಂಬುದು ಈ ವ್ರತಕಥಾದಲ್ಲಿ ತಿಳಿಸುತ್ತದೆ.

**ಮೋಕ್ಷದಲ್ಲಿ ಲಯಕ್ರಮ ವರ್ಣನೆ :**

**ಮುಕ್ತಾಸ್ತು ಮಾನುಷಾದೇವಾನ್ ದೇವಾ ಇಂದ್ರಂ ಸಶಂಕರಂ ।**
**ಸಬ್ರಹ್ಮಾಣಂ ಕ್ರಮೇಣೈವತೇನ ಯಾಂತ್ಯಖಿಲಾಹರಿಂ ।**
**ಉತ್ತರೋತ್ತರಶ್ಯಾಶ್ಚ ಮುಕ್ತಾ ರುದ್ರಪುರಸ್ಸರಾಃ ॥**

ಮುಕ್ತರಾದವರು ದೇವತೆಗಳನ್ನು ದೇವತೆಗಳು ಇಂದ್ರನನ್ನು, ಇಂದ್ರ ರುದ್ರನಲ್ಲಿ, ರುದ್ರದೇವ ಬ್ರಹ್ಮನನ್ನು, ಬ್ರಹ್ಮದೇವರ ದ್ವಾರಾ ಶ್ರೀಹರಿಯನ್ನು ಹೊಂದುವರು. ಹೀಗೆ ಕ್ರಮವಾಗಿ ಉತ್ತರೋತ್ತರ ಅಧೀನರಾಗಿರುತ್ತಾರೆ.

ಹೀಗೆ ಅಸುರರೂ ಸಹ ತಮ್ಮ ತಮೋಗುಣಕ್ಕನುಗುಣವಾಗಿ ಅವರಿಗೆ ಯೋಗ್ಯವಾದ ನರಕಾದಿ (ಮುಕ್ತಿ) ಹೊಂದಿ ಕೊನೆಗೆ ನಿತ್ಯ ದುಃಖಮಯವಾದ ತಮಸ್ಸನ್ನೇ ಪಡೆಯುತ್ತಾರೆ. ಇವರಲ್ಲಿಯೂ ತಾರತಮ್ಯ ಇರುವುದು. (ತಾಮಸ ತಾರತಮ್ಯ)

**ಮುಕ್ತಿಮಾರ್ಗ :** ಮುಕ್ತರು ಭೌತಿಕ ದೇಹ ತ್ಯಜಿಸಿದ ನಂತರ ಲಿಂಗಶರೀರ ಇದ್ದವರಾಗಿ ಬ್ರಹ್ಮದೇವರ ಸದನಕ್ಕೆ ಹೋಗಿ ಪರಮೇಷ್ಠಿಯಿಂದೊಡಗೂಡಿ ವಿರಜಾ ನದಿಯಲ್ಲಿಸ್ನಾನ ಮಾಡಿ ಲಿಂಗ ಶರೀರವನ್ನು ಕಳಚಿದವರಾಗಿ, ಹನ್ನೆರಡು ಕಲಾತ್ಮಕನಾದ ಚಿನ್ಮಾತ್ರ ದೇಹದಿಂದ ಹರಿಮಂದಿರವನ್ನು ಸೇರುತ್ತಾರೆ.

**ಪ್ರಾಪ್ಯನಾವೃತ್ತಿಮಾಯಾಂತಿ ಶಾಂತಿ ಭೂತಾಃ ನಿರಾಮಯಾ ।**
**ಯದ್ಗತ್ವಾನ ನಿಪರ್ತಂತೇ ತದ್ಧಾಮಪರಮಂ ಮಮ ॥**

ಧರ್ಮ, ಅರ್ಥ, ಕಾಮಗಳು ಅನಿತ್ಯಗಳು. ಮುಕ್ತಿಯೊಂದೇ ನಿತ್ಯ. ಏತಸ್ಮಾತ್ ಜ್ಞಾನಿಗಳು ಅಂತಹ ಶಾಶ್ವತ ಸುಖರೂಪ ವೈಕುಂಠ ಹೊಂದಲು ಸರ್ವಪ್ರಯತ್ನ ಮಾಡಿ ಭಗವಂತನ ಪ್ರೀತಿಪಾತ್ರರಾಗಬೇಕು.

ಹಿಂದೆ ವಿವರವಾಗಿ ತಿಳಿಸಿದಂತೆ ಮೋಕ್ಷ ಪ್ರಾಪ್ತಿಗಾಗಿ ಶ್ರೀಲಕ್ಷ್ಮೀಕಾಂತನಲ್ಲಿ ನಿರ್ಮಲವಾದ ಭಕ್ತಿಯೇ ಉಪಾಯವು ಎನ್ನುವುದನ್ನು **"ಅಮಲಾಭಕ್ತಿಶ್ಚ ತತ್ಸಾಧನಂ"** ಇಲ್ಲಿ ಸಂಗ್ರಹೇಣ ನಿರೂಪಿಸಲಾಗಿದೆ.



ಭಕ್ತಿ = ಪ್ರೀತಿ, ಪ್ರೇಮ, ಶ್ರೀಕಾಂತನನ್ನು ಬಿಟ್ಟು ಅನ್ಯರಲ್ಲಿ (ವಿಷಯಗಳಲ್ಲಿ) ಮಾಡುವ ಪ್ರೇಮ (ಅಭಿಮಾನ)ಗಳಿಗಿಂತ ಲಕ್ಷಾಂತರ ಪ್ರೇಮವು ಪ್ರವಾಹದಂತೆ ನಿರಂತರವಾಗಿ ಶ್ರೀಹರಿಯಲ್ಲಿ ಜ್ಞಾನಪೂರ್ವಕವಾಗಿ ಮಾಡುವುದೇ ಭಕ್ತಿ.

ಶ್ರೀಕಾಂತನೊಬ್ಬನೇ ಅನಿಮಿತ್ತ ಬಂಧು. ಬಾಕಿ ಎಲ್ಲವೂ ನಿಮಿತ್ತ ಮಾತ್ರವೆಂದು ತಿಳಿದು ಪ್ರೀತಿಯನ್ನು ಮಾಡುವುದು. ಭಕ್ತಿ ಎನ್ನುವುದು ಜ್ಞಾನಪೂರ್ವಕವಾಗಿರಬೇಕು.

**"ಮಹಾತ್ಮ ಜ್ಞಾನಪೂರ್ವಸ್ತು ಸುದೃಢ ಸರ್ವತೋऽಧಿಕಃ ।**
**ಸ್ನೇಹೋಭಕ್ತಿರಿತಿ ಪ್ರೋಕ್ತಸ್ತಯಾಮುಕ್ತಿರ್ನಚಾನ್ಯಥಾ ॥"**

ಅನಂತ ಅನವದ್ಯ ನಿರವಧಿಕ, ಕಲ್ಯಾಣ ಗುಣತ್ವ ಜ್ಞಾನಪೂರ್ವಕವಾಗಿ ಸಮಸ್ತ (ಸ್ವ ಆತ್ಮ ಆತ್ಮೀಯ) ವಸ್ತುಗಳಿಗಿಂತಲೂ ಅನಂತಾನಂತ ಅನೇಕ ಗುಣಪೂರ್ಣನಾದವನೆಂದು. ನಿರಂತರ ಧಾರಾಕಾರವಾಗಿ ಸ್ನೇಹವಿಡುವುದೇ ಭಕ್ತಿ. ಇಂತಹ ಭಕ್ತಿಯಿಂದಲೇ ಮುಕ್ತಿ ಲಭಿಸುವುದು. ಅನ್ಯಮಾರ್ಗಗಳಿಂದಾಗುವುದಿಲ್ಲ.

ಮೂಢ, ಅಂಧಭಕ್ತಿ ಎನ್ನುವುದಕ್ಕೆ ಅರ್ಥವೇ ಇಲ್ಲ. ಭಕ್ತಿ, ಜ್ಞಾನ ಸಹಿತವಾಗಿಯೇ ಇರಬೇಕು. ಪರಮಾತ್ಮನಲ್ಲಿ ಭಕ್ತಿ ಮಾಡುವುದೆಂದರೆ ಶ್ರೀಹರಿಯ ವಿಷಯಕವಾಗಿ ಸಚ್ಛಾಸ್ತ್ರ ಶ್ರವಣ, ಮನನ, ನಿಧಿಧ್ಯಾಸನ ಉಪದೇಶ ಹೊಂದಿದ ಜ್ಞಾನವೇ ಶ್ರೀಶನಲ್ಲಿ ಭಕ್ತಿ ಎನ್ನಲಾಗಿದೆ. ಭಕ್ತಿಯು ತಾರತಮ್ಯೋಪೇತವಾಗಿರಬೇಕು.

**ವಿಷ್ಣು ಭಕ್ತಿರ್ದೇವೇಭಕ್ತಿರ್ಗುರುಭಕ್ತಿಸ್ತಥೈವ ಚ ।**
**ತತ್ತಚ್ಛ್ರೇಷ್ಠ್ಯಾನುಸಾರೇಣಮುಕ್ತಾ ನಿಯತಸಾಧನಂ ।**
**ಭಕ್ತಿ ಪೂರ್ತಾ ಭವೇನ್ಮುಕ್ತಿಸ್ತದಭಾವೇಚನೋಭವೇತ್ ॥**

ಶ್ರೀಹರಿಯಲ್ಲಿ, ದೇವತೆಗಳಲ್ಲಿ, ಗುರುಗಳಲ್ಲಿ ಅವರವರ ಉತ್ತಮತೆಯನ್ನು ಅನುಸರಿಸಿದರೇನೇ ಮುಕ್ತಿಗೆ ಸಾಧನವು. ಹೀಗೆ ತಾರತಮ್ಯ ಪ್ರಕಾರ ಭಕ್ತಿ ಮಾಡಬೇಕು. ಅಪೂರ್ಣವಾದ ಭಕ್ತಿಯಿಂದ ಮುಕ್ತಿಯು ಲಭಿಸುವುದಿಲ್ಲ.

ಭಕ್ತಿಯಿಂದ ಭಗವಂತನು ಪ್ರಸನ್ನನಾಗಿ ಮುಕ್ತಿಕೊಡುವನು.

**"ಭಕ್ತ್ಯಾಪ್ರಸನ್ನೋ ಭಗವಾನ್ ದದ್ಯಾಜ್ಞಾನಮನಾಕುಲಂ ।**
**ತಯೈವ ದರ್ಶನಂಯಾತಃ ಪ್ರದದ್ಯಾನ್ಮುಕ್ತಿಮೇತಯೋ ॥**
**ಅನಿಮಿತ್ತಾ ಭಗವತಿ ಭಕ್ತಿಃ ಸಿದ್ಧೇರ್ಗರೀಯಸೀ ।**
**ಜರ ಮತ್ಯಾ ಶುಯಾಶೋಕಂ ನಿರ್ಗೀಣಮನಲೋಕೋಯಥಾ ॥**

ಅನಿಮಿತ್ತ (ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ನಿಷ್ಕಾಮ ಕರ್ಮಗಳಿಂದ) ಭಗವಂತನು ಪ್ರೀತನಾದಾಗ ಮುಕ್ತಿಯನ್ನು ದಯಪಾಲಿಸುವನು. ನಿರ್ವ್ಯಾಜ್ಯ ಭಕ್ತಿಯು ಒಣಗಿದ ಸೌದೆಯನ್ನು ಭಕ್ತಿ ಎಂಬ ಅಗ್ನಿಯು ಸುಡುವಂತೆ ಲಿಂಗದೇಹವು ಭಸ್ಮವಾಗುವುದು. (ಭಾಗವತ)

ಅಪರೋಕ್ಷ ಜ್ಞಾನವು ಲಭಿಸಲು ಮೊದಲು ಅಭ್ಯಾಸ. ಪರಮಾತ್ಮನಲ್ಲಿ ಪ್ರೀತಿ, ಮುಕ್ತರಿಗೆ ಉಪಾಸನಾ ಭಕ್ತಿಗಳು ಸುಖರೂಪವೇ ಕೇವಲ ಸಾಧನವಲ್ಲ.

ಅನೇಕ ವಿಧ ಸಂಸಾರಿಕ ದುಃಖಗಳನ್ನು ಅನುಭವಿಸಿ ಸಜ್ಜನರ ಸಂಘ, ವಿಷಯ ಭೋಗಗಳಲ್ಲಿ ವಿರಕ್ತಿ ಶಮದಮಾದಿಗಳ ಶ್ರವಣ ಮನನಾದಿಗಳು, ಗುರುಭಕ್ತಿ, ಪರಮೇಶನಲ್ಲಿ ಭಕ್ತಿ, ಅಧರ್ಮರಲ್ಲಿ ದಯೆ, ಸ್ನೇಹಿತರಲ್ಲಿ ಅನುಕಂಪ, ಉತ್ತಮರಲ್ಲಿ ಭಕ್ತಿ (ಶ್ರದ್ಧೆ) ನಿವೃತ್ತಿ ಕರ್ಮಾನುಷ್ಠಾನ, ನಿಷಿದ್ಧ ಪರಿತ್ಯಾಗ, ಭಗವದರ್ಪಣ ಬುದ್ಧಿ, ತಾರತಮ್ಯ ಜ್ಞಾನ, ಪಂಚ ಭೇದ ಉಪಾಸನಾ ಇವೇ ಭಕ್ತಿಗೆ ಮುಖ್ಯ ಹೇತುವು. ಇದೇ ಅಪರೋಕ್ಷ ಜ್ಞಾನಕ್ಕೆ ಸಾಧನೆ.

ಕೊನೆಗೆ **ತ್ರಿತಯಾ ಪ್ರಮಾಣಮಖಿಲಾ**

**ಮಾನಾಧೀನಾ ಮೇಯಸಿದ್ಧಿಃ** ಎಂಬ ವಾಕ್ಯದಂತೆ ಮಧ್ವಸಿದ್ಧಾಂತ (ಪ್ರಮೇಯ)ವು ಪ್ರಮಾಣಗಳಿಂದಲೇ ತಿಳಿಯಲಾಗುವುದು. (ಶ್ರೀಮದಾಚಾರ್ಯರು ಏನೇ ತಿಳಿಸಿದರೂ ಪ್ರಮಾಣಗಳ ಆಧಾರದಿಂದಲೇ ಇರುವುದು). ಪ್ರಮಾಣಗಳು ಶಾಸ್ತ್ರರೀತ್ಯ (೧) ಪ್ರತ್ಯಕ್ಷ (೨) ಅನುಮಾನ (೩) ಆಗಮಗಳೆಂದು ಸಿದ್ಧ ಸಮ್ಮತವು. ಹಿಂದಿನ ಪುಟದಲ್ಲಿ ಈ ಬಗ್ಗೆ ಸ್ವಲ್ಪ ತಿಳಿಸಲಾಗಿದೆ.

ಪ್ರಮಾಣವು ಪ್ರಮೇಯದಲ್ಲಿ ಅಂತರ್ಗತವಾಗಿರುವುದರಿಂದ ಪ್ರಮೇಯ ನಿರೂಪಣೆ ಅವಶ್ಯಕವು. ೧೦ ಪದಾರ್ಥಗಳು, ೨೦ ದ್ರವ್ಯಗಳು, ೨೧ ಗುಣಗಳು, ೩ ವಿಧ ಕರ್ಮ, ನಿತ್ಯಾನಿತ್ಯಗಳು ೨ ವಿಧ, ಜಾತಿ ಉಪಾಧಿ ಸಾಯವ್ಯ ೨ ರೀತಿ, ಜೀವ ಸತ್ವವು ನಿತ್ಯ, ಬ್ರಾಹ್ಮಣತ್ವವು ಅನಿತ್ಯ, ಭಗವಂತನಲ್ಲಿ ಸರ್ವಜ್ಞತ್ವವೆಂಬ ಉಪಾಧಿ ನಿತ್ಯವು, ದಂಡ, ಆಸನ, ಅನಿತ್ಯ.

**ವಿಶೇಷ :** ಭೇದವಿಲ್ಲದಿದ್ದರೂ ಭೇದ ವ್ಯಾಪಾರ ಮಾಡುವುದು. ಅದು ಅನಂತ.



ಕೈಯ್ (ಹಸ್ತ) ಆದಿ ಅಂಗಗಳು, ಅಂಗಯಿಂದ ಅತಿರಿಕ್ತವಾಗಿರುವುದು ಅಂಶೀ ಎನ್ನಲಾಗಿದೆ.

ಶಕ್ತಿಯು ನಾಲ್ಕು ವಿಧ. ಅಚಿಂತ್ಯ ಶಕ್ತಿ, ಅಧೇಯ ಶಕ್ತಿ, ಸಹಜ ಶಕ್ತಿ ಮತ್ತು ಪದ ಶಕ್ತಿ ಎಂದು. (ಇವುಗಳ ವಿವರ ಅನುಬಂಧದಲ್ಲಿ ನೋಡಿ) ಅಚಿಂತ್ಯ ಶಕ್ತಿ ರಮಾದೇವಿ. ಬ್ರಹ್ಮಾದಿಗಳಿಂದ ನಾರಾಯಣನಲ್ಲಿ ನಿರವಧಿಕ ಶಕ್ತಿ. **(೧) ಆಸೀನೋದೂರಂವ್ರಜತಿ ಶಯಾನೋಯಾಂತಿ ಸರ್ವತಃ । (೨) ಅಣೋರಣೀಯಾನ್ ಮಹತೋ ಮಹೀಯಾನ್ ॥ (೩) ವಿಚಿತ್ರ ಶಕ್ತಿಃ ಪುರುಷಃ ಪುರಾಣಃ (೪) ಗುಣಾಃ ಶೃತಾ** (ಕಾಠಕ) **ಸ್ಯುವಿರುದ್ಧಾಶ್ಚದೇವೇ** – ಅನಾದಿ ನಿತ್ಯನಾದ ಶ್ರೀಹರಿಯಲ್ಲಿ ವಿಚಿತ್ರ ಶಕ್ತಿ ಇರುವುದು. ಗುಣಪೂರ್ಣತ್ವ ಇಂತಹ ಪರಮಾತ್ಮನಲ್ಲಿ ವಿರುದ್ಧ ಧರ್ಮಗಳು ಇರುವುದಾಗಿ ಶೃತಿಗಳು ತಿಳಿಸುತ್ತವೆ. ಪೂರ್ಣ ಶಕ್ತನು ಶ್ರೀಮಹಾವಿಷ್ಣುವೇ. ಲಕ್ಷ್ಮೀದೇವಿಯಿಂದ ಆರಂಭಿಸಿ ತಾರತಮ್ಯ ಪ್ರಕಾರ ತಿಳಿಯುವುದು. ಶ್ರೀಹರಿಯೊಬ್ಬನೇ **ಸ ಏಕಃ.** ಪೂರ್ಣಶಕ್ತಿವಂತನು.

**ಸರ್ವೇಽಲ್ಪಶಕ್ತಯುಕ್ತಯಶ್ಚೈವ ಪೂರ್ಣಶಕ್ತಿಃ ಪರೋ ಹರಿಃ ॥**

ಯಥಾರ್ಥಜ್ಞಾನ ಹುಟ್ಟಿಸುವುದು **ಪ್ರಮಾಣ.** ಅಯತಾರ್ಥ ಜ್ಞಾನ, ಅನ್ಯಥಾಜ್ಞಾನ ಹುಟ್ಟಿಸುವುದು **ಅಪ್ರಮಾಣ.** ಆಗಮವು ಅನಾದಿ ನಿತ್ಯವು. ಶೃತಿಗಳು ಸ್ವತಃ ಪ್ರಮಾಣ. ವೇದಗಳು ಪ್ರಮಾಣವೆಂದು ಸಾಧಿಸಲು ಮತ್ತೊಂದು ಗ್ರಂಥದಿಂದ ಪ್ರಮಾಣ್ಯವನ್ನು ಸಾಧಿಸಲು ಬರುವುದಿಲ್ಲ. (ವೇದಗಳು ಪ್ರಮಾಣವೆಂದು ತಿಳಿಸಲು ಅನ್ಯ ಗ್ರಂಥಗಳಿಂದ ಹೇಳಲು ಬರುವುದಿಲ್ಲ) ಮಹಾಭಾರತಾದಿ ಪುರಾಣಗಳು ಶ್ರೀವೇದವ್ಯಾಸರಿಂದ ರಚಿತವಾದವು. ಕರ್ತೃತ್ವವಿದ್ದರೂ ಪ್ರಮಾಣವೇ ಸರಿ.

**ನಿತ್ಯಾ ವೇದಾಸ್ಸಮಸ್ತಾಶ್ಚ ಶಾಶ್ವತಾವಿಷ್ಣು ಬುದ್ಧಿಗಾಃ ॥**

**ಅನಾದಿ ನಿಧನಾ ನಿತ್ಯಾ ವಾಗುತ್ಸೃಷ್ಟಾಸ್ವಯಂಭುವ ।**
**ಋಷಿಣಾಂ ನಾಮಧೇಯಾನಿಯಾಶ್ಚ ವೇದೇಷು ದೃಷ್ಟಯಃ**
**ವೇದಶಬ್ದೇಭ್ಯ ಏವಾದೌನಿರ್ಮಿಮೇಸ ಮಹೇಶ್ವರಃ ॥**

ಸರ್ವತಂತ್ರ ಸ್ವತಂತ್ರನಾದ ಮಹಾವಿಷ್ಣುವಿನಿಂದ ಸೃಷ್ಟಿ ಲಯವಿಲ್ಲದ (ನಾಶರಹಿತ) ನಿತ್ಯವಾದ ವೇದಗಳು ಉಚ್ಚರಿಸಲ್ಪಟ್ಟಿತು. ಇಂತಹ ವೇದ ರಾಶಿಗಳಿಂದಲೇ ಶ್ರೀಹರಿಯು ರೂಪಗಳನ್ನು ಬ್ರಹ್ಮರುದ್ರಾದಿ ದೇವತೆಗಳು ವೇದದಿಂದಲೇ (ವೇದ ಮೂಲಕ) ಕಂಡರು.

ಹೀಗೆ ಪ್ರಮಾಣತ್ರಯಗಳಿಂದಲೇ ಶ್ರೀಮನ್ನಾರಾಯಣನ ಸರ್ವೋತ್ತಮತ್ವವು ಅತೀಂದ್ರಿಯ ವಿಷಯವಾಗಿರುವುದರಿಂದ ಅವುಗಳಿಂದಲೇ ಮುಖ್ಯವಾಗಿ ತಿಳಿಯಬೇಕು.

**''ಆಮ್ನಾಯ ವೇದ್ಯೋ ಹರಿಃ''** ಎಂಬುದು ಸಿದ್ಧವಾಯಿತು.

ಈ ರೀತಿ ಮಧ್ವಶಾಸ್ತ್ರದ ಸಾರವನ್ನು ಸಿದ್ಧಾಂತ ಯಥಾಶಕ್ತಿ ಯಥಾಮತಿ ಪ್ರಮಾಣಗಳ ಆಧಾರದಿಂದ ಸಂಗ್ರಹಿಸಿ ಆದಷ್ಟು ಸುಲಭವಾಗಿ ಆಬಾಲ ವೃದ್ಧರಿಗೂ ತಿಳಿಯುವ ಉದ್ದೇಶದಿಂದ ಬರೆಯಲಾಗಿದೆ. ಶ್ರೀ ವೇದವೇದ್ಯನೇ ಆದ ಶ್ರೀಹರಿಯು ಸುಪ್ರೀತನಾಗಬೇಕು. ಅಲ್ಲದೇ ವೈಷ್ಣವ ಭಕ್ತರು ಈ ಅಲ್ಪನ ಕೃತಿಯನ್ನು ಅನುಮೋದಿಸಿ, ಸ್ವೀಕರಿಸಿದರೆ ನನ್ನ ಶ್ರಮ ಸಾರ್ಥಕವಾಗುವುದು.

**''ಪ್ರೀಣಯಾಮೋ ವಾಸುದೇವಂ''**

ಶ್ರೀ ಲಕ್ಷ್ಮೀವೆಂಕಟೇಶನ ಚರಣಗಳಲ್ಲಿ ಈ ಕುಸುಮವನ್ನು ಭಕ್ತಿಯಿಂದ ಅರ್ಪಿಸಲಾಗಿದೆ.

ಇತಿ ಸುಜನ ವಿಧೇಯ

**ಬದರೀನಾಥಾಚಾರ್ಯ ಘೂಳೀ**



## ಅನುಬಂಧ-೧

ಸಾಧಾರಣವಾಗಿ ಶಂಕರರ ಭಾಷ್ಯ. ಅದಕ್ಕೆ ವ್ಯಾಖ್ಯಾನಗಳನ್ನು ಗಮನಿಸಿದರೆ ಅದ್ವೈತ ಮತಕ್ಕೆ ಆಧಾರಸ್ತಂಭದಂತಿರುವ ಮುಖ್ಯ ಪ್ರಮೇಯಗಳನ್ನು ಅವಲೋಕಿಸಿದಾಗ ಶಂಕರಭಾಷ್ಯಕ್ಕೆ ವ್ಯಾಖ್ಯಾನಕಾರರು ಪರಸ್ಪರ ವಿರುದ್ಧ ಅಭಿಪ್ರಾಯವಿರುವುದಾಗಿ ಗಮನಿಸಬೇಕು. ಆನಂದಗಿರಿ, ಭಾಮತಿ ರತ್ನಪ್ರಭಾ ಇವರು ಮುಖ್ಯ ವ್ಯಾಖ್ಯಾನಕಾರರು.

ಅವಿದ್ಯಾ, ಅವಿದ್ಯಾನಿವೃತ್ತಿ, ಅನಿರ್ವಚನೀಯ ಇತ್ಯಾದಿಗಳೇ ಮೂಲಭೂತ ಸಿದ್ಧಾಂತವು (They are bedrock of Advaitha Siddhantha).

ಇವುಗಳಿಗೆ ವ್ಯಾಖ್ಯಾನ ಮಾಡುವಲ್ಲಿ ಪರಸ್ಪರ ಭಿನ್ನ ರೀತಿಯಲ್ಲಿ ತಿಳಿಸಿರುತ್ತಾರೆ.

ಶ್ರೀ ಶಂಕರರ ಮಾಯಾವಾದ ಪ್ರಕಾರ ಜಗತ್ತಿನ ಸ್ವರೂಪವನ್ನು ಹೀಗೆ ತಿಳಿಸುತ್ತಾರೆ. **ಸತ್ಯಂ ಜಗದಿತಿ ಭಾನಂ ಸಂಸೃತಯೇ ಸ್ಯಾದಪಕ್ವಚಿತ್ತಾನಾಂ । ತಸ್ಮಾದಸತ್ಯಮೇತತ್ ನಿಖಿಲಂ ಪ್ರತಿಪಾದಯಂತಿ ನಿಗಮಾಂತಾಃ ॥**

ಅಪಕ್ವವಾದವರೆಗೆ ಜಗತ್ತು ಸತ್ಯವೆಂದು ತಿಳಿಯುವುದು ಜನನ ಮರಣಾಖ್ಯಬಂಧವು ಇರುವುದಾಗಿ ತೋರುತ್ತದೆ. ಆದ್ದರಿಂದ ವೇದಾಂತಿಗಳು ಈ ಎಲ್ಲಾ ಜಗತ್ತು (ಬ್ರಹ್ಮಾಂಡವು) ಬ್ರಹ್ಮನೇ ಆಗಿರುತ್ತಾನೆ. **(ಸ್ವಾತ್ಮ ನಿರೂಪಣಮ್ ಶಂಕರ)**

ಹೀಗೆ ಹೇಳಿದರೂ ಶಂಕರರು ಬೌದ್ಧ ಮತವನ್ನು ಖಂಡಿಸಿದರು. (ಸೂನ್ಯವಾದ) ಶಂಕರರ ಈ ರೀತಿ ಸೂನ್ಯವಾದವನ್ನು ನಿರಾಕರಿಸಿದರೂ ಮಾಯಾವಾದಕ್ಕೂ ಸೂನ್ಯವಾದಕ್ಕೂ ಹೆಚ್ಚೇನ ಭೇದವಿರುವುದಾಗಿ ಅನುಯಾಯಿಗಳು ಹೇಳುತ್ತಾರೆ.

ಶಂಕರರ ಮಾಯಾವಾದಕ್ಕೂ ಸೂನ್ಯವಾದಕ್ಕೂ ಅಂತರವಿರುವುದಿಲ್ಲವೆಂದು ಶಂಕರರನ್ನು ವಿಮರ್ಶಿಸಿರುತ್ತಾರೆ.

**''ಮಾಯಾವಾದ ಮಸಚ್ಛಾಸ್ತ್ರಂ ಪ್ರಚ್ಛನ ಬೌಧಮಚ್ಯತೇ ಮಯ್ಯೈವ ಕತಿಥಂ ದೇವಿಕತಾ ಬ್ರಾಹ್ಮಣ ರೂಪಿಣಾ ॥''**

ಪಾರ್ವತಿ ಕೇಳು. ಮಾಯಾವಾದವು ಶಾಸ್ತ್ರವಿರುದ್ಧವು. ಅಸತ್ಯ ಸಿದ್ಧಾಂತವು ಬೌದ್ಧಶಾಸ್ತ್ರವು. ಅದನ್ನು ನಾನೇ ಬ್ರಾಹ್ಮಣನಾಗಿ ಅವತರಿಸಿ ಸೂನ್ಯವಾದವನ್ನು ಮಾಯಾವಾದ ರೂಪಾಂತರದಿಂದ ಕಲಿಯುಗದಲ್ಲಿ ದುಷ್ಟಜನ ಮೋಹನಾರ್ಥವಾಗಿ ಪ್ರತಿಪಾದನೆ ಮಾಡಿರುತ್ತೇನೆ. (ಪದ್ಮ ಪುರಾಣದಲ್ಲಿ ಶಿವಪಾರ್ವತೀ ಸಂವಾದ).

ಇದರಿಂದ ಶಿವನೇ ಕಲಿಯುಗದಲ್ಲಿ ಅಸಜ್ಜನರ ಮೋಹನಾರ್ಥವಾಗಿ ಬ್ರಾಹ್ಮಣನಾಗಿ ಅವತರಿಸಿ ಬೌದ್ಧಧರ್ಮವನ್ನು ಬೇರೊಂದು ರೀತಿಯಲ್ಲಿ ಪ್ರಚಾರ ಮಾಡಿದನೆಂದು ಅವರನ್ನು ಪ್ರಚ್ಛನ ಬುದ್ಧನೆಂದಾಗಿ ಹೇಳಲಾಗಿದೆ.

ಇಲ್ಲಿ ಶಂಕರರು ಶಂಕರಾಚಾರ್ಯರಾಗಿ ಹುಟ್ಟಿ ವಿಷ್ಣುವಿನಿಂದ ವೇದವ್ಯಾಸರೊಂದಿಗೆ ವಾದಮಾಡಿದರೆಂದು ವಾದವನ್ನು ಕೇಳಿದ ಶಿಷ್ಯರು ಹೀಗೆ ಉದ್ಗಾರ ತೆಗೆದಿದ್ದಾರೆ.

**"ಶಂಕರಃಶಂಕರೋಽಭೂತ್ ವಿಷ್ಣುಸ್ತು ಕೇಶವೋಽಸ್ವಯಂತಯೋಃ ರ್ವಿವಾದೇ ಸಂಪ್ರಾಪ್ತೇ ಕಿಂಕರಾಃ ಕಿಂಕುರ್ವತಃ"** ನಾಗಾರ್ಜುನನೆಂಬ ಬೌದ್ಧ ಸನ್ಯಾಸಿ ಸೂನ್ಯವಾದವನ್ನು ಪ್ರತಿಪಾದ ಮಾಡಿದನು. ಶಂಕರರ ಮಾಯಾವಾದವೂ ಸೂನ್ಯವಾದಕ್ಕೆ ಅತಿ ಹತ್ತಿರವಿರುವುದೆಂದು ಡಾ|| ರಾಧಾಕೃಷ್ಣನ್ Indian philosophyಯಲ್ಲಿ ತಿಳಿಸಿರುತ್ತಾರೆ. "The Advaitic distinction of Vyavahara or experience and paramartha or Reality correspond to the Samnthi and Pavartha of Madhyamikas (Dr. S.R.K.)

ಮಾಯಾವಾದ ರೀತ್ಯ ಈ ಜಗತ್ತು ತಾತ್ಕಾಲಿಕ (Phenomenon) ತೋರಿಕೆ ಸತ್ಯದಂತೆ ಗೋಚರವಸ್ತು. ಜಗತ್ತಿನಲ್ಲಿ ಎರಡು ರೀತಿ (1) Congeious ..... ಜ್ಞಾನ. ಇದೇ ಚಿತ್. ಸ್ವಚ್ಛಂದ ಪ್ರಜ್ಞೆ. ಇದಕ್ಕೆ ವಿರುದ್ಧವಾದದ್ದು ಅಚಿತ್ (ಪ್ರಜ್ಞೆ ಇಲ್ಲದಿರುವುದು.)

ಚಿತ್‌ನಲ್ಲಿ ಜೀವ ಚೇತನ. ಚಿತ್ ಶುದ್ಧ ಪ್ರಜ್ಞೆ. ಬ್ರಹ್ಮನೊಬ್ಬನೇ ಪರಮಚೇತನ/ನಿತ್ಯ ಆಬಾಧಿತ ನಿರ್ಗುಣ. ಜಗತ್ತು ಅಚಿತ್ – ಪ್ರಕೃತಿ, ಬ್ರಹ್ಮನ ಮೇಲೆ ಹೊರಿಸಲಾಗಿದೆ. ಇದು ಅವಿದ್ಯಾಕ್ಕೆ ಹೇತು.

ಆದರೆ ಬ್ರಹ್ಮನೆಂಬ ಸತ್ಯ ವಸ್ತುವಿನ ಮೇಲೆ ಅವಿದ್ಯಾರೂಪ ಅಚಿತ್ ಪ್ರಕೃತಿ ರೂಪ ಅವಿದ್ಯೆ ಹೇಗೆ ಹೊರಿಸಲಾಗುವುದು ?

Brahman is the one Absolute Reality. Eternal unchanged = unqualified chief Animate object. The question is how can an inanimate Achit Avidya imposed on Brahma.

An Animate object can never become an inanimate object, a stone boulder cannot, has not transform itself into a living being nor does it change in future.



According to Mayavada, the so called world is compared to dream = dream is true till it lost. But once the person sleeper wakes in the morning, dream vanishes into nothingness.

This is insufficiently explained as Mayavada.

ಈ ವಾದವನ್ನು ಆಚಾರ್ಯ ಶ್ರೀಮಧ್ವರು ಖಂಡಿಸಿ ಜಗತ್ತು ಪರಮ ಸತ್ಯ ಮಾಯಾ ಅಲ್ಲವು ಎಂದು ತಿಳಿಸಲು

**"ಜಗತ್ಪ್ರವಾಹಃ ಸತ್ಯೋಽಯಂ ನೈವ ಮಿಥ್ಯಾಕಶ್ಚನ್ ।**
**ಯೋ ತ್ವೇತದನ್ಯಥಾ ಬ್ರುಯುಃ ಸರ್ವಹಂತಾರ ಏವ ತೇ ॥** (ಭಾ.ತಾ.ನಿ.)

ಪರಿಣಾಮವಾದದವರ ಪ್ರಕಾರ ಬ್ರಹ್ಮನು ಸ್ವಯಂ ತಾನೇ ಜಗತ್ತಾಗಿ ಪರಿಣಮಿಸಿದನು. ಇದನ್ನು ವಿವರ್ತವಾದವೆನ್ನುವರು. ಅಂದರೆ ಬ್ರಹ್ಮ ಒಬ್ಬನೇ ಇದ್ದನು.

(೧) ಪರಿಣಾಮವಾದ (೨) ವಿವರ್ತವಾದ ಈ ಎರಡೂ (೧) ಪರಿಣಾಮವಾದವು (ಅ) ಶ್ರೀರಾಮಾನುಜಾಚಾರ್ಯರ ಮತ (೨) ವಿವರ್ತ – ಇದೂ ಪರಿಣಾಮವೆಂದು ಅರ್ಥ ಕೊಡುವುದು. ಅನ್ಯಥಾ ಭಾವ, ಭ್ರಾಂತಿಯಿಂದ ತೋರುವ ಅವಿದ್ಯೆ ಬ್ರಹ್ಮನಲ್ಲಿ ಅವಿದ್ಯೆಯು ಜಗತ್ತು ಅಭ್ಯಾಸವು ವಿವರ್ತ.

(ಆ) ಶಂಕರಾಚಾರ್ಯರ ಸಿದ್ಧಾಂತ ... ಕಾರಣವೇ ಕಾರ್ಯರೂಪದಿಂದ ಕಾಣುವುದು. ಕಾರ್ಯವಲ್ಲದೆ ಬೇರೊಂದು ಇರುವುದಿಲ್ಲ. ತಸ್ಮಾತ್ ಕಾರಣವೊಂದೇ ಸತ್ಯ. ಕಾರ್ಯ ಅನಿತ್ಯ.

Both the theories repudiate the existence of eternal matter. ಎರಡೂ ಸಿದ್ಧಾಂತಗಳು ಅಚಿತ್ ಪ್ರಕೃತಿಯನ್ನು ತಿರಸ್ಕರಿಸುತ್ತಾರೆ. ಹೇಗೆಂದರೆ : ಹಾಲು ಪರಿಣಾಮ ಹೊಂದಿ ಮೊಸರಾಯಿತು. ಈ ವಾದವು ಅನುಭವ ವಿರೋಧ. ಹಾಲು ಮೊಸರಾಗಿ ಪರಿಣಮಿಸಬೇಕಾದರೆ ತಮ್ಮಷ್ಟಕ್ಕೆ ತಾವೇ ಪರಿಣಮಿಸಿಲ್ಲ. ಹಾಲಿಗೆ ಹೆಪ್ಪು ಕೂಡಿಸಿದಾಗ ಮೊಸರಾಗುವುದು. ಹೆಪ್ಪು ಹಾಕಲೂ ಒಬ್ಬ ವ್ಯಕ್ತಿ ಇರಬೇಕು. ಹಾಲು ಜಡ. ಇನ್ನು ಹಾಲಿದ್ದಂತೆ ಬ್ರಹ್ಮ ಅವನೇ ಮೊಸರಾದ ಎಂದು ತಿಳಿಸಿದಾಗ, ಬ್ರಹ್ಮ ಮೊಸರಾದಂತೆ. ಪುನಃ ಹಾಲಾಗಿ ಏಕೆ ಪರಿಣಮಿಸಿಲ್ಲ ?

ಹಾಲೊಂದೇ ಸತ್ಯವಿದ್ದಂತೆ, ಬ್ರಹ್ಮನೂ ಸತ್ಯವೆನ್ನುವ ವಾದ ಅರ್ಥಹೀನ. ದಡ್ಡರಿಗೆ ಉಪದೇಶ ಮಾಡಿ ಮೂರ್ಖರಿಗೆ ಇದರ ಅಂತರಂಗ ಅರ್ಥವಾಗುವುದಿಲ್ಲ. ಹಾಗೇ ಬ್ರಹ್ಮನು ಜಗತ್ತಾಗಿ ಪರಿಣಮಿಸಿದನು. ಇದರ ಪರಿಣಾಮವಾಗಿ ಕೊನೆಗೆ ಉಳಿದಿದ್ದು ಬ್ರಹ್ಮನೊಬ್ಬನೇ. ಈ ಮತವನ್ನು ರಾಮಾನುಜರು ವಲ್ಲಭಾಚಾರ್ಯ, ನಿಂಬಾರಕರು ಸಾಧಿಸುತ್ತಾರೆ.

ಶ್ರೀಮದಾನಂದತೀರ್ಥರು ನಿರಾಕರಿಸುತ್ತಾ ಶೃತಿಗಳು ಸ್ಪಷ್ಟವಾಗಿ ಬ್ರಹ್ಮನು ನಿರ್ವಿಕಾರ, ವಿಕಾರ ರಹಿತ, Immutable ಹೀಗೆ ತಿಳಿಸುತ್ತಿರುವುದು. ಹೀಗಿರುವಾಗ ಬ್ರಹ್ಮನೇ ಜಗತ್ತಾಗಿ ಪರಿಣಮಿಸಿದನೆಂದು ಹೇಳುವುದು ಶೃತಿವಾಕ್ಯವನ್ನು ತಿರಸ್ಕರಿಸಿದಂತಾಗುವುದು.

ಶ್ರೀಮದಾಚಾರ್ಯರ ಪ್ರಕಾರ ಅಚಿತ್ ಪ್ರಕೃತಿಯು ಉಪಾದಾನ ಕಾರಣವಾಗಿಲ್ಲ. ಆದರೆ ಅಚಿತ್ ಪ್ರಕೃತಿಯನ್ನು ನಿಮಿತ್ತಮಾಡಿ ಜಗತ್ತು ಸೃಷ್ಟಿಸಿದನು. ಅಂದಾಗಿ ಶಂಕರರು ಹೇಳಿದಂತೆ ಜಗತ್ತು ಭ್ರಾಂತಿ ಮೂಲಕ ಹುಟ್ಟಿತೇ ಹೊರತು ಪ್ರಪಂಚವು ಅಸತ್ಯ ಮಿಥ್ಯಾ ಎನ್ನುವುದೂ ಸಹ ವೇದವಾಕ್ಯಗಳನ್ನು ನಿರಾಕರಿಸಿದಂತೆ ಆಯಿತು.

ಶಂಕರರು ತಮ್ಮ ವಾದವನ್ನು ಸ್ಪಷ್ಟೀಕರಿಸಲು **''ಸರ್ವ ಜೀವೇ ಸರ್ವಸಂಸ್ಥೇ ಬೃಹಂತೆ ಅಸ್ಮಿನ್ ಹಂಸೋ ಭ್ರಾಮ್ಯತೆ ಬ್ರಹ್ಮಚಕ್ರೇ ॥''** (ಶ್ವೇತಾ. ಉ. ೧.೬)

**''ಏಕಏವ ಹಿ ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ। ಏಕಥಾ ಬಹುಥಾ ಚೈವ ದೃಶ್ಯತೇ ಜಲಚಂದ್ರವತ್''**

**ಒಟ್ಟು ಸಾರಾಂಶ :** ಚಿತ್‌ಗೂ ಅಚಿತ್‌ಗೂ ಮೂಲತಃ ಭೇದವಿದೆ. ಬ್ರಹ್ಮನು ಪರಮ ಚಿತ್ ಜ್ಞಾನಸ್ವರೂಪಿ. ಜಗತ್ತಾದರೋ ಅಚಿತ್. ಅಜ್ಞಾನರೂಪ. ಅಚಿತ್‌ಗೆ ಸ್ವಪ್ರೇರಣೆ ಇರುವುದಿಲ್ಲ. **(ಈಶಾವಾಸ್ಯಮಿದಗುಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್)** ಪ್ರಪಂಚವು ಅಚೇತನಾತ್ಮಕವಾದುದರಿಂದ ತಾನಾಗಿಯೇ ಒಂದು ಕಾರ್ಯವನ್ನು ಮಾಡುವ ಸಾಮರ್ಥ್ಯವಿರುವುದಿಲ್ಲ. ಜಗತ್ತು ಅಚೇತನ (ಜಡಭೂತ)ವಾದ್ದರಿಂದ ಅದಕ್ಕೆ ಪ್ರವೃತ್ತಿ ಉಂಟಾಗಲು ಭಗವಂತನು ಪ್ರೇರೇಪಿಸಿ ಶಕ್ತಿಪ್ರದನಾದನು. ಅಲ್ಲದೇ ಜಗತ್ತು ಪರಮಾತ್ಮನನ್ನು ಆಶ್ರಯಿಸಿಕೊಂಡಿದೆ. ಈ ಕಾರಣದಿಂದ ಜಗತ್ತು ಭಗವಂತನಿಗೆ ಆವಾಸಸ್ಥಾನವಾಯಿತು. (ಆಚಾರ್ಯರ ಭಾಷ್ಯ ಸಾರ)



ಇಷ್ಟು ಸುಸ್ಪಷ್ಟವಾಗಿ ಶೃತಿಗಳು ತಿಳಿಸುತ್ತಿರುವಾಗ ಅವನ್ನು ನಿರಾಕರಿಸಿ ತಮ್ಮದೇ ಆದ ವಾದವನ್ನು ಕಲ್ಪಿಸಿ ಹೇಳುವುದು ವೇದಗಳಿಗೆ ಆಘಾತ ಮಾಡಿದಂತಾಯಿತು.

ಎಲ್ಲಾ ವೇದಾಂತಗಳು ಒಮ್ಮತವಾಗಿ ತಿಳಿಸುವುದೇನೆಂದರೆ ಮಿಥ್ಯಾಭೂತವಾದ ಪದಾರ್ಥ (ಇಲ್ಲವಾದ, ಅಸತ್ಯವಾದ)ಗಳಿಂದ ಏನನ್ನೂ ಸೃಷ್ಟಿಸಲಾಗದು.

God is not a magician who created something (this world) out of nothing. Science and Scientists say something has to be created out of something only. Discoveries or inventions (cannot and will not) are made out of some basic material that already existed.

Nothing can arise which has / did not existed before and nothing existing can be annihilated.

ಶ್ರೀಮದಾಚಾರ್ಯರೊಬ್ಬರೇ ಇಷ್ಟೊಂದು ದಾರ್ಶನಿಕರ ಪೈಕಿ ಪ್ರಾಯೋಗಿಕ ಕಾರ್ಯಶೀಲ ಸಾಧ್ಯತೆಯನ್ನು ಸ್ಥಾಪಿಸಿದವರು.

ಶ್ರೀಮದಾಚಾರ್ಯರು ಭಗವಂತನು ಏನು ಬೇಕಾದರೂ ಏನನ್ನಾದರೂ ಮಾಡಬಲ್ಲ. ಮಾಡಿದ್ದನ್ನು ಅಳಿಸಬಲ್ಲ. ಮಾಡಿದ್ದನ್ನು ಅನ್ಯಥಾವಾಗಿ ಮಾಡಬಲ್ಲ.

**''ಕರ್ತುಂ ಅಪಕರ್ತುಂ ಅನ್ಯಥಾ ಕರ್ತುಂ ಹರಿರೇವಹಿ''** ಆದರೆ ಭಗವಂತನು ಆ ರೀತಿ ಎಂದಿಗೂ ಮಾಡುವುದಿಲ್ಲ. ತನ್ನ ನಿಯಮವನ್ನು ಸರ್ವಥಾ ವ್ಯತಿರಿಕ್ತವಾಗಿ ಮಾಡುವುದಿಲ್ಲ. ಈ ವಿಷಯವನ್ನು **''ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಾಭಾವೋಜೀವ ಏವ ಚ । ಯದನುಗ್ರಹಸಂತಿ ನಸಂತಿ ಯದುಪೇಕ್ಷಯಾ''** – ಅನುವ್ಯಾಖಾನ. ನ್ಯಾಯ ವಿವರಣದಲ್ಲಿಯೂ

**ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಾಭಾವಶ್ಚೇತನಾಧೃತಿಃ ।**
**ಪ್ರಕೃತಿಃ ಪುರುಷಶ್ಚೈವ ನಸಂತಿ ಯದುಪೇಕ್ಷಯಾ ॥** ಶ್ರೀಮದಾಚಾರ್ಯರು ಸ್ಪಷ್ಟಪಡಿಸುತ್ತಾರೆ.

ವ್ಯಾವಹಾರಿಕವಾಗಿ ಸ್ವತಂತ್ರನಾದ ಪರಮಾತ್ಮನು ಇಷ್ಟೆಲ್ಲವನ್ನು ಮಾಡಲು ಸಮರ್ಥನೇ ? ಆದರೆ ಭಗವಂತನ ಸ್ವರೂಪವೇ ಬೇರೆ. ತಾನೇ ನಿರ್ಮಿಸಿದ ನಿಯಮ ಉಲ್ಲಂಘನೆಯನ್ನು ಮಾಡುವುದಿಲ್ಲ ಅವನ ಸಂಕಲ್ಪ. ಆದ್ದರಿಂದ ಜಗನ್ನಿರ್ಮಾಣಕ್ಕೆ ಪ್ರಕೃತ್ಯಾದಿಗಳನ್ನು ಉಪಾಸನೆ ಮಾಡಿ ತಾನು ನಿಮಿತ್ತಕಾರನಾಗುತ್ತಾನೆ ಎಂಬ ಸಿದ್ಧಾಂತ.

ಈವರೆಗೆ ಶ್ರೀಮಧ್ವರು ಹೇಳಿದಂತೆ ನಿಜ ಸತ್ಯಜ್ಞಾನಕ್ಕೆ ಮೂಲಸ್ಥಾನ (ಉಗಮ). ಸಚ್ಛಾಸ್ತ್ರ ಗ್ರಹಣ ಶಕ್ತಿ, ಅನುಮಾನ ಅತಿಮುಖ್ಯವೆಂಬುದು ತಿಳಿಯುವುದು. ಇವುಗಳಲ್ಲಿ ಜ್ಞಾನ ಗ್ರಹಣ ಶಕ್ತಿ ಮುಖ್ಯ ನಿರ್ಣಯಾತ್ಮಕವು.

**ಪ್ರತ್ಯಕ್ಷಸಿದ್ಧೇಷ್ವರ್ಥೇಷು ಪ್ರಶ್ನೇ ಮಾಮಕ್ಷಜಂವದೇತ್ ।**
**ಜ್ಞಾನಂ ವಾ ಜ್ಞಾನ ಸಿದ್ಧೇಷು ನಾನುವಾನಂ ಪ್ರಥಮಂವದೇತ್ ॥**(ಕಥಾಲಕ್ಷಣ)

ಇಂದ್ರಿಯಗಳಿಂದ ಗೋಚರವಾದದ್ದನ್ನು ಪ್ರಮಾಣತ್ವೇನ ಸಿದ್ಧವಾಗುವುದು. ಆದರೆ ಅಪ್ರತ್ಯಕ್ಷ ಅತೀಂದ್ರಿಯ ವಿಷಯಗಳ ಜ್ಞಾನ ಆಗಮಾದಿಗಳಿಂದಲೇ ಸಾಧ್ಯವು. ಅನುಮಾನವು ನಿಜಜ್ಞಾನ ಹುಟ್ಟಿಸುವುದಿಲ್ಲ. ಶ್ರೀಮದಾಚಾರ್ಯರ ಸಿದ್ಧಾಂತವನ್ನು ಮೂರು ಸ್ವತಃ ಪ್ರಮಾಣಗಳಿಂದ ಸಿದ್ಧಪಡಿಸುತ್ತಾ ವಿಚಾರಧಾರೆಯನ್ನು ಉಪಸಂಹಾರ ಮಾಡಲಾಗಿದೆ.

(೧) ಅತೀಂದ್ರಿಯ ವಿಷಯ ಜ್ಞಾನ ವೇದಾದಿ ಸಚ್ಛಾಸ್ತ್ರಗಳಿಂದಲೇ ಸಾಧ್ಯ. ಕಾರಣ ವೇದವು ಸ್ವತಃ ಪ್ರಮಾಣ.

(೨) ಚಿತ್, ಅಚಿತ್‌ಗಳಲ್ಲಿ ತಾತ್ವಿಕ ಅಂತರವಿದೆ. ಅವುಗಳು ಪರಸ್ಪರ ಐಕ್ಯವಾಗುವುದಿಲ್ಲ. ಅನುಭವದಿಂದಲೂ ಆಗಮಗಳಿಂದಲೂ ಚಿತ್‌ಗೆ ತನ್ನದೇ ಆದ ಕ್ರಿಯ (Activity) ಇರುವುದು. ಆದರೆ ಅಚಿತ್‌ಗೆ ಚಿತ್‌ನ ಆಸರೆ (ಉಪಜೀವಿತ) ಇರುವುದು ಎಂದು ಶೃತಿಗಳು ಸಿದ್ಧಪಡಿಸುವುದು.

(೩) ಇಂದ್ರಿಯ (ದೃಷ್ಟಿಯಿಂದ)ಗಳಿಂದ ಗ್ರಹಿಸಿದ್ದು ಸತ್ಯವೇ ಆಗಿರಬೇಕು. ಹಾಗಿಲ್ಲದೇ ಅಸತ್ಯವೆಂದು ತೋರಿಸಬೇಕಾದರೆ ಅನುಮಾನದಿಂದ (ತರ್ಕಸ) ಆಗಬೇಕು. ಅನುಮಾನವು ಸ್ವತಃ ಪರಾವಲಂಬಿ ಆಗಿರುವಾಗ ಪ್ರತ್ಯಕ್ಷ ಗೋಚರವೇ ಪ್ರಬಲ ಪ್ರಮಾಣವೆಂದು ಶ್ರೀಮದಾಚಾರ್ಯರು ತಿಳಿಸಿರುತ್ತಾರೆ.

---

**(೧) ನಚಾನುಮಾನಾದಿ ಮಾಗಮಂ ವಿನಾ ಪ್ರಾಮಾಣ್ಯಂ ಧರ್ಮಾದಿಷು ।**
**ತದಗೋ ಚರತ್ವಾತ್ ಅತೋಽಪೌರುಷೇಯವಾಕ್ಯೈನೈವ**
**ಧರ್ಮಾದಿಸಿದ್ಧೇಃ ಸರ್ವವಾದಿನಾಮಪಿತದಂಗೀಕಾರ್ಯಂ ॥** (ವಿಷ್ಣು.ತ.ನಿರ್ಣಯ)

**(೨) ನಚೇತನ ವಿಕಾರಃ ಸ್ಯಾದ್ಯತ್ರ ಕ್ವಾಪಿಹ್ಮಚೇತನಂ ।**
**ನಾಚೇತನ ವಿಕಾರೋಪಿ ಚೇತನಃ ಸ್ಯಾತ್ಮಕದಾಚನ ॥** (ಅನುವ್ಯಾಖ್ಯಾನ)

---



**"ಇಷ್ಟ ವಸ್ತು ನೋ ಮಿಥ್ಯಾ ತ್ವಾಂಗೀಕಾರ ಚ ಯುಕ್ತ್ಯಪೇಕ್ಷಾ ನತುಸತ್ಯತ್ವೇ । ದೃಷ್ಟಸ್ಯ ಸತ್ಯತಾಂ ಯಾಂತು ಯುಕ್ತಿರ್ವಾಽಯುಕ್ತಿರೇವ । ಭೂಷಣಂ ತಸ್ಯಮಿಥ್ಯಾತ್ವೆ ಯುಕ್ತ್ಯಭಾವೋತಿದೂಷಣಂ"** (ಛಾಂದೋಗ್ಯ ಭಾಷ್ಯಂ)

ದೃಷ್ಟಿಗೆ ಗೋಚರವಾದ ವಸ್ತು ಅಸತ್ಯ (ಮಿಥ್ಯ) ಎನ್ನುವುದಾದರೆ ಕೇವಲ ಅನುಮಾನದಿಂದ ಹೇಳಬಹುದೇ ಹೊರತು ಪ್ರತ್ಯಕ್ಷ ವಿರೋಧ. ಅನುಭವ ಮನಸ್ಸಾಕ್ಷಿ ಹೇಳುವುದು. ಇದು ಸತ್ಯವೆಂದು ಸಾಕ್ಷಿ ಎಂದಿಗೂ ಸುಳ್ಳು ಹೇಳುವುದಿಲ್ಲ. ಸಾಕ್ಷಿಯನ್ನು ಅದಿಮಿ ಸತ್ಯವಾದದ್ದನ್ನು ಮಿಥ್ಯಾ ಅಂತ ಹೇಳಬೇಕಾದರೆ ಎಂತಹ ಘೋರ ಅಪಚಾರ.

ಹಗ್ಗ ಬಿದ್ದಿದೆ. ಆದರೆ ಇದು ಸರ್ಪವೆಂದು ಹೇಳುವುದು. ಸರ್ಪವೆಂದು ಮೊದಲು ತಿಳಿಯಿತು. ಕಾರಣ ದೃಷ್ಟಿದೋಷ. ಸ್ವಲ್ಪ ಪರೀಕ್ಷೆ ಮಾಡಿದ ಮೇಲೆ ಇಲ್ಲಿ ಬಿದ್ದಿರುವುದು ಹಾವಲ್ಲ ಹಗ್ಗವೆಂದು ಜ್ಞಾನವು ಆಯಿತು. ಹಗ್ಗದಲ್ಲಿ ಹಾವಾಗಿ ಕಾಣಿಸಬೇಕೆಂಬ ದೋಷವಿಲ್ಲ. ಅದು ನಮ್ಮ ಭ್ರಾಂತಿ ಜ್ಞಾನವೇ ಕಾರಣ. ಆಗ ಹಾವು ಹೇಗೆ ಅಸತ್ಯವೋ ಅದರಂತೆ ಈ ಜಗತ್ತು ಭ್ರಾಂತಿ ಜ್ಞಾನದಿಂದ ಮೊದಲು ಗೋಚರವಾಯಿತು ಎಂದಾಗ ಭ್ರಾಂತಿ ಜ್ಞಾನವು ಹಾವೆಂದು ತಿಳಿಸಿದಂತೆ ಹಗ್ಗವೂ ಏಕೆ ಭ್ರಾಂತಿಯಿಂದ ಅಸತ್ಯವಾಗಬಾರದು ? ಜಗತ್ತು ಮಿಥ್ಯಾ ಅಂದ ಮೇಲೆ ಮಿಥ್ಯಾ ಜಗತ್ತನ್ನು ಸೃಷ್ಟಿಸಿದ ಬ್ರಹ್ಮನೂ ಮಿಥ್ಯೆ ಏಕೆ ಆಗಬಾರದು ಎನ್ನುವುದಕ್ಕೆ ಸಮರ್ಪಕ ಉತ್ತರಿಸಲು ಬರುವುದಿಲ್ಲ.

ಹೀಗೆ ಶ್ರೀಮದಾಚಾರ್ಯರು ಭಗವಂತನು ಸರ್ವತಂತ್ರಸ್ವತಂತ್ರ. ಜಗತ್‌ಸೃಷ್ಟಿಗೆ ಕಾರಣ. ಚೇತನಾಚೇತನಗಳು ಸತ್ಯ. ಅವನೇ ಸರ್ವೋತ್ತಮನೆಂದು ಅನೇಕ ಶೃತಿಸ್ಮೃತಿಗಳಿಂದ ಸಮರ್ಥಿಸುತ್ತಾರೆ.

## ಅನುಬಂಧ–೨

## ತಾರತಮ್ಯಂಚ ಮುಕ್ತಾನಾಂ

ಇಲ್ಲಿ ತಾರತಮ್ಯ ಭಾವ ಶ್ರೀಮದಾಚಾರ್ಯರು ಕಂಡುಹಿಡಿದಿಲ್ಲ. He has not invented the gradations among Jeevas alone. He has described this theory among the Gods also.

ಛಾಂದೋಗ್ಯೋಪನಿಷತ್ತಿನ ಏಳನೇ ಅಧ್ಯಾಯದಲ್ಲಿ ಪೂರ್ಣವಾಗಿ ದೇವತಾ ತಾರತಮ್ಯವು ವಿವರಿಸಲಾಗಿದೆ. ದೇವತೆಗಳಲ್ಲಿ ತಾರತಮ್ಯವಿದೆ ಎಂದ ಮೇಲೆ ಜೀವರಲ್ಲಿ ತಾರತಮ್ಯವಿರುವುದೆಂದು ತಿಳಿಸುವುದು "ಕೈಮುತ್ಯನ್ಯಾಯ".

ಇಲ್ಲಿ ಪ್ರಶ್ನೆ ಹುಟ್ಟುವುದು ಜೀವರು ಎಂಬುದು ಇರಬೇಕಲ್ಲ. ಇದ್ದಾರೆ ಅಂದಾಗ ಮನುಷ್ಯ ಬದುಕಿದ್ದಾಗ ಜೀವ ಇರುವುದು ಎಂದು. ಮನುಷ್ಯ ಮರಣಾ ನಂತರ ಜೀವನು ಪುನಃ ಹುಟ್ಟುವನೋ ಹೇಗೆ ?

ದೇವದೊಂದಿಗೆ ಜೀವನೂ ನಾಶ ಹೊಂದುತ್ತಾನೆ ಎನ್ನುವುದು ಒಂದು ವಾದ. ಈ ಪ್ರಶ್ನೆ ಅತಿ ಹಳೆಯದು. Book of Job (old testament)ನಲ್ಲಿ ಜೀವನಿಗೆ ಪುನರ್ಜನ್ಮವಿರುವುದಿಲ್ಲವೆಂದು ತಿಳಿಸುತ್ತದೆ. (ದೇಹನಾಶೇ ಜೀವನಾಶಂ).

ನಾಸ್ತಿಕರು ಈ ವಾದವನ್ನು ಸಮರ್ಥಿಸುತ್ತಾರೆ. ಪ್ಲಾಟೋ ಎಂಬ ಗ್ರೀಕ್ ದೇಶದ ತತ್ವಜ್ಞಾನಿ ಜೀವನಿ ಅಮರತ್ವವನ್ನು ಒಪ್ಪುತ್ತಾನೆ. ಆದರೆ ಅವನ ಗುರುಗಳಾದ ಅರಿಸ್ಟಾಟಲ್ ಪ್ಲೇಟೋನನ್ನು ಖಂಡಿಸಿದ. ಇದೇ ರೀತಿ ಬೈಬಲ್‌ನ old testament ನಲ್ಲಿ ಜೀವನ ಅಮರತ್ವವನ್ನು ಒಪ್ಪಿಲ್ಲ. ಅದಕ್ಕೆ ಉದಾಹರಣೆ ಮೃಗಗಳು ಮರಣವಾದ ನಂತರ ನಾಶವಾಗುವಂತೆ ಎಂದಿದ್ದಾರೆ. ಕ್ರಿಸ್ತನು ಹುಟ್ಟಿದ ಮೇಲೆ ಮರಣಿಸಿದ. ಮರಣಾ ನಂತರ ಗೋರಿಯಿಂದ ಎದ್ದು ಬಂದ (Ghost). ಆಗ Resurrection of Jesus Christ ಎಂಬುದನ್ನು ಮನಗಂಡು ಜೀವನಿಗೆ ಅಮರತ್ವವಿದೆ ಎಂದು new testament ನಲ್ಲಿ ಒಬ್ಬ ಧರ್ಮಾಧ್ಯಕ್ಷ ತಿಳಿಸಿದ. ಭಾರತದಲ್ಲಿ ಇಂತಹ ವಾದ ವಿವಾದಗಳು ಹೊಸದೇನಲ್ಲ. ನಿರೀಶ್ವರವಾದಗಳು ಸಾಕಷ್ಟು ಪ್ರಸಿದ್ಧವಾಗಿದೆ.

ಚಾರ್ವಾಕನು ಪ್ರಮುಖ. ಅವನ ಹೇಳಿಕೆ ಪ್ರಕಾರ ಈಗೇನು ಜೀವನಿದ್ದಾನೆ ಅಷ್ಟು ಮಾತ್ರ ಸತ್ಯ. ಮರಣಾ ನಂತರ ಜೀವನ ಅಮರತ್ವವನ್ನು ಬ್ರಾಹ್ಮಣರು ಸೃಷ್ಟಿಸಿದ್ದಾರೆ.



**ಭಸ್ಮೀಭೂತಸ್ಯದೇಹಸ್ಯ ಪುನರಾಗಮನಂ ಕುತಃ ।**
**ತಸ್ಮಾತ್ ಋಣಂ ಕೃತ್ವಾ ಘೃತಂ ಪಿಬ ॥**

ಎನ್ನುವುದೇ ಅವನ ಸಿದ್ಧಾಂತ. ಇದನ್ನು ಒಬ್ಬ ತೆಲುಗು ಕವಿ **ಮರಣಿಂಚಿನವಾಡು ಮರಳಿ ವಸ್ತಾಡನಿ ಎವರಯ್ಯ ಚೆಪ್ಪಿರಿ ? ಅಂದು ವಲನ ಋಣಮುಚೇಸಿ ಸುಖಿಂಚವುಚ್ಚಿನ ಇಚ್ಚಿನವಾಡು ಅಡಿಗಿತೆ ಮುಂದುವೇಯ್ಯು ಚೌವಾಡು. ಅಡಿಗಿ ಅಡಿಗೆ ಚೆಚ್ಚಿಪೌವುನು ಅನಿತ್ಯಾನಿ ಶರೀರಾಣಿ ಅಂದಿರಿ ಸೊಮ್ಮು ನಾಕೇರಾನಿ. ಇಚ್ಚಿನವಾಡು ಮರಚಿಪೋನಿ ಲ್ಯೇಕಪೋತೆ ಚಚ್ಚಿಪೋನಿ** ಎಂದಿದ್ದಾನೆ. ಚಾರ್ವಾಕನಿಗೆ ಕರ್ಮ, ಕರ್ಮದಲ್ಲಿ ನಂಬಿಕೆ ಇರಲಿಲ್ಲ. ಹಾಗೆ ತಾರತಮ್ಯವನ್ನು ಒಪ್ಪಲಿಲ್ಲ. ಬೌದ್ಧರು ಕರ್ಮವನ್ನು ಬೋಧಿಸುತ್ತಾರೆ. ಆದರೆ ಜೀವನ ಅಸ್ತಿತ್ವವನ್ನು ಅಲ್ಲಗಳೆಯುತ್ತಾರೆ.

ಚಾರ್ವಾಕ ಬೃಹಸ್ಪತಿ ಶಿಷ್ಯ. ಬೃಹಸ್ಪತಿಗಳು ಸೂತ್ರಗಳನ್ನು ಬರೆದರು. ಇದಕ್ಕೆ ವ್ಯಾಖ್ಯಾನ ಬರೆದವನೇ ಚಾರ್ವಾಕ. ಚಾರ್ವಾಕನ ಸಿದ್ಧಾಂತವನ್ನು **ಲೋಕಾಯಮತ**ವೆಂದು ಹೆಸರಿಸಲಾಗಿದೆ. **ಅರ್ಥ ಕಾಮಗಳೆರಡೇ ಪುರುಷಾರ್ಥ.** ಮರಣವೇ ಮೋಕ್ಷ. ಜ್ಞಾನ ಕಾರಣವಲ್ಲ. ಸುಖವೇ ಸ್ವರ್ಗ. ದುಃಖವೇ ನರಕ. ಇವನ್ನು ಬಿಟ್ಟರೆ ಸ್ವರ್ಗ ನರಕಗಳೆಂಬುದು ಬೇರೆ ಇರುವುದಿಲ್ಲ. ಸುಖವನ್ನು ತ್ಯಜಿಸುವುದೇ ಮೂರ್ಖತನ.

ಯಜ್ಞ, ಯಾಗ, ವೇದ, ಸನ್ಯಾಸ ಇತ್ಯಾದಿಗಳನ್ನು ಸಾಮರ್ಥ್ಯವಿಲ್ಲದವರು ತಮ್ಮ ಜೀವನೋಪಾಯಕ್ಕಾಗಿ ನಿರ್ಮಿಸಿದ ಶಾಸ್ತ್ರ ಅಬದ್ಧ.

ಜಗತ್ತು ಅದಷ್ಟಕ್ಕೆ ಅದೇ ಪರಿಣಾಮವಾಯಿತು. ಪಂಚಭೂತಗಳಲ್ಲಿ ಪೃಥಿವೀ, ನೀರು, ತೇಜಸ್ಸು, ವಾಯು ಮಾತ್ರ ತತ್ವಗಳು. ಇವುಗಳ ಪರಿಣಾಮದಿಂದಲೇ ಮನುವ್ಯಾಧಿ ಶರೀರಗಳು ಉತ್ಪನ್ನವಾಯಿತು. ಜಗನ್ನಿರ್ಮಾಣಕ್ಕೆ ಬ್ರಹ್ಮನೆಂಬ ವ್ಯಕ್ತಿ ಕಾರಣವಲ್ಲ. ಏಕೆಂದರೆ ಬ್ರಹ್ಮನಿದ್ದರೆ ತಾನೆ ? ಬ್ರಹ್ಮನೇ ಇರುವುದಿಲ್ಲ.

**"ಅಗ್ನಿಹೋತ್ರಂ ತ್ರಯೋ ವೇದಾಃ ತ್ರಿದಂಡಂ ಭಸ್ಮಗುಂಠನಮ್**
**ಪ್ರಜ್ಞಾ ಪೌರುಷಹೀನಾನಾಂ ಜೀವಿಕೇತಿ ಬೃಹಸ್ಪತಿಃ ॥** (ಪ್ರಬೋಧ)

ಬೃಹಸ್ಪತಿಗಳು ಹೀಗೇಕೆ ಉಪದೇಶ ಸಿದ್ಧಾಂತ ಸಾರಿದರು ? ಮತ್ಸ್ಯಪುರಾಣ ೪೬ರಲ್ಲಿ ಹೀಗಿದೆ.

ಬೃಹಸ್ಪತಿ ಆಂಗೀರಸನ ಪುತ್ರ. ಮಹರ್ಷಿ ದೇವತೆಗಳಿಗೆ ಕುಲಗುರು. ಒಮ್ಮೆ ಅಸುರಗುರು ಶುಕ್ರಾಚಾರ್ಯ ಪರಶಿವನನ್ನು ಪ್ರಸನ್ನೀಕರಿಸಲು ಧೂಮವ್ರತವೆಂಬ ತಪಸ್ಸಿನಲ್ಲಿದ್ದಾಗ ಬೃಹಸ್ಪತಿಗಳು ರಾಕ್ಷಸರಲ್ಲಿ ಹೋಗಿ ತಾವೇ ಶುಕ್ರಾಚಾರ್ಯರೆಂದು ಅವರಂತೆ ರೂಪ ತಾಳಿ ಅವರಿಗೆಲ್ಲಾ ನಾಸ್ತಿಕವಾದವನ್ನು ಬೋಧಿಸಿದಾಗ ಅವರ ಮಾತಿಗೆ ವಶರಾಗಿ ಶುಕ್ರಾಚಾರ್ಯರೆಂದೇ ತಿಳಿದು ಗೌರವಿಸಿದರು. ಸ್ವಲ್ಪ ಸಮಯಾನಂತರ ನಿಜ ಶುಕ್ರಾಚಾರ್ಯರು ಬಂದು ವಿಷಯ ತಿಳಿದು ಕೋಪದಿಂದ ರಾಕ್ಷಸರೇ, ನೀವು ಎಲ್ಲಾ ಕಡೆ ತಿರಸ್ಕೃತರಾಗಿರಿ ಎಂದು ಶಪಿಸಿದರು. ಮೊದಲೇ ಉನ್ಮತ್ತ ತಾಮಸ ಸ್ವಭಾವದವರಾದ ಅಸುರರಿಗೆ ಇದು ಕೂಡಿತು. ಬೃಹಸ್ಪತಿಗಳಿಗೆ ನಾವು ಮಾಡಿದ್ದಕ್ಕೆ ಸಂತುಷ್ಟರಾಗಿ ಹೊರಟುಹೋದರು.

ಹೀಗೆ ಬೃಹಸ್ಪತಿಗಳು ಶುಕ್ರಾಚಾರ್ಯರ ವೇಷ ಧರಿಸಿದಾಗ ಸಿದ್ಧಾಂತವು ನಾಸ್ತಿಕವೆಂದೆನಿಸಿತು. ಆಗ ಇವರ ಶಿಷ್ಯನೇ ಚಾರ್ವಾಕ (ಮತ್ಸ್ಯ೪೭ ಭಾರ.ವನ) ಇಂತಹ ಅಪ್ರಮಾಣ ಸಿದ್ಧಾಂತವನ್ನು ಸರಾಸರಿಯಾಗಿ ಶ್ರೀಮದಾಚಾರ್ಯರು ತಿರಸ್ಕರಿಸುತ್ತಾರೆ (ಖಂಡಿಸಿರುತ್ತಾರೆ).

**"ಧರ್ಮಾರ್ಥೋಽಥವ್ಯರ್ಥ್ಯೈವಾಯಂ ತಪ ಪಕ್ಷಸ್ಯ ಸಂಗ್ರಹಃ ।**
**ಧರ್ಮಾರ್ಥಚ್ಚೆನ್ನಧರ್ಮಾಹಿ ಶಕ್ಯೋ ದ್ರಷ್ಟುಂ ವಿನಾಗಮಾತ್ ।**
**ವೃಥಾನುಮಯಿತ ಹಿಸಾಪಾಪಹೇತುಸ್ತಥೈವಹೀ ।**
**ಧರ್ಮಹೇತುತ್ವಮಪ್ಯಸ್ಯ ಅನುಮಾತುಂ ಸುಶಕ್ಯತೆ ।**
**ವೃಥಾಪಕ್ಷಂ ವೃಥಾಹನ್ಯಾದ್ಯಾದಿಕಂಚ್ಯಾಕ್ತಿಮುತ್ತರಂ ॥** (ಬೃಹ.ಭಾಷ್ಯ)

ಅನಂತ ಜೀವ ರಾಶಿಗಳು ಇರುವುದೆಂದು ಆಚಾರ್ಯ ಮಧ್ವರು ಸಪ್ರಮಾಣದಿಂದ ತಿಳಿಸುತ್ತಾರೆ.

**ಜೀವರು ನಿತ್ಯರು :** ಅವರುಗಳಲ್ಲಿ ಅಜ್ಞಾನ ತಾರತಮ್ಯವು ಭಯ, ದುಃಖ, ಮೋಹಗಳೂ ಇರುವುದು. ಜೀವ ಬೇರೆ, ದೇಹ ಬೇರೆ. ದೇಹ ಅನಿತ್ಯ – ನಾಶವಾಗುವುದು. ಈ ದೇಹದ ಸಂಬಂಧದಿಂದಾಗಿ ಜೀವ ತಾನು ಸುಖ ದುಃಖ ಅನುಭವಿಸುವೆನೆಂದು ತಿಳಿದಿರುತ್ತಾನೆ. ಈ ಬಂಧವು ಎಲ್ಲಾ ಸಂಸಾರಿಗಳಿಗೆ ಇರುವುದು – ಪ್ರಕೃತಿಬದ್ಧರು. ಶ್ರೀಮನ್ನಾರಾಯಣನು ಸರ್ವೋತ್ತಮನು. ಲಕ್ಷ್ಮೀದೇವಿಯು ಭಗವಂತನ ಪತ್ನಿ. ನಿತ್ಯ ಮುಕ್ತಳು. ಪ್ರಕೃತಿ ಸಂಬಂಧವಿರುವುದಿಲ್ಲ.



ಅಕ್ಷರಗಳು ಭಗವಂತನ ಆಜ್ಞಾನುಸಾರ ಜೀವರುಗಳನ್ನು ಸಂಸಾರ ಬಂಧನದಲ್ಲಿ ಹಾಕುವುದು. ಅದರಿಂದ ಮುಕ್ತರನ್ನಾಗಿ ಮಾಡುವ ಸಾಮರ್ಥ್ಯವಿರುವುದು.

ಜೀವರುಗಳು ಚತುರ್ಮುಖ ಬ್ರಹ್ಮದೇವರು. ವಾಯುದೇವರು ತಮ್ಮ ಪತ್ನಿಯರೂ ರುದ್ರ, ಶೇಷ, ಗರುಡ, ಇಂದ್ರ, ವರುಣ ಇತ್ಯಾದಿ ತೃಣಜೀವ ಪರ್ಯಂತ ಎಲ್ಲರೂ ಜೀವರುಗಳು. ಆದರೆ ಅವರಲ್ಲಿಯೂ ಆನಂದ ಜ್ಞಾನ ತಾರತಮ್ಯವಿರುವುದು. ಒಂದಲ್ಲಾ ಒಂದು ರೀತಿಯ ಖಂಡಕ್ಕೆ ಒಳಪಟ್ಟಿರುತ್ತಾರೆ.

ಅತ್ಯುತ್ತಮರು ರುಜುಗಳೆನಿಸುತ್ತಾರೆ. ಬ್ರಹ್ಮ, ವಾಯುಗಳು ಈ ಜಾತಿಗೆ ಸೇರಿದವರು.

ಜೀವರುಗಳನ್ನು ಮೂರು ರೀತಿಯಾಗಿ ವಿಭಾಗ ಮಾಡಲಾಗಿದೆ – ಸಾತ್ವಿಕ, ರಾಜಸರು, ತಾಮಸರು ಎಂದು. ಈ ಮೂರು ರೀತಿಯ ವಿಭಾಗ ಶ್ರೀಮನ್ಮಧ್ವಾಚಾರ್ಯರು ಕಲ್ಪಿಸಿಲ್ಲ. ಶ್ರೀ ಆಚಾರ್ಯರ ಮೇಲೆ ಅನಗತ್ಯ ಟೀಕಾ ಮಾಡಿ ಉತ್ತಮ ನೀಚರೆಂಬುದನ್ನು ಕಲ್ಪಿಸಿರುತ್ತಾರೆ ಅಂತ. ಶ್ರೀಮದಾಚಾರ್ಯರು ತತ್ವವನ್ನು ವಿಮರ್ಶಿಸಿರುತ್ತಾರೆ. ಈ ರೀತಿಯ ವಿಭಾಗ ಅನಾದಿ ಕಾಲದಿಂದಲೇ ಇದ್ದಿತು. ಒಂದು ಸ್ಪಷ್ಟ ಮಾತು. ಸಾತ್ವಿಕ, ರಾಜಸ, ತಾಮಸರೆಂದು ಜೀವರುಗಳ ಸ್ವಭಾವಕ್ಕನುಗುಣವಾಗಿ ಆಗಿದೆಯೇ ವಿನಃ ಮನುಷ್ಯ (ದೇಹಧಾರಿಗಳನ್ನು)ರನ್ನು ಕುರಿತು ಹೇಳಿಲ್ಲ. ಭಗವಾನ್ ಶ್ರೀಕೃಷ್ಣ ಭಗವದ್ಗೀತೆಯ ೧೪ನೇ ಅಧ್ಯಾಯ ಗುಣತ್ರಯ ವಿಭಾಗ ಯೋಗ ಮತ್ತು ೧೭ನೇ ಅಧ್ಯಾಯ ಶ್ರದ್ಧಾತ್ರಯ ವಿಭಾಗ ಯೋಗಗಳಲ್ಲಿ ಸಂಶಯವಿರದೆ ಸ್ಪಷ್ಟವಾಗಿ ತಿಳಿಸಿರುತ್ತಾನೆ. ತೈತ್ತರೀಯ ಉಪನಿಷತ್ತು ಆನಂದವಲ್ಲಿಯಲ್ಲಿಯೂ ಆನಂದ ತಾರತಮ್ಯವು ವಿವರಿಸಲಾಗಿದೆ.

೧. ಮುಕ್ತ ಯೋಗ್ಯರು, ೨. ಮುಕ್ತರು, ೩. ನಿತ್ಯಮುಕ್ತರು ಎಂದು ಮೂರು ವಿಭಾಗ.

**ಸಾತ್ವಿಕ :** ಸ್ವಭಾವತಃ ಸದ್ಗುಣ ಸಂಪನ್ನರು. ದಯ, ಅನುಕಂಪ, ಉತ್ತಮರಲ್ಲಿ ವಿನಯ ಭಕ್ತಿ, ಸಮಾನರಲ್ಲಿ ಪ್ರೇಮ, ಅಧಮರಲ್ಲಿ ಅನುಕಂಪ, ಭಗವಂತನ ಭಕ್ತರು, ನಿರಪೇಕ್ಷಿಗಳು, ದಾನ, ಸಹನತೆಯ = ದೃಷ್ಟಾ ಲಾಭ ಸಂಪನ್ನರು, ಮಾನಾಪಮಾನಗಳು, ಶ್ರೀಹರಿಯ ಇಚ್ಛೆ ಎಂದು ನಿಧಿ ಧ್ಯಾಸನ ತತ್ಪರರು.

**ರಾಜಸರು :** ಸ್ವಭಾವತಃ ಸಂಸಾರಿಗಳು, ಸ್ವವಿಷಯವಾಗಿ ಅಹಂಕಾರ, ಮಮಕಾರ,

ನಿರ್ದಾಕ್ಷಿಣ್ಯ, ಕಠೋರ ವಾಕ್ಯ, ಪ್ರತಿಫಲಾ ಪೇಕ್ಷೆಯಿಂದ ದಾನ ಧರ್ಮ ಪ್ರಶಂಸೆ, ಗೌರವ, ತಾನು, ತನ್ನದೆಂಬ ಅಹಂಭಾವವುಳ್ಳವರು, ನಿತ್ಯಸಂಸಾರಿಗಳು.

**ತಾಮಸರು :** ದೈತ್ಯ ಸ್ವಭಾವ, ರಾಕ್ಷಸರು, ಪಿಶಾಚಿಗಳು, ದುಷ್ಟ ಸ್ವಭಾವ, ನಿಷ್ಠುರ ವಾಕ್ಯ, ನಿರ್ದಾಕ್ಷಿಣ್ಯ, ದೇವ ಬ್ರಹ್ಮನನ್ನು ನಿಂದಿಸುವವರು, ದಯ, ಅನುಕಂಪ, ಸ್ವಪ್ರತಿಷ್ಠೆಗಾಗಿ ಹೆಣಗುವವರು, ಇವರು ತಾಮಸರು. ನಿತ್ಯ ನರಕಕ್ಕೆ ಭಾಗಿಗಳಾಗುತ್ತಾರೆ.

**ಜೀವರ ಸ್ವರೂಪ :** ಜೀವರು ಅಣುರೂಪವುಳ್ಳವರು. ರಾಮಾನುಜರು ಇದನ್ನು ಸಮ್ಮತಿಸುತ್ತಾರೆ. ಶಂಕರಾಚಾರ್ಯರು ಜೀವರೆಲ್ಲಾ ಅತ್ಯಂತ ಸೂಕ್ಷ್ಮ, ಲೆಕ್ಕವಿಲ್ಲದಿಷ್ಟು ಇರುವರು. ಅವರೆಲ್ಲಾ ಒಂದೇ ರೀತಿಯಾಗಿರುವರು. ಎಲ್ಲರೂ ಪರಬ್ರಹ್ಮರೇ ಎಂದಿದ್ದಾರೆ. ಆದ್ದರಿಂದ ತಾರತಮ್ಯವೇ ಇರುವುದಿಲ್ಲ. ಜೀವತ್ರಯ ವಿಭಾಗವನ್ನು ಒಪ್ಪುವುದಿಲ್ಲ. ಶ್ರೀಮದಾಚಾರ್ಯರು ಜೀವತ್ರಯ ಸ್ವರೂಪಗಳ ಬಗ್ಗೆ ನಿರವಕಾರವಾಗಿ ಸಿದ್ಧಿಸಿರುತ್ತಾರೆ.

**ಜೀವರು ದೇಹಾದಿಗಳಲ್ಲಿರುವ ಸ್ಥಾನ :** ಜೀವನು ದೇಹದ ಹೃದಯಾಕಾಶದಲ್ಲಿರುವನು ಎಂದಿದ್ದಾರೆ ಶ್ರೀಮಧ್ವರು. ಜೀವನು ಅಣುರೂಪನಾಗಿದ್ದರೂ ಇಡೀ ಶರೀರದಲ್ಲಿ ವ್ಯಾಪಿಸಿರುತ್ತಾನೆ. ಒಂದು ದೀಪವು ಕೋಣೆಯ ಒಂದು ಭಾಗದಲ್ಲಿದ್ದರೂ ಇಡೀ ಕೋಣೆಯನ್ನು ಬೆಳಗಿಸುವಂತೆ. ಪರಿಮಳ ಭರಿತ ಹೂವು ತನ್ನ ಪರಿಮಳ ಸುಗಂಧವನ್ನು ವ್ಯಾಪಿಸಿರುವಂತೆ ಎಂದು ಎರಡು ದೃಷ್ಟಾಂತಗಳಿಂದ ಜೀವ ದೇಹಾಂತರದಲ್ಲಿದ್ದು ದೇಹಕ್ಕೆ ಅಭಿಮಾನ ಹುಟ್ಟುವಂತೆ ಆಗುವುದೆಂದಿದ್ದಾರೆ. ಎಷ್ಟು ಪ್ರಾಯೋಗಿಕ ಅನುಭವದ ಮಾತು.

**ಜೀವನು ಸಚ್ಚಿದಾನಂದವುಳ್ಳವನು :** ಸತ್ – ನಿತ್ಯ ನಿರ್ವಿಕಾರನು. ಜೀವನಿಗೆ ನಾಶವಿಲ್ಲ.

**ದೇಹಿ ನಿತ್ಯಮವಧ್ಯೋಽಯಂ**
**ನಜಾಯತೇ ಮ್ರಿಯತೇ ವಾಕದಾಚಿ ।**
**ನ್ನಾಯ ಭೂತ್ವಾ ಭವಿತಾವಾನ ಭೂಯಃ ।**
**ಅಚೋನಿತ್ಯಃ ಶಾಶ್ವತೋಽಯಂ ಪುರಾಣೋ ।**
**ನಹನ್ಯತೇ ಹನ್ಯಮಾನೇ ಶರೀರೇ ॥** (ಕಾಠಕ)

(ಹನ್ಯಮಾನೇ ಪಿ ದೇಹೇ ಎಂದು ಗೀತೆಯಲ್ಲಿ ಸಾರಿದೆ)



ಜೀವನಿಗೆ ಎರಡು ರೀತಿಯ ಜ್ಞಾನ – ಸ್ವರೂಪ ಜ್ಞಾನ ಮತ್ತು ವೃತ್ತಿ ಜ್ಞಾನವೆಂದು.

೧) ಸ್ವರೂಪ ಜ್ಞಾನದಿಂದ ಸುಖ ದುಃಖಾನುಭವವಾಗುವುದು. ಇದು ಜೀವನ innate knowledge ನೈಸರ್ಗಿಕ ಹೊರಗಿನಿಂದ ಬಂದದ್ದಲ್ಲ – ಸತ್ಯ.

೨) ಸ್ವರೂಪ ಜ್ಞಾನವು ಸಂಸಾರಾವಸ್ಥೆಯಲ್ಲಿ ಮುಚ್ಚಲಾಗುವುದು. ಈ ಮುಚ್ಚಳ (ಬಂಧವು) ನಿವೃತ್ತಿಯಾದಾಗ ಸ್ವರೂಪ ಜ್ಞಾನ ಪ್ರಕಾಶಿಸುವುದು. ಇದನ್ನು ವೃತ್ತಿ ಜ್ಞಾನವೆನ್ನಲಾಗಿದೆ. (That which is acquired knowledge.) ಇಂದ್ರಿಯಗಳಿಂದ ಅರಿವು ತಿಳಿಯುವುದು. ಕೆಲವೊಮ್ಮೆ ಇಂದ್ರಿಯಕ ಜನ್ಯವು ಸತ್ಯವೂ, ಅಸತ್ಯವೂ ಆಗಲು ಸಾಧ್ಯತೆ ಇರುತ್ತದೆ. ಆದರೆ ವೃತ್ತಿ ಜ್ಞಾನ ತಾತ್ಕಾಲಿಕ.

**ಸ್ವರೂಪ ಜ್ಞಾನ** ನಿತ್ಯ ಸುಖ ರೂಪ. ಸಂಸಾರ ಬಂಧವು ಆವರಿಸಿದಾಗ ಮಾತ್ರ ಹೊಳೆಯುವುದಿಲ್ಲ. ಇಂತಹ ಸುಖಾನುಭೂತಿಯು ಮನುಷ್ಯ ಗಾಢ ನಿದ್ರೆಯಲ್ಲಿ ಆಗುವುದು. (ಮೋಕ್ಷ ರೂಪ ಸುಖವು ಅಂತ) ಬೆಳಿಗ್ಗೆ ಎಚ್ಚರವಾದೊಡನೆ ಹೇಳುತ್ತಾನೆ. ನಾನು ಸುಖವಾಗಿ ಮಲಗಿದ್ದೇ ಅಂತ (ಸುಷುಪ್ತಿ)

ಅದೇ ರೀತಿ ನಿದ್ದೆ ಮಾಡುವಾಗ ದುಷ್ಟ ಸ್ವಪ್ನ, ಕಾಲು ಕಡಿಯುವುದು ಇತ್ಯಾದಿಗಳು ಆಗುವುದು. ಇದನ್ನು ಸ್ವಪ್ನಾವಸ್ಥೆಯಲ್ಲಿ ಅನುಭವಿಸುತ್ತಾನೆ.

ಹಾಗಾದರೆ ಮನುಷ್ಯ ಕೋಮಾ (Coma) ವಸ್ಥೆಯಲ್ಲಿದ್ದಾಗ ಯಾವ ರೀತಿಯ ಅನುಭವವೂ ಇರುವುದಿಲ್ಲವಲ್ಲಾ ? ಎಂದರೆ ಕೋಮ ಎನ್ನುವುದು ಅಸಹಜ ನಿದ್ದೆ (Unnatural deep sleep). Stupor Torbid ನ ಪ್ರಕಾರ ಒಂದು ತರಹ ಮೂರ್ಛೆ. ಎಲ್ಲಾ ಇಂದ್ರಿಯಗಳ ವ್ಯಾಪಾರವಿಲ್ಲದಿದ್ದರೂ ಸ್ವಾಶೋಚ್ಛ್ವಾಸ ದೇಹದ ಬಿಸಿ ಇರುವುದು ಮರಣಿಸಿದಂತೆ ಆಗಲಿ ಸತ್ತಿರುವುದಿಲ್ಲ. ಕೆಲವು ಸಲ ಮನುಷ್ಯ ಕೋಮದಲ್ಲೇ ಅಂತ್ಯವಾಗುವುದು. ಇದು ಭಗವಂತನ ಅಚಿಂತ್ಯ ಅದ್ಭುತ ಶಕ್ತಿ.

ಜೀವನಿಗೆ ತನ್ನದೇ ಆದ ಶಕ್ತಿ ಇರುವುದು **ಸಾಕ್ಷಿ** ಎನ್ನುವುದು. ಸಾಕ್ಷೀ ತಿಳಿಸುವುದು ಪರಮ ಸತ್ಯ. ನಾನು ನನ್ನ ದೇಹವೆಂದು ಸಾಕ್ಷಿ ತಿಳಿಸುತ್ತದೆ. ಇಂದ್ರಿಯಗಳಿಂದಾಗಲಿ, ಮನಸ್ಸಾಗಲಿ ನಾನು ನಾನು ಬೇರೆ ಅಲ್ಲವೆಂದು ತಿಳಿಸುವುದಿಲ್ಲ. ಕೇವಲ ಸಾಕ್ಷಿಯ ಮೂಲಕವೇ ಜ್ಞಾನವಾಗುವುದು.

**ಜೀವರು ಭಗವಂತನ ಪ್ರತಿಬಿಂಬರು :** ಜೀವನನ್ನು ಭಗವಂತನ ಪ್ರತಿಬಿಂಬವಷ್ಟೇ ಅಲ್ಲದೆ ಪರಮಾತ್ಮನ ಅಂಶರೂ ಆದ್ದರಿಂದ ಬ್ರಹ್ಮನಂತೆ ಸತ್, ಚಿತ್ ಆನಂದರೂಪ. ಆದರೆ ಭಗವಂತನಿಂದ ಭಿನ್ನಾಂಶರು. ಸಚ್ಚಿತ್ತಾದಾನಂದವೂ ಅಣುರೂಪ ಮಾತ್ರ.

**ಕಿಂಚಿತ್ಸಾದೃಶ್ಯ ಮಾತ್ರೇಣ ಭಿನ್ನೋऽಪ್ಯಂಶ ಇವಾಚ್ಯತೆ** (ಗೀತಾ ತಾತ್ಪರ್ಯ)

ಜೀವರು ಭಗವಂತನಂತೆ ಜ್ಞಾನಾನಂದರೂಪರು ಎಂದಾಗ ಬ್ರಹ್ಮ ಜೀವೈಕ್ಯ ತಿಳಿಸುವುದಿಲ್ಲ. ಸಾದೃಶ ಅಂತೇ ಅಂತ ಆಗಲಿ, ಅದೇ ಅಂತ ಅರ್ಥವಲ್ಲ. **"ನಹಿಸಾದೃಶೋಸಾಮ್ಯಮಿತಿಜ್ಞೇಯಂ"**

ಮನೆಯಲ್ಲಿ ದೀಪವು ಸೂರ್ಯನಂತೆ ಬೆಳಗುವುದು ಎಂದಾಗ ದೀಪವೇ ಸೂರ್ಯನಾಗಿಲ್ಲ. ದೀಪದಲ್ಲಿ ಬೆಳಕು ಸೂರ್ಯನಷ್ಟು ಕಾಂತಿ ಇರುವುದಿಲ್ಲ. ಸೂರ್ಯನು ಅಸ್ತಮನಾದಾಗ ಮಾತ್ರ ಮನೆ ದೀಪ ಕಾಂತಿಯುಕ್ತವಾಗುವುದು. ಸೂರ್ಯನಿಂದ ಮನೆದೀಪ ಭಿನ್ನ. ಮಾಯಾವಾದಿಗಳು ಜೀವರು ಬ್ರಹ್ಮಾಂಶರು ಎಂದು ಹೇಳುತ್ತಾ, ಬ್ರಹ್ಮ ಸೂರ್ಯನಂತೆ. ಜೀವರು ಅವನ ದೀಪದಂತೆ. ಇಬ್ಬರಲ್ಲಿ ಪ್ರಕಾಶರೆಂಬ ಐಕ್ಯವು ಇರುವುದು. ಹಾಗೇನೇ ದೀಪದಿಂದ ದೀಪ ಇದ್ದಂತೆ ಜೀವಬ್ರಹ್ಮೈಕ್ಯವನ್ನು ಹೇಳುತ್ತಾರೆ.

ಈ ವಾದವು ಅಪ್ರಮಾಣ. ಅನುಭವ ಪ್ರತ್ಯಕ್ಷ ವಿರುದ್ಧ. ದೀಪದಿಂದ ದೀಪವಿದ್ದಂತೆ ಅಂತ ಹೇಳಿದಾಗ, ಒಂದು ದೀಪವು ನಂದಿಸಿದರೆ ಬೇರೆ ದೀಪವೇಕೆ ನಂದುವುದಿಲ್ಲ ? ಒಂದು ದೀಪದ ಶಕ್ತಿ ಇನ್ನೊಂದು ದೀಪದಲ್ಲಿರುವುದಿಲ್ಲ. ಇದು ದೀಪದ wattage ಮೇಲೆ ಅವಲಂಬಿಸಿರುತ್ತದೆ ಅಂದಾಗ ಜೀವರು ಬ್ರಹ್ಮನೆಂಬ ದೀಪದಿಂದ ಅವರು ಎನ್ನುವುದಾದರೆ, ಜೀವ ಬ್ರಹ್ಮೈಕ್ಯಕ್ಕೆ ಸಾಧನವಾಗುವುದಿಲ್ಲ.

**ಜೀವರುಗಳಿಗೆ ಕರ್ತೃತ್ವ ಸ್ವಾತಂತ್ರ್ಯರು ಹೌದೋ ಅಲ್ಲವೋ ? :** ಜೀವನು ಅಸ್ವತಂತ್ರ. ಭಗವಂತನೊಬ್ಬನೇ ಸ್ವತಂತ್ರ. ಅವನ ಆಟದ ಗೊಂಬೆಗಳು ಜೀವನಾದ ನನಗೆ ಸ್ವಲ್ಪವೂ ಸ್ವತಂತ್ರವಿರುವುದಿಲ್ಲ. "ಪಾಪಪುಣ್ಯಕ್ಕೆಲ್ಲ ಅನಲಾಕ್ಷ ನಿನ್ನ ಪ್ರೇರಣೆಯಿಲ್ಲದೆ" ಆಗುವುದಿಲ್ಲ (ವಿಜಯದಾಸರು)

ಪಾಪಕರ್ಮ, ಪುಣ್ಯಕರ್ಮವೇ ಆಗಲಿ ಭಗವಂತನ ಪ್ರೇರಣೆಯಿಲ್ಲದೆ ಮಾಡುವುದಿಲ್ಲ. ಪಾಪಕರ್ಮಕ್ಕೆ ನಾನೇಕೆ ಹೊಣೆ ಆಗಬೇಕು ? ನನಗೆ ಯಾವ ರೀತಿಯ ಸ್ವಾತಂತ್ರ್ಯವಿರುವುದು ? ನಾನು ಕೊಡಲಿ ಇದ್ದಂತೆ. ಭಗವಂತ ನನ್ನನ್ನು ಉಪಯೋಗಿಸಿದಾಗ ನಾನು ಮರವನ್ನು ಕಡಿಯಬಲ್ಲೆ. "I am chisel in the hands of God. If He uses me to cut the wood I do so. But if he discards me, I got rusted." ಈ ವಾದವು ಅಪಾತತಃ ಸರಿಯೇನೋ ಅನ್ನಿಸುತ್ತದೆ. ಪಾಪಕರ್ಮ ಮಾಡಲು ಅವನೇ ಕಾರಣ ಎಂದು ಕರ್ತವ್ಯದಿಂದ ತಪ್ಪಿಸಿಕೊಂಡು ಭಗವಂತನಲ್ಲಿ ದೋಷಾರೋಪಣೆ ಮಾಡುತ್ತಾರೆ. ಇದು ಸರಿಯಲ್ಲ. ಜೀವನು ಅಸ್ವತಂತ್ರನು. ನಿಜ. ಆದರೂ ಜೀವನಿಗೆ ಅಲ್ಪ ಸ್ವಾತಂತ್ರ್ಯವಿದೆ. ಅದನ್ನು **ದತ್ತ ಸ್ವಾತಂತ್ರ್ಯ**ವೆನ್ನಲಾಗಿದೆ. (Gifted independence). ಶ್ರೀಜಗನ್ನಾಥದಾಸರು ಹರಿಕಥಾಮೃತಸಾರದಲ್ಲಿ ದತ್ತ ಸ್ವಾತಂತ್ರ್ಯವೆಂಬ ಸಂಧಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ಶ್ರೀಕೃಷ್ಣ ಅರ್ಜುನನಿಗೆ ಗೀತೋಪದೇಶ ಮಾಡುವ ಅಗತ್ಯವೇನಿತ್ತು ? ತಾನೇ ಸಮಸ್ತ ಕೌರವ ಸೇನೆಯನ್ನು ಸಂಹರಿಸಬಹುದಾಗಿತ್ತು. ಅಲ್ಲಿ ಭಗವಂತ ಸ್ಪಷ್ಟವಾಗಿ ಹೇಳುತ್ತಾನೆ. ೧೮ನೇ ಅಧ್ಯಾಯ "ಇಷ್ಟು ಹೇಳಿದ್ದೇನೆ. ಇನ್ನು ಮುಂದೆ ನಿನಗೆ ಯಾವುದು ಉಚಿತವೋ (ಸನ್ಯಾಸವೋ-ಯುದ್ಧವೋ) ನೀನೇ ನಿಶ್ಚಯಿಸು (ಯಥೇಚ್ಛಸಿ ತಥಾಕುರು)" ಎಂದಿದ್ದಾನೆ. ಮಾಡು. ಕರ್ತವ್ಯ ವಿಮುಖನಾಗಬೇಡ ಅಂತ ಜೀವನನ್ನುದ್ದೇಶಿಸಿ ಹೇಳಿದಾಗ ಜೀವನಿಗೆ independence to act ಇದೆ. ಆದರೆ ಅದು Controlled independence (guided independence).

ದೃಷ್ಟಾಂತ ಕೊಡುವುದಾದರೆ ಒಂದು ಗಿಳಿ ಪಂಜರದಲ್ಲಿದೆ. ಪಂಜರದಲ್ಲಿ ಗಿಳಿಗೆ ಬೇಕಾಗುವಷ್ಟು ಆಹಾರ, ಹಣ್ಣು, ನೀರು ಇಡಲಾಗಿದೆ. ಪಂಜರದಲ್ಲಿರುವ ಗಿಳಿ ಅಲ್ಲಿಟ್ಟಿರುವ ಹಣ್ಣು ತಿನ್ನಲು, ನೀರು ಕುಡಿಯಲೂಬಹುದು. ತಿನ್ನದೇ, ಕುಡಿಯದೇ ಇರುವಷ್ಟು ಸ್ವಾತಂತ್ರ್ಯವಿದೆ. ಆದರೆ ಪಂಜರದಿಂದ ಹೊರಗೆ ಹಾರಿ ಹೋಗುವ ಸ್ವಾತಂತ್ರ್ಯವಿರುವುದಿಲ್ಲ.

ಹಾಗೇನೇ ಜೀವನೆಂಬ ಗಿಳಿ ಪಂಜರವೆಂಬ ಈ ದೇಹದಲ್ಲಿ ಇದ್ದು ಭಗವಂತ (ಪಂಜರದ ಮೂಲಕ) ಕೊಟ್ಟ ಕಷ್ಟವನ್ನು ಅನುಭವಿಸಬಹುದು **"ಯದ್ರೋಚತೆತತ್‌ಗ್ರಾಹ್ಯಂ ಯನ್ನರೂಚತೆ ತತ್ತ್ಯಾಜ್ಯಂ"** ಎನ್ನುವಂತೆ ಜೀವನಿಗೆ ಸ್ವಲ್ಪ ಸ್ವಾತಂತ್ರ್ಯವನ್ನು ಪರಮಾತ್ಮ ಅನುಗ್ರಹಿಸಿರುತ್ತಾನೆ. ಇದನ್ನೇ **ದತ್ತ ಸ್ವಾತಂತ್ರ್ಯ**ವೆಂದು ತಿಳಿಯಬಹುದು. ಈ ಅಲ್ಪ ಸ್ವಾತಂತ್ರ್ಯವನ್ನು ದುರುಪಯೋಗ ಪಡೆಸಿದಾಗ ಅನರ್ಥಕ್ಕೆ ಕಾರಣವಾಗುವುದು.

This type of gifted independence is likened to a Clerk in Office

who is subordinate to his Higher Officer. This Clerk works as directed and guided by his Officer.

ಮಾಡುವವನು ನಾನು ಆದರೆ ಮಾಡಿಸುವವನು ಅವನು. ಹೀಗೆ ಜೀವನು ಬ್ರಹ್ಮದೇವ ಪರ್ಯಂತ ಎಲ್ಲರೂ ಸ್ವಾತಂತ್ರ್ಯನಾದ ಶ್ರೀಹರಿಯ ಆದೇಶ ನಿಯಮನ ಪ್ರಕಾರ ಕರ್ಮಾಚರಣೆ ಮಾಡುತ್ತಾರೆ. ಜೀವನಿಗೆ ಸ್ವಲ್ಪವೂ ಸ್ವಾತಂತ್ರ್ಯವೇ ಇರುವುದಿಲ್ಲ ಎಂದು ಹೇಳುವುದು ಮೂರ್ಖರ ಮಾತು. ತೆಲುಗು ಕವಿಯನ್ನು ಬೊಮ್ಮರ ಪೋತನನಿಗೆ ಶ್ರೀರಾಮಚಂದ್ರ ಕನಸಿನಲ್ಲಿ "ಪೋತನಾ ಭಾಗವತವನ್ನು ಬರಿ" ಎಂದನಂತೆ. ಪೋತನ ಭಾಗವತವನ್ನು ತೆಲುಗು ಭಾಷೆಯಲ್ಲಿ ಬರೆಯುವ ಮುನ್ನ ಹೀಗೆ ತಿಳಿಸುತ್ತಾನೆ.

**"ಪಲುಕೆಡಿದಿ ಭಾಗವತಮಟ ಪಲುಕಿಂಚೆಡು ವಾಡು ರಾಮ ಭದ್ರುಂಡಟ ತಾಪಲಿಕಿನ ನೇಪಲುಕೆದ ಪಲುಕೆದ"** ಎಂದು ಎಷ್ಟು ಸುಂದರವಾಗಿ ಬರೆಯುವವನು ನಾನೇ ಆದರೆ ಲೇಖನಿಯಲ್ಲಿ ಮಸಿಯಾಗಿ ನನ್ನ ಕೈಯನ್ನು ಹಿಡಿಸಿ ಬರೆಯುವ ಸಾಮರ್ಥ್ಯ ಕೊಡು ಶ್ರೀರಾಮಚಂದ್ರ ಎಂದಿದ್ದಾನೆ.

ಶ್ರೀಹರಿಯೇ ಸರ್ವತಂತ್ರಸ್ವತಂತ್ರ. ಬ್ರಹ್ಮನೇ ಎಲ್ಲವನ್ನೂ ಮಾಡಲಿ ಎನ್ನಲಾಗದು. ಜೀವರನ್ನು ನಿಮಿತ್ತ ಮಾಡಿ ದೇಹಾದಿಗಳನ್ನು ಕೊಟ್ಟು ಅವರಿಂದ ಕರ್ಮಗಳನ್ನು ಮಾಡಿಸುತ್ತಾನೆ.

**"ಕರಿಷ್ಯೇ ವಚನಂತವ"** (ಗೀತಾ ೧೮-೭೩) ಎಂಬುದಾಗಿ ಅರ್ಜುನ ಕರಿಷ್ಯೇ - ಮಾಡುತ್ತೇನೆ ಮಾಡುವುದು ನಿನ್ನಯ ಆಜ್ಞಾಪ್ರಕಾರವೆಂದು ಸ್ಪಷ್ಟ. ಸಂಗೀತ ಸ್ವರವು ಉತ್ಪನ್ನವಾಗಬೇಕಾದರೆ ಪಿಟೀಲುವಾದಕನು, ಗಾಯಕನು ಇಬ್ಬರೂ ಬೇಕು. ಹೀಗೆ ಜೀವನ ಕರ್ತೃತ್ವ ವಿಷಯವಾಗಿ ತಿಳಿಸಲಾಯಿತು.

ಕ್ರಿಸ್ತ ಮತ, ಇಸ್ಲಾಮ್ ಮತವು ಮನುಷ್ಯರು ಪಶುಗಳಲ್ಲಿ ವ್ಯತ್ಯಾಸಗಳಿರುವುದೆಂದು Distinguish ಮಾಡಿರುತ್ತಾರೆ. ಪಶುಗಳಿಗೆ ದೇಹವಿದೆ (Life only) ಜೀವವಿರುವುದಿಲ್ಲ (No soul) ಮರಣಾನಂತರ ಎಲ್ಲವೂ ನಾಶ ಹೊಂದುವುದು. (Life time between birth and death.) ಬಾಳು ಇದೆ. soul = ಆತ್ಮ ಚೇತನವಿರುವುದಿಲ್ಲವೆನ್ನುತ್ತಾರೆ. ಆದರೆ ಕ್ರಿಶ್ಚಿಯಾನಿಟಿ ಪ್ರಕಾರ ಮೊದಮೊದಲು ಜೀವನು ಮತ್ತೆ ಹುಟ್ಟುವುದಿಲ್ಲವೆಂದರು. ಅನುಬಂಧ-೨ರಲ್ಲಿ new testament ಪ್ರಕಾರ ಕ್ರಿಸ್ತನು ಶಿಲುಬೆಗೇರಿಸಿದ ಮೇಲೆ ಮರಣಿಸಿದ. ಅವನ ಪಾರ್ಥಿವ ಶರೀರವನ್ನು



ಹೂತಿಟ್ಟರು. ಮೂರನೆಯ ದಿನ ಗೋರಿಯಿಂದ Ghost a spirit ಹೊರಬಂದ. ಆಗ ಅಮರತ್ವವನ್ನು Resurrection ಅನ್ನು ಒಪ್ಪಿ ಜೀವನಿಗೆ ಮರಣಾ ನಂತರ ಪುನರ್ಜನ್ಮ ಬರುವುದೆಂದು ತಿಳಿಸಿ ನಂಬಿದರು. Neo Christians ಅನ್ನುತ್ತಾರೆ ಕ್ರಿಶ್ಚಿಯನ್ ಮತದಲ್ಲಿ ವಿಭಿನ್ನ ರೀತಿಯಾಗಿ ಬೆಳೆಯಿತು. Roman Catholics, protestants, presbitarians, puritans, Orthodox Christians, Syrian Christians ಅಂತ.

Roman Christianity ಕ್ರಿಸ್ತನ ಮೂರ್ತಿ ಪೂಜೆ, ಉತ್ಸವಗಳನ್ನು ಆಚರಿಸುತ್ತಾ ಬಂದರು. ಇವರಿಗೆ ಪೋಪನೇ ದೇವ ಪ್ರತಿನಿಧಿ ಎಂದು ಪ್ರಸಿದ್ಧವಾಯಿತು. Christianity advocates monotheistic religion. But it predicates trinity - God, The father God, The son God. The Ghost ಈ ಮೂರು ಪ್ರತ್ಯೇಕ ಪ್ರತ್ಯೇಕ ವ್ಯಕ್ತಿಗಳು. ಆದರೆ ಒಂದೇ ತತ್ವದಿಂದ ಆಯಿತು. ಮೂರೂ ಜ್ಞಾನಶಕ್ತಿ ಶ್ರೇಷ್ಠತೆ ಇರುವುದಾಗಿ ಹೇಳಿದರು. ಈ trinity ಎಂಬುದು ಗೂಢ ರಹಸ್ಯ miracle secrecy ಎನ್ನುತ್ತಾರೆ. Christianity and Islam preach that heaven is a gift of God. It is a prize. ಸತ್ಯನಿಷ್ಠಾವಂತನಿಗೆ ಕೊಡುತ್ತಾನೆ. ಭಗವಂತ ಕೆಲ ನಿಯಮಗಳನ್ನು ಹಾಕಿದ. ಇದನ್ನು ಉಲ್ಲಂಘಿಸಿದವರನ್ನು ನರಕಕ್ಕೆ ಹಾಕುತ್ತಾನೆ. Adam and Eve ಉಲ್ಲಂಘಿಸಿದರು. ನಿಷಿದ್ಧ ಮರದಲ್ಲಿ ಬಿಟ್ಟ ಫಲವನ್ನು ಗುಂಜಿಸಿದರ ಪರಿಣಾಮವಾಗಿ ಜಗತ್ತಿನಲ್ಲಿ ಹುಟ್ಟಿ ಮರಣ ಹೊಂದಿ ಮುಂದೆ ಜನಾಂಗವು ಅವರು ಮಾಡಿದ ಪಾಪದ ಫಲವಾಗಿ ಹುಟ್ಟು ಪಾಪಿಗಳಾದರು. (Sinners)

ಹೀಗೆ ಜನಜನಿತವಾಗಿ ತಲತಲಾಂತರ ಪಾಪಕರ್ಮಿಗಳಾದರು. ಇವರನ್ನು ಉದ್ಧರಿಸಲು God sent his only son. Because God loved the sinned. Yet they were pious to redeem them from sin. As such he was crusified and it is said those believes Him shall have everlasting life and no death. ಅವರೆಲ್ಲ baptize ಆದಾಗ ರಕ್ಷಿಸುತ್ತಾರೆ. ಅನ್ಯಥಾ ಅವರು ನರಕಕ್ಕೆ ಹೋಗುತ್ತಾರೆ ಎಂದಿದೆ. (St. Mark Ch.XVI - V. 16)

ಶ್ರೀಮದ್ಭಾಗವತದಲ್ಲಿ ಅಜಾಮಿಳನ ವೃತ್ತಾಂತ ಇಂತಹ ಪ್ರಸಂಗವನ್ನು ಕಾಣುತ್ತೇವೆ.

ಅಜಾಮಿಳನೆಂಬ ಬ್ರಾಹ್ಮಣ ವೇದ ವೇದಾಂಗ ಪಾರಂಗತನಾದರೂ

ಯಾವುದೋ ಪ್ರಾರಬ್ಧವಶಾತ್ ದುಷ್ಟಸ್ತ್ರೀ ಸಂಘ ಮಾಡಿ ಬ್ರಾಹ್ಮಣ್ಯವನ್ನು ಕಳೆದುಕೊಂಡು ಪರಮ ಪಾಪಿಯಾದ. ಮರಣವು ಸಮೀಪಿಸಿತು. ಯಮಭಟರು ಇವನ ಜೀವವನ್ನು ತೆಗೆದುಕೊಳ್ಳಲು ಬರುತ್ತಾರೆ. ಆಗ ತನ್ನ ಕೊನೆಯ ಮಗ ನಾರಾಯಣ ನಾಮಾಂಕಿತನನ್ನು ಕಾಪಾಡು ಎಂದು ಕೂಗುತ್ತಾನೆ. ಆಗ ಥಟ್ಟನೆ ಈ ಮಾನವ ನಾರಾಯಣನು ಏನೂ ಮಾಡಲಾರ. ಜ್ಞಾನೋದಯವಾಯಿತು. ಪೂರ್ವಕ ಸತ್ಕರ್ಮ ಫಲದಿಂದಾಗಿ ಶ್ರೀ ಮಹಾಲಕ್ಷ್ಮೀಪತಿಯಾದ ನಾರಾಯಣನನ್ನು ಕೂಗಿದ ''ನಾರಾಯಣಾ'' ಎಂದು.

**ಏವಂ ವರ್ತಮಾನೋऽಜ್ಞೋ ಮೃತ್ಯುಕಾಲ ಉಪಸ್ಥಿತೇ ।**
**ಮತಿಂಚಕಾರತನಯೇಬಾಲೇ ನಾರಾಯಣಾಹ್ವಯೇ ॥**
**ಸ ಪಾಶಹಸ್ತಾಂತ್ರೀನ್ ದೃಷ್ಟ್ವಾ ಪುರುಷಾನ್ ಭೃಶದಾರುಣಾನ್ ।**
**ವಕ್ರತುಂಡಾನೂರ್ಧ್ವರೂಮ್ಣಾ ಆತ್ಮಾನಂ ನೇತುಮಾಗತಾನ್ ॥**
**ದೂರೇಕ್ರೀಡನಕಾಸಕ್ತಂ ಪುತ್ರಂನಾರಾಯಣಾಹ್ವಯುಮ್ ।**
**ಪ್ಲಾವಿತೇನ ಸ್ವರೇಣೋಚ್ಚೈರಾಜುಹಾವಾಕುಲೇಂದ್ರಿಯಃ ॥**
**ನಿಶಮ್ಯ ಮ್ರಿಯಮಾಣಸ್ಯ ಮುಖತೋ ಹರಿಕೀರ್ತನಂ ।**
**ಭರ್ತುರ್ನಾಮ ಮಹಾರಾಜಾ ಪಾರ್ಷದಾಃ ಸಹಸಾऽಪತನ್ ॥**
**ವಿಕರ್ಷತೋऽಂತಹೃದಯಾದ್ ದಾಸೀಪತಿಯಜಾಮಿಳಂ ।**
**ಯಮಪ್ರೇಷ್ಯಾನ್ ವಿಷ್ಣುದೂತಾ ವಾರಯಾಮಾಸುರೋಜಸಾ ॥**

**ವಿವರಣೆ :** ಭ್ರಷ್ಟನಾದ ಅಜಾಮಿಳ ತನ್ನ ಅಂತ್ಯ ಬಂದಿರುವುದನ್ನು ತಿಳಿಯುತ್ತಾನೆ. ಯಮದೂತರು ಮೂರು ಜನ ಭಯಂಕರ ರೂಪವುಳ್ಳವರು ಬಂದು ಪಾಶಹಾಕಿ ಅವನ ಜೀವವನ್ನು ಕಳೆಯಲು ಭಯಭೀತನಾಗಿ ಪುತ್ರ (ದಾಸೀಪುತ್ರ)ನಾದ ನಾರಾಯಣನೆಂದು ಹೆಸರುಳ್ಳವನನ್ನು ಕೂಗುತ್ತಾನೆ. ಕೂಡಲೇ ಜ್ಞಾನವಾಯಿತು. ಈ ನಾರಾಯಣನು ಏನು ಮಾಡುತ್ತಾನೆ ? ಹೇಗೆ ರಕ್ಷಿಸುತ್ತಾನೆ ? ಅಂತ ತಿಳಿದು ದೂರೇ (ವೈಕುಂಠವಾಸಿ ನಾರಾಯಣನನ್ನು) ನಾರಾಯಣಾ ಎಂದು ಜೋರಾಗಿ ಕೂಗಿದ. **ದೂರೇ ಕ್ರೀಡಾನಾ ಸಕ್ತಂ ನಾರಾಯಣ ಮಾಹ್ವಯಂ**

ದೂರೇ ಅತೀವದೂರನಿರುವಲ್ಲಿ **ಕ್ರೀಡನಕಾಸಕ್ತಂ – ಕ್ರೀಡಾದಿಗುಣ ಪೂರ್ಣನಾದ ಪುತ್ರಂ** = ಮಗನನ್ನು, ನಾರಾಯಣನನ್ನು (ನಾರಾಯಣನೆಂಬ ಹೆಸರುಳ್ಳ) ಕೂಗಿ ಕರೆದ ಎಂದು ಒಂದು ಅರ್ಥ. ಇದಕ್ಕೆ ವಿಜಯಧ್ವಜತೀರ್ಥರ ವ್ಯಾಖ್ಯಾನ.



**ದೂರೇ ಅತಿದೂರೇ ವೈಕುಂಠೇ ಕ್ರೀಡನಾಸಕ್ತ =** ನಾರಾಯಣಂ ಕ್ರೀಡಾದಿ ಗುಣಪೂರ್ಣನಾದ ನಾರಾಯಣನನ್ನು ಶ್ರೀಹರಿಯನ್ನು **ಪುತ್ರೇತಿ (ಪುತ್ರಂ)** ಪುತ್ರೆಂಬ ನರಕದಿಂದ ರಕ್ಷಿಸುವ ಹೇ ಶ್ರೀಹರಿ ಎಂದು ಕರೆದನಾಗಲಿ ದಾಸೀಪುತ್ರನನ್ನು ಕರೆಯಲಿಲ್ಲ ಎಂದು ಸುಂದರವಾಗಿ ಅರ್ಥೈಸುತ್ತಾರೆ. (ಷಷ್ಠ ಸ್ಕಂಧ – ೧)

**ಅಜಾಮಿಳೋऽಪಿ ಸ್ಮರಣಾದ್‌ಭಕ್ತ್ಯಾ ಮೃತ್ಯೋರಮುಚ್ಯತೇತಿ ನಾರದೀಯ ।** (ಭಾಗವತ ತಾತ್ಪರ್ಯ)

ಅಂತ್ಯಕಾಲದಲ್ಲಿ ಶ್ರೀಮನ್ನಾರಾಯಣನನ್ನು ಸ್ಮರಿಸಿ ಕೂಗಿದ ಯಮಭಟರ ಪಾಶವನ್ನು ಬಿಡಿಸಿ ವಿಷ್ಣುದೂತರು ಅಜಾಮಿಳನನ್ನು ಮುಕ್ತನನ್ನಾಗಿ ಮಾಡಿದರು ಎಂದಿದೆ.

ಅಜಾಮಿಳನಿಗೆ ನರಕವೇ ಆಗಬೇಕಿತ್ತು. ಹಾಗಲ್ಲದೇ ವಿಷ್ಣುದೂತರು ಬಂದು ಯಮಪಾಶದಿಂದ ಬಿಡಿಸಿದರು. ಈ ಇಬ್ಬರ ಸಂವಾದವನ್ನು ಅಜಾಮಿಳ ಕೇಳುತ್ತಿದ್ದ. ವಿಷ್ಣುದೂತರಿಂದ ಮರಣಿಸಬೇಕಾದವನನ್ನು ಬದುಕುವಂತೆ ಮಾಡಿದರು. ನಂತರ ಅಜಾಮಿಳ ತಾನು ಈವರೆಗೂ ಪಾಪಕೃತ್ಯಗಳನ್ನು ಪ್ರಾಯಶ್ಚಿತ್ತ ರೂಪವಾಗಿ ಹರಿನಾಮಸ್ಮರಣೆ ಭಕ್ತಿಯಿಂದ ಉಚ್ಚರಿಸಿದ ಪರಿಣಾಮ ಆಮೇಲೆ ಅಜಾಮಿಳ ಗಂಗಾತೀರದಲ್ಲಿ ತಪಸ್ಸನ್ನು ಮಾಡಿ ಕೊನೆಗೆ ಮುಕ್ತಿಯನ್ನು ಪಡೆದ ಎಂದಿದೆ.

ಅಜಾಮಿಳ ಹಿಂದೆ ಅನೇಕ ಜನ್ಮಗಳಲ್ಲಿ ಸತ್ಕರ್ಮ ಮಾಡಿದ್ದ ನಿಮಿತ್ತ ಈಗ ಬ್ರಾಹ್ಮಣನಾಗಿ ಜನಿಸಿದ. ಪ್ರಾರಬ್ಧ ಕರ್ಮವಶಾತ್ ಪಾಪಿಯಾಗಿದ್ದ. ಈಗ ತಾನು ಹಿಂದೆಲ್ಲಾ ಮಾಡಿದ ಪುಣ್ಯಕರ್ಮಫಲವಾಗಿ ಜನ್ಮಾಂತರದಲ್ಲಿ ಮಾಡಿದ್ದು ಜ್ಞಾಪಕಕ್ಕೆ ಬಂದಿತು. ಪಶ್ಚಾತ್ತಾಪ ಪ್ರಾಯಶ್ಚಿತ್ತ ಮಾಡಿಕೊಂಡು ಹರ್ಯನುಗ್ರಹದಿಂದ ಹರಿಮಂದಿರವನ್ನು ಸೇರಿದ.

**ತಾತ್ಪರ್ಯ :** ಶ್ರೀ ಹರಿನಾಮಸ್ಮರಣೆ ಭಕ್ತಿಭಾವದಿಂದ ಅದಕ್ಕಿಂತ ಶ್ರೇಷ್ಠ ಪ್ರಾಯಶ್ಚಿತ್ತವಿರುವುದಿಲ್ಲ.

''ಮುಟ್ಟಬೇಡಿ ಮುಟ್ಟಬೇಡಿ ಹರಿಭಕ್ತರನ್ನು'' ಎಂದಿದ್ದಾರೆ ದಾಸರು (ಯಮರಾಜ ತನ್ನ ಭಟರಿಗೆ ತಿಳಿಸಿದನೆಂದಿದೆ). ಇಷ್ಟು ವಿವರಣೆಯು ಇಲ್ಲಿ ಹೇಗೆ ಸಂಬಂಧವೆಂಬುದನ್ನು ತಿಳಿಸಲು ಸ್ವಲ್ಪ ವಿಸ್ತಾರವಾಗಿ ಬರೆಯಲಾಗಿದೆ. ಇಲ್ಲಿ ವೇದಗಳಲ್ಲಿ ಹಾಗೂ ಶ್ರೀಮದಾಚಾರ್ಯರ ಸಿದ್ಧಾಂತ ಬೈಬಲ್‌ನಲ್ಲಿ ತಿಳಿಸಿದ್ದರೂ ಎಷ್ಟು ಭಿನ್ನವಿದೆ ಎಂದು ತಿಳಿಯಬೇಕು.

ಬೈಬಲ್‌ನ ಪ್ರಕಾರ ಮನುಷ್ಯನಿಗೆ ಜೀವನ ಒಂದೇ ಸಲ ಆಗುವುದು. ಅವನು ಮಾಡಿದ ಪಾಪಕರ್ಮಗಳಿಗೆ ನರಕ ಅನುಭವಿಸುವುದನ್ನು ಬಿಟ್ಟರೆ ಬೇರೆ ದಾರಿಯೇ ಇಲ್ಲ. ಪ್ರಾಯಶ್ಚಿತ್ತ ಪಶ್ಚಾತ್ತಾಪಕ್ಕೆ ಅವಕಾಶವೇ ಇರುವುದಿಲ್ಲ. ಆದರೆ ಕ್ರಿಸ್ತನ ಬಗ್ಗೆ ಒಂದು ಒಳ್ಳೆಯ ಮಾತನ್ನಾಡಿದರೆ ಸಾಕು, ಸ್ವರ್ಗಕ್ಕೆ ಅಧಿಕಾರಿಯಾಗುತ್ತಾನೆ ಎಂದಿದೆ.

ಅಜಾಮಿಳ ತನ್ನ ಪಾಪಕೃತ್ಯಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಿ ಜೀವ ಪರಿಶುದ್ಧವಾದ ಮೇಲೆ ಶ್ರೀಹರಿ ಅನುಗ್ರಹ ಪಡೆದ. ಅಂದ ಮೇಲೆ ನಾನು ಹರಿಸ್ಮರಣೆ ಮಾಡುತ್ತೇನೆ ಅಂತ ಇಷ್ಟಂದರೆ ಸಾಲದು. ಮಾಡಿದ ಪಾಪಕರ್ಮಗಳು ನಾಶವಾಗಬೇಕಾದರೆ ಪಶ್ಚಾತ್ತಾಪ ಪ್ರಾಯಶ್ಚಿತ್ತ ರೂಪ ವ್ರತ, ಜಪ, ತಪ, ಸ್ವಾಧ್ಯಾಯ ಮಾಡಿ ಹರಿಪ್ರೀತಿಗಳಿಸಬೇಕು. ಆಗಲೇ ಉಕ್ತಿ ದೊರೆಯುವುದು. ಶ್ರೀಮದಾಚಾರ್ಯರು ಜೀವನ ನೈಜ ಸ್ವಭಾವ. ತಪ್ಪು ಪಾಪ ಮಾಡುವುದಿಲ್ಲವೆಂದಿಲ್ಲ. ಯಾವುದೋ ಜನ್ಮಾಂತರದಲ್ಲಿ ಮಾಡಿದ್ದು ಪ್ರಾರಬ್ಧವಶಾತ್ ದುರಾಚಾರಿಯಾಗಿರಬಹುದು. ಮೇಲ್ನೋಟಕ್ಕೆ ದುರಾಚಾರಿಯಂತೆ ತೋರಬಹುದು. ಜೀವನ ಸ್ವಭಾವ ಸಹಜ ಗುಣ ಎಂದಿಗೂ ಬದಲಾಗದು. ಅವನಲ್ಲಿ, ಅವನ ಅಂತರಂಗದಲ್ಲಿ ಸಾತ್ವಿಕ ಗುಣವಿರುವುದು. ಶ್ರೀಕೃಷ್ಣ ಭಗವಾನ್ ಗೀತೋಪದೇಶ ನಾಲ್ಕನೇ ಜ್ಞಾನಯೋಗ ೯ನೇ ಅಧ್ಯಾಯ ರಾಜವಿದ್ಯಾಯೋಗ ಎರಡೂ ಕಡೆ ಸ್ಪಷ್ಟ ಪಡಿಸುತ್ತಾನೆ.

**(೧) ಅಪಿಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ ।**
**ಸರ್ವಂಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥** (ಗೀ. ೪-೩೬)

ಒಂದು ವೇಳೆ ಮಹಾಮಹಾ ಪಾತಕನಾಗಿದ್ದರೂ ಪರಮಾತ್ಮನ ವಿಷಯ ಜ್ಞಾನ ಸಂಪಾದನೆ ಎಂಬ ಹಡಗಿನ ಸಹಾಯದಿಂದ ಎಲ್ಲಾ ಪಾಪಗಳೆಂಬ ಸಾಗರವನ್ನು ದಾಟುತ್ತಾನೆ.

**(೨) ಆಪಿಚೇತ್ಸುದುರಾಜಾರೋ ಭಜತೇ ಮಾಮನನ್ಯಭಾಕ್ ।**
**ಸಾದುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋಹಿಸಃ ॥** (ಗೀ. ೯-೩೦)

ಯಾವುದೋ ಬಲವತ್ತರ ಕಾರಣದಿಂದ ದುರಾಚಾರಿಯಾಗಿದ್ದರೂ ಅವನು ನನ್ನನ್ನೇ ಭಕ್ತಿಭಾವದಿಂದ ಭಜಿಸುವವನು ಸತ್ಪುರುಷನೆಂದೇ ಗ್ರಹಿಸಬೇಕು. ಭಕ್ತಿಭಾವವೆಂದರೆ ಅವನು ಹಿಂದೆ ಶ್ರೇಷ್ಠ ತತ್ವಜ್ಞಾನಿಯಾಗಿದ್ದು ಈಗ ಪ್ರಾರಬ್ಧವಶಾತ್ ಪಾಪಕರ್ಮತನಾಗಿದ್ದರೂ ಆಮೇಲೆ ತನ್ನ ದುರ್ನಡತೆ ಬಗ್ಗೆ



ಲಜ್ಜಿತನಾಗಿ ಪಶ್ಚಾತ್ತಾಪ ಪ್ರಾಯಶ್ಚಿತ್ತ ಮಾಡಿಕೊಂಡು ಭಗವಂತನ ಜ್ಞಾನ ಸಂಪಾದಿಸಿ ಇನ್ನು ಮುಂದೆ ಇಂತಹ ದುಷ್ಕೃತ್ಯ ಮಾಡುವುದಿಲ್ಲ ಎಂದು ಸಂಕಲ್ಪ ಮಾಡಿ ಶೇಷ ಜೀವನವನ್ನು ಭಗವತ್ಪ್ರೀತಿಕರವಾದ ಕರ್ಮವನ್ನು ಮಾಡುತ್ತಾನೆ. ಅಂತಹವನು ನನಗೆ ಪ್ರೀತಿಗೆ ಯೋಗ್ಯನೆಂದು ತಿಳಿಯಬೇಕು. ಸಾಧಾರಣವಾಗಿ ಸಜ್ಜನರು ಸಾತ್ವಿಕ ಸ್ವಭಾವದವರು. ಎಂದಿಗೂ ದುರಾಚಾರಿಗಳಾಗುವುದಿಲ್ಲ (ದುಷ್ಕರ್ಮ ಮಾಡುವುದಿಲ್ಲ.) ಇಲ್ಲಿ ದುರಾಚಾರಿ ಎಂದರೆ ಸಾತ್ವಿಕರು, ಶ್ರೀಶನ ಭಕ್ತರು, ವೇದಾಂತ ಸಂಭೂತರು, ಮುನಿಗಳು, ತಪಸ್ವಿಗಳು ಮಾಡಿದ ಅಧಿಕ ಪುಣ್ಯ (ಅನಿಷ್ಟ ಪುಣ್ಯ) ಕಳೆದುಕೊಳ್ಳಲೂ ಪರಮಾತ್ಮನ ಪ್ರೇರಣಾನುಸಾರ ದುರಾಚಾರದಲ್ಲಿ ತೊಡಗಿರಬಹುದು. ಅಜಾಮಿಳನೇ ಇದಕ್ಕೆ ಸಾಕ್ಷಿ. ಅಂತಹವನು ಬೇಗನೇ ಧರ್ಮಮಾರ್ಗದಲ್ಲಿ ನಡೆಯುತ್ತಾನೆ.

ಇಂತಹ ಸದವಕಾಶ ಬೈಬಲ್‌ನಲ್ಲಿ ಇರುವುದಿಲ್ಲ. ವಾರಕ್ಕೊಮ್ಮೆ ಚರ್ಚಿಗೆ ಹೋಗಿ ಪ್ರಾರ್ಥಿಸಿದರೆ ಸಾಕು. ಇನ್ನು ತನ್ನ ಅಧರ್ಮ ಪಾಪಗಳನ್ನು ಚರ್ಚಿನಲ್ಲಿ, ಪಾದ್ರಿಯಲ್ಲಿ ಹೇಳಿಕೊಳ್ಳಬೇಕು. (Confession) ಆಗ ಪಾದ್ರಿ ಕೇಳಿ, ನೀನು ಪಾಪನಿಂದ ಮುಕ್ತನಾಗಿರುವೆ ಅಂತ ಹೇಳುತ್ತಾನೆ. ಪಾದ್ರಿಗೆ ಪಾಪವನ್ನು ನಿವಾರಿಸಲು ಹೇಗೆ ಅಧಿಕಾರ ಬಂತು ? ಉತ್ತರವಿಲ್ಲ. ಇರುವುದಿಲ್ಲ. ಏಕೆಂದರೆ ಪಾದ್ರಿಯೂ ಮನುಷ್ಯನೇ. ಎಷ್ಟೋ ಪಾಪಗಳನ್ನು ಮಾಡಿರಲಿಕ್ಕೆ ಇರಬೇಕು. ತನ್ನ ಪಾಪವನ್ನು ಕಳೆದುಕೊಳ್ಳಲಾಗದವನು ಇನ್ನೊಬ್ಬರ ಪಾಪಗಳನ್ನು ಕಳೆಯುವ ಯೋಗ್ಯತೆ ಹೇಗೆ ಬಂದಿತು ? ...... ಉತ್ತರವಿಲ್ಲ.

ಈ ವಿಷಯವಾಗಿ ಶ್ರೀಮದಾಚಾರ್ಯರು ಜೀವನ ಸ್ವರೂಪ ನೈಸರ್ಗಿಕ ಗುಣ ಬದಲಾಗುವುದಿಲ್ಲವೆಂದಿದ್ದಾರೆ. ಜೀವನ ಸ್ವರೂಪ ಗುಣಕ್ಕೆ ಸಂಬಂಧಿಸಿದ್ದೇ ಆಗಲಿ ದೇಹ (ಮನುಷ್ಯನಿಗಲ್ಲ) ಸ್ವಭಾವತಃ ಸಾತ್ವಿಕರು. ಮೇಲೆ ಬೇರೆಯಾಗಿ ಕಂಡಾಕ್ಷಣ ದುಷ್ಟರೆಂದು ಪೂರ್ತಿ ಹೇಳಲು ಬರುವುದಿಲ್ಲ. ಜೀವರನ್ನು ಮೂರು ಭಾಗವಿರುವುದಾಗಿ ತಿಳಿಸುತ್ತಾರೆ.

| | | |
|---|---|---|
| ಸಾತ್ವಿಕ ೮೦% | ರಾಜಸ ೧೫% | ತಾಮಸ ೫% |
| ರಾಜಸ ೭೦% | ಸಾತ್ವಿಕ ೨೦% | ತಾಮಸ ೧೦% |
| ತಾಮಸ ೮೫% | ರಾಜಸ ೧೦% | ಸಾತ್ವಿಕ ೫% |

ಈ ವಿಭಜನೆ ಎಲ್ಲಾ ವರ್ಣದವರಲ್ಲಿ ಇರುವುದು. ಅಂತ್ಯಜನೆಂದಾಕ್ಷಣ ಸ್ವರೂಪತಃ ಸಾತ್ವಿಕನಿರಬಹುದು ಅಥವಾ ರಾಜಸ ಸ್ವಭಾವದವನಾಗಿರಬಹುದು. ಇದೇ ರೀತಿ ಕ್ಷತ್ರಿಯ, ವೈಶ್ಯ, ಬ್ರಾಹ್ಮಣ ವರ್ಣದಲ್ಲಿ ಕಾಣುತ್ತೇವೆ. ಬ್ರಾಹ್ಮಣನೆಂದಾಕ್ಷಣ ಎಲ್ಲಾ ಬ್ರಾಹ್ಮಣ ವರ್ಗದವರು ೧೦೦% ಸಾತ್ವಿಕನೆಂದು ಹೇಳಲೂ ಬರುವುದಿಲ್ಲ. ಪುರಾಣಗಳಲ್ಲಿ ಸಾಕಷ್ಟು ಉದಾಹರಣೆಗಳು ಕಾಣುತ್ತೇವೆ. ಹಾಗೆಂದೆ

**ಸರ್ವ ವರ್ಣಾಶ್ರಯಮಾಣಾಂ ಚಜ್ಞಾನಾನ್ಮೋಕ್ಷೋವಿನಿಶ್ಚಿತಃ ಅಂತ್ಯಾನಾಂ ಸ್ಥಾವಕಾಣಾಂ ವ ತಥಾಪಿ ಯತಿರುತ್ತಮಃ ॥** (ಛಾಂದೋಗ್ಯ ಭಾಷ್ಯ)

**ಕೌಂತೇಯ ಪ್ರತಿಜಾನೀಃ ನಮೇ ಭಕ್ತಃ ಪ್ರಣಸ್ಯತಿ** ಶ್ರೀಕೃಷ್ಣ ಭಗವಾನ್ ಭಗವಂತನ ಭಕ್ತರು ಯಾವ ವರ್ಣ, ಜಾತಿಯವರೇ ಆಗಲಿ ಕೃಷ್ಣ ಭಕ್ತರಾದರೆ ಉದ್ಧಾರ ಮಾಡುತ್ತಾನೆ.

**ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।**
**ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಸ್ತೇಽಪಿ ಯಾಂತಿ ಪರಾಂ ಗತಿಮ್ ॥**
**ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ ॥** (ಗೀ. ೯–೩೨,೩೩)

ಬ್ರಾಹ್ಮಣ ವರ್ಣ ಜ್ಞಾನ ಸಂಪಾದಿಸಲು ತನ್ಮೂಲಕ ಭಕ್ತಿಯಿಂದ ಭಜಿಸಲು ಹೆಚ್ಚು ಅವಕಾಶವಿರುವುದು.

ಇದರಿಂದ ಒಂದು ವರ್ಣದವರೇ ಮುಕ್ತಿಗೆ ಯೋಗ್ಯರು ಎಂದು ತಿಳಿಯಬಾರದು. ಧರ್ಮವ್ಯಾಧ ಮುಕ್ತಿಯೋಗ್ಯನಲ್ಲವೇ ?

ಒಬ್ಬ ಬ್ರಾಹ್ಮಣ ವಿನಾಕಾರಣ ದಂಡದಿಂದ ನಾಯಿಯನ್ನು ಹೊಡೆದ. ಶ್ರೀರಾಮಚಂದ್ರನಿಗೆ ವಿಷಯ ತಿಳಿಯಲು ಬ್ರಾಹ್ಮಣನಾದರೋ ಶಿಕ್ಷೆಗೆ ಗುರಿಯಾದ (ರಾಮಾಯಣ).

ನೀವು ಬ್ರಾಹ್ಮಣರು ಉತ್ತಮ ವರ್ಣದವರು ಮಾತ್ರ ಮುಕ್ತಿಗೆ ಹೋಗಬೇಕು. ಬಾಕಿಯವರಿಗೆ ಅತಿದೂರ, ದುಸ್ಸಾಧ್ಯ ಎನ್ನುವ ವಾದ ಅಪ್ರಮಾಣ. **ಅರ್ಥವಿಲ್ಲದೆ ಅಜ್ಞಾನದಿಂದ ಶ್ರೀಮದಾಚಾರ್ಯರಲ್ಲಿ ದೋಷಾರೋಪ ಮಾಡುತ್ತಾರೆ.**



ಬೈಬಲ್‌ನಲ್ಲಾಗಲಿ ಇಸ್ಲಾಂನಲ್ಲಾಗಲಿ ಇಂತಹ ಅವಕಾಶವಿರುವುದಿಲ್ಲ. ಅವರು Satan ಅಂತ ತಿಳಿಸಿ (Beelzebub-Belial) ಇತ್ಯಾದಿ ದೈತ್ಯರನ್ನು ತಿಳಿಸುತ್ತಾರೆ.

Satan (ಸೈತಾನ್ – ದೇವದ್ವೇಷಿ, ವೈರಿ, ಪಾಪಿ). ಇವನು ಮೊದಲು ಒಬ್ಬ Archengel ಪೂರ್ವದಲ್ಲಿ ದೇವದೂತ. ಆದರೆ ಭಗವಂತನನ್ನು ದ್ವೇಷಿಸಿ ದೂಷಿಸಿದ. ಕಾರಣ ಪತಿತನಾದ. ಶಿಕ್ಷೆಗೊಳಗಾದ. ನಿತ್ಯ ನರಕಕ್ಕೆ ತಮಸ್ಸಿನಲ್ಲಿ ಬಿದ್ದನು. ಚೋರನನ್ನು ಹಿಡಿದು ಗಲ್ಲಿಗೇರಿಸಿದಂತೆ ಇದೆ.

ಮಧ್ವ ಸಿದ್ಧಾಂತದಲ್ಲಿ ಕಲಿ, ಕಾಲನೇಮಿ ಮಣಿಮಂಥರೆಂಬ ದೈತ್ಯರು ನೈಜ ಹರಿದ್ವೇಷಿಗಳು. ಅವರಿಗೆ ಮುಕ್ತಿ ಅಂದರೆ ಅಂದಃತಮಸ್ಸು. ಎಂದೆಂದಿಗೂ ಉನ್ನತಿ ಇರುವುದಿಲ್ಲ. ಆದರೆ ಹರಿಯನ್ನು ದ್ವೇಷಿಸುವ ಸಾಮಾನ್ಯ ದೈತ್ಯರಿಗೆ ತಮ್ಮ ಸಾತ್ವಿಕ ಸ್ವಭಾವದಿಂದ ಸಾತ್ವಿಕರೇ ಹೊರನೋಟಕ್ಕೆ ದೈತ್ಯಸ್ವಭಾವದವರಂತೆ ಕಾಣುತ್ತಾರೆ. ಶಿಶುಪಾಲ, ದಂತವಕ್ರ ಕೃಷ್ಣನನ್ನು ನಿಂದಿಸಿದರು. ಅವರ ಆತ್ಮ, ಪರಮಾತ್ಮನ ಶರೀರದಲ್ಲಿ ಸಾಯುಜ್ಯ ಹೊಂದಿತು. ವಿಚಾರವೇನೆಂದರೆ ಹಿರಣ್ಯಾಕ್ಷ, ಹಿರಣ್ಯಕಶಿಪು, ರಾವಣ, ಕುಂಭಕರ್ಣ, ಶಿಶುಪಾಲ, ದಂತವಕ್ರ ಹಿಂದಿನ ಜನ್ಮದಲ್ಲಿ ವೈಕುಂಠ ದ್ವಾರಪಾಲಕರಾಗಿದ್ದರು. ಶಾಪವಶಾತ್ ಅಸುರ ಯೋನಿಯಲ್ಲಿ ಹುಟ್ಟಬೇಕಾಯಿತು. ಅವರಲ್ಲಿ ಅದೇ ಹೆಸರಿನ ದೈತ್ಯರು ಆವಿಷ್ಠರಾಗಿ ಬ್ರಹ್ಮದ್ವೇಷಿಗಳಾದರು. ಜಯವಿಜಯರೆಂಬುವರಿಗೆ ಸಾಯುಜ್ಯವಾಯಿತು. ಅವರಲ್ಲಿ ಆವಿಷ್ಠ ಅದೇ ಹೆಸರಿನ ದೈತ್ಯರಿಗೆ ನಿತ್ಯ ನರಕವೇ ಆಯಿತು. ಈ ರೀತಿ ಜೀವ ದ್ವಯವಿರುವುದು. ಕಲಿ, ಕಾಲನೇಮಿ – ವೇಗ ಇತ್ಯಾದಿಗಳಲ್ಲಿ ಇದ್ದಿಲ್ಲವಾದ್ದರಿಂದ ಅಂದಃತಮಸ್ಸೇ ಆಗುವಂತಾಯಿತು.

ಕ್ರಿಸ್ತಮತದಲ್ಲಿ ಇಂತಹ ವಿಷಯವಿರುವುದಿಲ್ಲ. ಆ ಮತಗಳಲ್ಲಿ Heaven (Jannath) Hell (Jahannum) ವೆಂಬೆರಡೇ ತಿಳಿಸಿ Heaven ಆಗಲಿ Hell ಬಗ್ಗೆ ಆಗಲಿ ತಿಳಿಸಿರುವುದಿಲ್ಲ.

ಕ್ರಿಸ್ತನ ಶಿಷ್ಯರ ಪೈಕಿ ಜೂಡಾಸ್ ಎಂಬುವನು ದ್ರೋಹಿಯಾಗಿ ರೋಮನ್ನರಿಗೆ ಕ್ರಿಸ್ತನ ವಾಸಸ್ಥಳವನ್ನು ತಿಳಿಸುತ್ತಾನೆ. ಈ ವಿಷಯ ಕ್ರಿಸ್ತನಿಗೆ ಅಂತರಂಗ ತಿಳಿಯುತ್ತದೆ. On the day of last supper, he give a sermon. There he tells one amongst you deceives me ಎಂದು ಹೇಳುತ್ತಾರೆ.

ಇರಲಿ. ಕ್ರಿಸ್ತನು ಎರಡು ರೀತಿಯ ಜೀವರು ವಿವಿಧ ರೀತಿಯಾಗಿ ಇರುವುದಾಗಿ ಅಂಗೀಕರಿಸುತ್ತಾನೆ. ಇದನ್ನು Bible (new testament) ನಲ್ಲಿ ಹೀಗೆ ತಿಳಿಸಲಾಗಿದೆ. "Do men gather grapes out of thorns or fix of thistles ? Even so every good tree bringeth forth evil fruits. A good tree cannot bring forth fruits neither can a corrupt tree bring forth good fruit. Every tree that bringeth not forth good fruit is heaven down and cast into fire. Wherefore by their fruits yea shall know them." (St. Mathew Chapter VII vs 16-20)

ಮುಳ್ಳುಗಳಿರುವ ವೃಕ್ಷದಿಂದ (ಬಳ್ಳಿಯಿಂದ) ದ್ರಾಕ್ಷಿಯನ್ನು ಪಡೆಯಬಹುದೇ? ಅಂಜೂರ ಫಲವು ಇಂತಹ ಬಳ್ಳಿಯಿಂದ ಸಿಗುವುದೇ ? ಹಾಗಿದ್ದ ಮೇಲೆ ಎಲ್ಲಾ ಒಳ್ಳೆಯ ಗಿಡವು ಒಳ್ಳೆಯ ಫಲವನ್ನೇ ಕೊಡುವುದು. ದುಷ್ಟ ಮುಳ್ಳು ಕೊಂಪೆಯಿಂದ ಕೆಟ್ಟ ಫಲವನ್ನು ಕೊಡುವುದು.

ಆದ್ದರಿಂದ ಒಳ್ಳೆಯ ಹಿತವಾದ (a tree with right qualities) ಗಿಡ ಕೆಟ್ಟ ಫಲವನ್ನು ಕೊಡಲಾರದು. ಹಾಗೇ ಕೆಟ್ಟ ಗಿಡ ವೃಕ್ಷವು ಒಳ್ಳೆಯ ಹಿತವಾದ, ಸ್ವೀಕರಿಸಲು ಯೋಗ್ಯವಾದ ಫಲವನ್ನು ಕೊಡುವುದಿಲ್ಲ. ಯಾವ ವೃಕ್ಷ (ಬಳ್ಳಿಯು)ವು ಯೋಗ್ಯವಾದ ಒಳ್ಳೆಯ ಫಲ (ಹಣ್ಣನ್ನು) ಕೊಡುವುದಿಲ್ಲವೋ ಅದನ್ನು ಕಡಿದು ಕತ್ತರಿಸಬೇಕು. ಈ ವಿಷಯಗಳಲ್ಲಿ ವೃಕ್ಷಗಳಲ್ಲಿ ಫಲಗಳಲ್ಲಿ ವಿವಿಧ ರೀತಿ (ಗುಣ) ಇರುವಾಗ ಇನ್ನು ಮನುಷ್ಯರೆಲ್ಲಾ ವಿವಿಧವಾಗಿರುವುದೆಂದು ಬೇರೆ ಹೇಳಬೇಕಾ? ಎಂದು ತಿಳಿಯಬೇಕು. ಮನುಷ್ಯರಲ್ಲಿ (ಹೆಣ್ಣೇ ಆಗಲಿ, ಪುರುಷೇ ಆಗಲಿ) ಈ ರೀತಿಯ ಗುಣದ್ವಯವನ್ನು ಅಂಗೀಕರಿಸಿದಾಗ ದುಷ್ಟರಿಗೆ ದುಃಖ, ಸಜ್ಜನರಿಗೆ ಸುಖವೆನ್ನುವುದನ್ನು ತಿಳಿಸುತ್ತಾನೆ. (A.O.Hume). ಹಾಗಿಲ್ಲವಾದರೆ ಅವರಲ್ಲಿ ಕೆಲವರಿಗೆ ನಿತ್ಯ ಸುಖ (eternal bliss) ಮತ್ತೆ ಕೆಲವರಿಗೆ ನಿತ್ಯ ನರಕ (eternal damnation suffering) ಅಂತ ತಿಳಿಸುತ್ತಾರೆ. ಇಲ್ಲಿ ಭಗವಂತನನ್ನು ಅಹಂಕಾರಿ, ಪಕ್ಷಪಾತಿ Arrogant (dictator) ಎನ್ನುವ ದೋಷಾರೋಪ ಮಾಡುತ್ತಾರೆ. ಇದು ಸರಿಯೇ ?

ಕ್ರಿಸ್ತ ಮುಸ್ಲಿಂ ಮತದಲ್ಲಿ ಇದಕ್ಕೆ ಸಮರ್ಪಕ ಉತ್ತರ ಸಿಗುವುದಿಲ್ಲ. ಸ್ವರ್ಗ ನರಕಗಳನ್ನು ಕೊಡುವ God ಸರ್ವಾಧಿಕಾರಿಯಂತೆ ವರ್ತಿಸುತ್ತಾನೆ ಎನ್ನುವಂತಾಗುವುದು.



ಇಂತಹ ಸಂದಿಗ್ಧ ತೊಡಕಿನ ಸಮಸ್ಯೆಗೆ ಆಚಾರ್ಯ ಶ್ರೀಮಧ್ವರೊಬ್ಬರ ಪರಿಹಾರ ಸರ್ವ ಸಮರ್ಪಕ, ಸಮಾಧಾನ ಕೊಟ್ಟ ಏಕೈಕ ದಾರ್ಶನಿಕರು.

ಸಾತ್ವಿಕ, ರಾಜಸ, ತಾಮಸ ಗುಣ ನೈಸರ್ಗಿಕ. They do not get mixed up or overlap on each other. ರಾಜಸ ಸ್ವಭಾವದವರು ಕೆಲವೊಮ್ಮೆ ತಾತ್ಕಾಲಿಕ ಸಾತ್ವಿಕ ಕರ್ಮದಲ್ಲಿ ಅಥವಾ ತಾಮಸ ಕರ್ಮದಲ್ಲಿ ತೊಡಗಬಹುದು. ಆದರೆ ರಾಜಸರು ರಾಜಸರೇ. ವ್ಯತ್ಯಾಸವಾಗುವುದಿಲ್ಲ.

**"ಮಾನುಷಾ ಮಿಶ್ರಮತಯೋ ವಿವಿಶ್ರಗತಯೋಪಿಚ"**

ಮನುಷ್ಯರಲ್ಲಿ ಸತ್ವ ತಮೋಗುಣಗಳು ಕಲೆತಾಗ (ಮಿಶ್ರಜ್ಞಾನವುಳ್ಳವರಾದಾಗ) ಅವರ ಪ್ರಾರಬ್ಧವೂ, ಹಣೆಬರಹವೂ ಮಿಶ್ರಿತ ಫಲ ಕೊಡುವುದು. (ನಿತ್ಯ ಸಂಸಾರಿಗಳು) (ಸೂತ್ರ ಭಾಷ್ಯ)

ನಿತ್ಯ ಸಂಸಾರಿತ್ವವು ಅನಾದಿ ಜೀವನ ಸ್ವರೂಪ, ಜೀವತ್ರೈ ವಿದ್ಯಾ ಎನ್ನುವುದು ಶ್ರೀಮದಾಚಾರ್ಯರ ವಿಶಿಷ್ಟ ಕೊಡುಗೆ. Sri Madhwa's unique discovery and not inventor ಈ ವಿಧ ಜೀವತ್ರೈ ವಿದ್ಯ ಎಂಬ ತತ್ವ ಬೋಧನೆ (Doctrine) ಸಿದ್ಧಾಂತವನ್ನು ತಪ್ಪಾಗಿ ತಿಳಿದು ನಿಂದಿಸುತ್ತಾರೆ. ಆದರೆ ಆಚಾರ್ಯರ ಸಿದ್ಧಾಂತವನ್ನು ಸ್ವಲ್ಪ ವಿಚಾರ ಮಾಡಿದಾಗ ಎಷ್ಟು ಅರ್ಥಪೂರ್ಣ ಅನುಭವ, ಶಾಸ್ತ್ರ ಸಮ್ಮತವೆಂದು ಈಗೀಗ ಸಮರ್ಥನೆ ಇರುವುದು. ಶ್ರೀಮದಾಚಾರ್ಯರು ಏನೇ ಸಿದ್ಧಾಂತ ಹೇಳಿದರೂ ಅವರ ವಾಕ್ಯ ಸಿದ್ಧಾಂತ ಪ್ರಾಮಾಣಿಕ, ಆಧಾರಸಹಿತವೆಂಬುದು ಮನದಟ್ಟಾಗುವುದು.

ಕಲಿ, ಕಾಲನೇಮಿ ಮಣಿಮಂಥಾದಿ ದೈತ್ಯರಿಗೆ ತಮಸ್ಸಾಗುವುದಲ್ಲಾ ಅಯ್ಯೋ ಅಂತ ಕಣ್ಣೀರು ಸುರಿಸುವುದರಿಂದ ಅವರ ತಮಸ್ಸಿನ ಗತಿಯಾಗುವುದು ತಪ್ಪುವುದಿಲ್ಲ.

ಈ ಉಪನ್ಯಾಸವನ್ನು ಉಪಸಂಹಾರ ಮಾಡುವ ಮುನ್ನ ಒಂದೆರಡು ಮುಖ್ಯ ವಿಷಯಸಂಗತಿ ತಿಳಿಸಬಯಸುತ್ತೇನೆ.

(೧) ನಾಲ್ಕು ರೀತಿಯ ಅವಸ್ಥಾ ಪ್ರಪಂಚವಿರುವುದೆಂದು ಜೀವರು ಅವರ ಯೋಗ್ಯತೆ (ಸ್ವರೂಪ ಗುಣ)ಗೆ ತಕ್ಕಂತೆ ಹೊಂದುತ್ತಾರೆ. ಈ ಜಗತ್ತು ನಾವು ಈಗ ವಾಸಿಸುವ ಮನೆ, ಮಠ, ಸಂಸಾರಗಳು Mundane World.

(೨) Swarga (Heaven) ಪುಣ್ಯಕರ್ಮಕ್ಕೆ ತಕ್ಕ ಸುಖಾನುಭವ ಪಡೆಯಲು

ತಾತ್ಕಾಲಿಕ ಸ್ಥಾನ ಸತ್ಕರ್ಮ ಫಲದಿಂದ ಸ್ವರ್ಗಕ್ಕಾಗಿ ಮಾಡಿದಾಗ ಅನುಭವಿಸಲು ತಾತ್ಕಾಲಿಕ ಸ್ಥಳ. ಕರ್ಮಫಲ ಪೂರ್ತಿಯಾಯಿತು. ನಡೆ ಹಿಂದಕ್ಕೆ. ಸಂಸಾರದಲ್ಲಿ ತಿರುಗಿ ಬರುವುದು. **(ಕ್ಷೀಣೇಪುಣ್ಯೇ ಸ್ವರ್ಗಲೋಕಂ ವಿಶಾಲಂ)** ನಿತ್ಯ ಸಂಸಾರಿಗಳು.

(೩) Hell ನರಕ ದುಷ್ಕರ್ಮಿಗಳಿಗೆ ಅವರ ಕರ್ಮಫಲ ರೂಪ ದುಃಖ ನೋವನ್ನು ಅನುಭವಿಸುವುದು. ಇದೂ ಸಹ ತಾತ್ಕಾಲಿಕ ಮರಣ ಮಾನವಲೋಕಕ್ಕೆ ಬರುವುದು. ಪಾಪಕರ್ಮದಿಂದ ನರಕಯಾತನೆ ಮತ್ತೆ ಲೋಕದಲ್ಲಿ ಬಂದಾಗ ಹೀನ ಜನ್ಮ. ಅದರಿಂದ ದಾರಿದ್ರ ಕೆಟ್ಟ ಕೆಲಸ, ಮಾತು ಮಾಡಿ ಮತ್ತಷ್ಟು ಪಾಪಕರ್ಮ ಮತ್ತೇ ನರಕ ಹೀಗೆ ಒಂದು ಚಕ್ರದಂತೆ ಭ್ರಮಿಸುತ್ತಾರೆ. ಮೇಲೆ ಏಳುವುದಿಲ್ಲ. ಅಧಃಪತನದಲ್ಲಿ ಜಾಗವಿಲ್ಲ.

(೪) ವೈಕುಂಠ ಸದಾ ಭಗವಚ್ಚಿಂತನೆ ಸತ್ಕರ್ಮಗಳಿಗೆ ಸಿಗುವ ಮುಕ್ತಿಸ್ಥಾನ. ವೈಕುಂಠವನ್ನು ಸೇರಿದವರು ಈ ಜಗತ್ತಿಗೆ ಹಿಂತಿರುಗುವುದೇ ಇಲ್ಲ.

ತಮಸ್ಸು ಬ್ರಹ್ಮದ್ವೇಷಿಗಳು. ಹರಿನಿಂದಕರು. ಅಹಂಬ್ರಹ್ಮಾಸ್ಮಿ ಅಂತ ಹೇಳಿಕೊಳ್ಳುವರಿಗೆ ಸ್ಥಾನ. ತಮಸ್ಸು ನಿಬಿಢಾಂಧಕಾರ (Isolated Dark cell) ಅಲ್ಲಿ ಬಿದ್ದವರಿಗೆ ಗತಿಯೇ ಇರುವುದಿಲ್ಲ.

ಹೀಗೆ ಅನೇಕ ದೃಷ್ಟಾಂತಗಳಿಂದ ಶ್ರೀಮದಾಚಾರ್ಯರು ಸಪ್ರಮಾಣವಾಗಿ ಸಮರ್ಥಿಸಿರುತ್ತಾರೆ.

Sri Madhwa has answered every question with utmost rational thinking to everybody's satisfaction.

ಮಾಯಾವಾದ ಮತ ಪ್ರಕಾರ ಎಲ್ಲರೂ ಬ್ರಹ್ಮರೇ ಆದರೆ ಗುಣತ್ರೈವಿಧ್ಯೆಯಾಗಲಿ ನರಕ ತಮಸ್ಸು ಮುಕ್ತಿಯಾಗಲಿ ಯಾರಿಗೆ ಯಾರು ಪಡೆಯುತ್ತಾರೆ. ದುರ್ಯೋಧನನಿಗೆ (ಬ್ರಹ್ಮಸ್ವರೂಪನೆಂದು ತಿಳಿಯೋಣ) ತಮಸ್ಸು ಏಕಾಯಿತು ? ಬ್ರಹ್ಮನೇ ಆಗಬೇಕಿತ್ತಲ್ಲಾ. ಇದಕ್ಕೆ ಸಮಾಧಾನ ಸಮರ್ಪಕ ಉತ್ತರವಿರುವುದಿಲ್ಲ.

ಶ್ರೀಕೃಷ್ಣ ಗೀತೆಯಲ್ಲಿ ೧೬ನೇ ಅಧ್ಯಾಯದಲ್ಲಿ ನಿರವಕಾಶವಾಗಿ ಸ್ಪಷ್ಟವಾಗಿ ಹೇಳಿರುವುದನ್ನು ನಾವು ಗಮನಿಸಬೇಕು. ಸಾಕಷ್ಟು ವಿಚಾರವನ್ನು ತಿಳಿಸಲಾಗಿದೆ. ಆಚಾರ್ಯ ಶ್ರೀಮಧ್ವರ ಸಿದ್ಧಾಂತ ಮತವೇ ಸರ್ವ ವೇದ ಶಾಸ್ತ್ರಗಳ ಸಮ್ಮತ.



**ಅಕ್ಷಯಂ ಕರ್ಮ ಯಸ್ಮಿನ್ ಪರೇ ಸ್ವರ್ಪಿತಂ**
**ಪ್ರಕ್ಷಯಂ ಯಾಂತಿ ದುಃಖಾನಿ ಯನ್ನಾಮತಃ ।**
**ಅಕ್ಷರೋ ಯೋಽಜರಃ ಸರ್ವದೈವಾಮೃತಃ**
**ಕುಕ್ಷಿಗಂ ಯಸ್ಯ ವಿಶ್ವಂ ಸದಾಜಾದಿಕಮ್ ॥**
**ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾಖಂಡಮಂಡನಮ್**

॥ ಶ್ರೀಮಧ್ವೇಶಾರ್ಪಣಮಸ್ತು ॥

ಶುಕ್ರವಾರ
೨೩-೦೧-೨೦೦೯

**ಬದರೀನಾಥಾಚಾರ್ಯ ಘೂಳೀ**

## ಕೊನೆಯ ಮಾತು

ಶ್ರೀಮದಾನಂದತೀರ್ಥರ ಸಿದ್ಧಾಂತದ ಬಗ್ಗೆ ಬರೆಯಲಾಯಿತು. ಆದರೆ ಅನ್ಯಮತೀಯರ ಸಿದ್ಧಾಂತ ನಮಗೇಕೆ ತಿಳಿಸಿದಿರಿ ? ಅವರ ಮತಾನುಸಾರಿ ಅವರಿಗೆ. ನಮಗ್ಯಾಕೆ ಬೇಕು ? ನಾವು ಅವರ ಸಿದ್ಧಾಂತವನ್ನು ವಿಮರ್ಶಿಸಿದಂತೆ ಅವರೂ ಶ್ರೀಮಧ್ವಸಿದ್ಧಾಂತವನ್ನು ಟೀಕೆ ಮಾಡುತ್ತಾರೆ. ಮಾಡಬಹುದಲ್ಲಾ ? ಎಂಬ ಆಕ್ಷೇಪವಿರುವುದು.

ಈ ಆಕ್ಷೇಪ ಸರಿಯಲ್ಲ. ಶ್ರೀಮದಾಚಾರ್ಯರಿಗೆ ಅನ್ಯಮತೀಯರ ಸಿದ್ಧಾಂತ (ಭಾಷ್ಯ) ವ್ಯಾಖ್ಯಾನಗಳು ಎಷ್ಟು ರೀತಿಯಾಗಿ ಪ್ರಮಾಣರಹಿತ, ಅಸಂಗತ, ಅಬದ್ಧ. ಕೇವಲ ಕಲ್ಪನಾ ಗೌರವ ಅವರ ಮಾತುಗಳು. ಆಪಾತ್ ರಮಣೀಯವೆಂದು ತಿಳಿಸಿ ತತ್ಸಿದ್ಧಾಂತ, ವೇದ, ವೇದವ್ಯಾಸರ ಮತಾನುಸಾರಿ ವಿವರಿಸಲೂ ಅನ್ಯ ಸಿದ್ಧಾಂತಗಳಿಂದ ಅನ್ಯಥಾ ಜ್ಞಾನವಷ್ಟೇ ಅಲ್ಲದೆ ಮಿಥ್ಯಾರೂಪ ಜ್ಞಾನ ಉದಯಿಸುವಂತೆ ಮಾಡಿ ತಪ್ಪುಮಾರ್ಗದಲ್ಲಿ ನಡೆಯುವಂತೆ ಆಗಿ ಕ್ರಮೇಣ ನಿತ್ಯ ನರಕಕ್ಕೆ ಭಾಗಿಗಳಾಗಬಾರದು. ಸಜ್ಜನರು ಸಮೀಚೀನ ಜ್ಞಾನ ಸಂಪಾದನೆ ಮಾಡಬೇಕು. ಸಮೀಚೀನ ಜ್ಞಾನ ಪರಮ ಶ್ರೇಷ್ಠ ಗುರುಗಳ ಉಪದೇಶದಿಂದ ಸಾಧ್ಯ. ಅಂತಹ ಉತ್ತಮ ಗುರುಗಳೆಂದರೆ ವಾಯುದೇವರ ಅಂಶಸಂಭೂತರಾದ ಆನಂದತೀರ್ಥರೊಬ್ಬರೇ ಜಗದ್ಗುರುಗಳು. ಅವರೇ ವಿಶ್ವಗುರುಗಳು. ನಮ್ಮ ಜನ್ಮ ಉದ್ಧಾರಕರು. ನಿಯತ ಮಾರ್ಗದರ್ಶಕರು. ಶ್ರೀರಮಾರಮಣನ ಅತ್ಯಂತ ಪ್ರೀತಿಪಾತ್ರರು. ವಂಚಿಸುವವರಲ್ಲವೆಂದು ಸದೃಢವಾಗಿ ನಂಬಲೂ ಕರುಣಾಮೂರ್ತಿ ಆತ್ಮಬಂಧುಗಳು. ಇಷ್ಟು ತಿಳಿಯಬೇಕಾದರೆ ಈ Comparitive (critical) study ಮಾಡಿದಾಗ ಗೊತ್ತಾಗುವುದು.

ಮಧ್ವಮತವೇ ಮತವು, ಸಕಲ ಶೃತಿ ಸಮ್ಮತವು. ಮಧ್ವರಾಯರ ಧ್ಯಾನ ಅಮೃತ ಪಾನ. ಮಧ್ವರಾಯರ ಲೀಲೆ ನವರತುನದ ಮಾಲೆ. ಮಧ್ವರಾಯರ ಸ್ಮರಣೆ ಕುಲಕೋಟಿ ಉದ್ಧರಣೆ.

ಈ ರೀತಿ ಅನ್ಯಮತಗಳಿಗೆ ಯಾವ ಆಧಾರ ಪ್ರಮಾಣವಿರುವುದಿಲ್ಲವೆಂದು ತಿಳಿಸುವುದು ಈ ಲೇಖನದ ಉದ್ದೇಶ.



ಒಬ್ಬಾಚಾರಿಯನು ದೈವವೇ ಇಲ್ಲವೆಂದ । ಒಬ್ಬಾಚಾರಿಯನು ದೈವಕೆಂಟೇ ಗುಣವೆಂದ । ಒಬ್ಬಾಚಾರಿಯನು ನಿರ್ಗುಣ ನಿರಾಕಾರ । ನಿರವಯವನೆಂದ ಕಡೆಯಲಿ ತಾನೆ ದೈವವೆಂದ । ಒಬ್ಬರು ವೇದಾರ್ಥವರಿತು ಅರಿಯರು । ಒಬ್ಬ ಮಧ್ವಾಚಾರ್ಯರೇ ಪುರಂದರವಿಠ್ಠಲ । ನೊಬ್ಬನೆ ದೈವವೆಂದು ತೋರಿಕೊಟ್ಟರಾಗಿ (ಆಚಾರ್ಯ ಸುಳಾದಿ)

ಆಯುಷ್ಯ ಇದ್ದರೆ ಅನ್ನಕ್ಕೆ ಕೊರತೆಲ್ಲ । ಜೀವಕ್ಕೆ ಎಂದೆಂದಿಗೂ ತನುಗಳ ಕೊರೆತಿಲ್ಲ । ಸಾವು ಹುಟ್ಟು ಎಂಬೋ ಸಹಜ ಲೋಕದೊಳಗೆ । ಕಾಲಕಾಲದಿ ಕಲ್ಯಾಣ ಗುಣಗಳ । ಕೇಳದವನ ಜನ್ಮ ವ್ಯರ್ಥ ಪುರಂದರವಿಠಲ

ಆದ್ದರಿಂದ ವೈಷ್ಣವ ಜನ್ಮ ಶ್ರೀಹರಿ ದಯಪಾಲಿಸಿದಾಗ ಶ್ರೀಮಧ್ವರಾಯರ ಮತವ ತಿಳಿದೇ ಅದರಂತೆ ನಡೆಯಬೇಕು. ಇಷ್ಟು ಹಿತವಚನ ಆತ್ಮೋದ್ಧಾರಕರನ್ನು ಪಡೆದ ನಾವೇ ಧನ್ಯರು. **''ನಾಸ್ತಿ ಸದೃಶಂ ಹಿತರೂಪಂ''** ಎಂದಿದ್ದಾರೆ ಶ್ರೀಮದಾಚಾರ್ಯರು.

ಈ ಲೇಖನದಿಂದ ಅಸ್ಮತ್ ಗುರುವರೇಣ್ಯರೂ ಹಾಗೂ ಜನಕರಾದ ಭಾಗವತರತ್ನರೆಂದು ಪ್ರಸಿದ್ಧರಾದ ವಿ॥ ಕೃಷ್ಣಮೂರ್ತಿ ಆಚಾರ್ಯ ಘೂಳಿ ಮತ್ತು ಜನನೀ ಸೌಭಾಗ್ಯವತಿ ರುಕ್ಮಿಣೀಬಾಯಿಯವರನ್ನು ಸ್ಮರಿಸಿ ಅರ್ಪಿಸುತ್ತೇನೆ. ಅಲ್ಲದೇ ನನ್ನ ಸತೀಮಣಿ ಇಂದಿರಾ ನನ್ನ ಕಷ್ಟ ಸುಖಗಳಲ್ಲಿ ಸಹಭಾಗಿಯಾಗಿದ್ದು ದಿವಂಗತಳಾದ ಸುಜೀವಿಗೆ ಸದ್ಗತಿ ಆಗಲೆಂದು ಶ್ರೀಹರಿಯಲ್ಲಿ ಪ್ರಾರ್ಥಿಸುತ್ತೇನೆ. ಮುಖ್ಯವಾಗಿ ಮಧ್ವವಲ್ಲಭ ಶ್ರೀರಮಾರಮಾಣನ ಪ್ರೀತಿಯೇ ಮುಖ್ಯ ಉದ್ದೇಶದಿಂದ ನನ್ನ ಯೋಗ್ಯತೆಗೆ ತಕ್ಕಂತೆ ಬರೆಯಲಾಗಿದೆ. ಹನುಮ ಹಾರಿದಷ್ಟು ಗುಬ್ಬಿ ಹಾರಬಲ್ಲುದೆ ? ಎಂಬಂತೆ ನನ್ನ ಪ್ರಯತ್ನವಾಗಿದೆ. ಮಾಧ್ವ ಭಕ್ತರು ಇದನ್ನು ಆದರದಿಂದ ಸ್ವೀಕರಿಸಿ ಅನುಮೋದಿಸಿದರೆ ನನ್ನ ಸಾಹಸಕ್ಕೆ ಯೋಗ್ಯ ಪ್ರೋತ್ಸಾಹವಾಗುವುದು.

**॥ ಇತಿ ಶ್ರೀ ಕೃಷ್ಣಾರ್ಪಣಮಸ್ತು ॥**

**ಬದರೀನಾಥಾಚಾರ್ಯ ಘೂಳೀ**

## ಗ್ರಂಥಋಣ

ಸರ್ವಮೂಲ ಗ್ರಂಥಗಳು ನನ್ನ ಸಂಗ್ರಹ

C.R. Krishna Rao - Dist. Munsif 1924 Preface to eight Upanishads in English and Kannada published Madhwa Muni Seva Sangha, Udupi Chief Editor ಅಗ್ರಹಾರ ನಾರಾಯಣ ತಂತ್ರಿಗಳು.

Dr. B.N.K. Sharma, Bombay - History of Dwaita philosophy etc 1980

Sri H.N. Raghavendrachar - Dwaita philosophy in Vedanta 1941

Dr. R. Nagarajachar (Sharma), Asst. Professor Logic and Philosophy, Govt. Arts College, Madras

ತತ್ತ್ವಪ್ರಕಾಶಿಕಾ, Bhava Bodhe of Sri Raghottama Teertha published by GOM Library, Madras

ಸುಮಧ್ವ ವಿಜಯ, ನಾರಾಯಣಪಂಡಿತಾಚಾರ್ಯ edited with explanation ಪಂಡಿತ ಸಾಣೂರು ಭೀಮಭಟ್ಟ, ಬೆಂಗಳೂರು 1985

Sri Pandit Vyasanakere Prabhanjanachar edited with explanation

ಸುಧಾಸಾರ ಸಂಗ್ರಹ ಪೂಜ್ಯ ಶ್ರೀ ಸತ್ಯಧ್ಯಾನತೀರ್ಥರ ಉಪನ್ಯಾಸಗಳು, ಸಂಗ್ರಹ ಸಂಪಾದನೆ Sri H. Subba Rao, Prof. English, Ma. College, Mysore.

ಶ್ರೀಬ್ರಹ್ಮಸೂತ್ರ ಭಾಷ್ಯ ತತ್ವಪ್ರಕಾಶಿಕಾ

ಅನುವ್ಯಾಖ್ಯಾನ, ಸನ್ಯಾಯ ರತ್ನಾವಳಿ ಶ್ರೀಮನ್ನ್ಯಾಯಸುಧಾ

ಗುರ್ವರ್ಥದೀಪಿಕಾ, ಪರಿಮಳ ಸಂಗ್ರಹ ನಿರೂಪಣೆ ವಿದ್ವಾನ್ ಹೆಚ್. ರಂಗನಾಥಾಚಾರ್

ಖಂಡನತ್ರಯ – ಮಹಾಭಾರತ ತಾತ್ಪರ್ಯ ನಿರ್ಣಯ

ಭಾಗವತ ತಾತ್ಪರ್ಯ

ಭಗವದ್ಗೀತಾ ಭಾಷ್ಯ ತಾತ್ಪರ್ಯ



ಪುತ್ತಿಗೆಮಠ, ಶೀರೂರು ಮಠ ಗ್ರಂಥಾಲಯ

ಉತ್ತರಾದಿ ಮಠ ಹೊಸಪೇಟೆ ಗ್ರಂಥಾಲಯ

ಉತ್ತರಾದಿ ಮಠ ಬೆಂಗಳೂರು ಗ್ರಂಥಾಲಯ

Max Muller - Six systems of Indian Philosophy (Preface)

C.N.K.Iyer - Life of Madhwa

Sri Sankara - the greatest teachers of world series

Short life of Sankara edited byK.S. Ramaswamy

Sastra (Sringeri Mutt MSS) (Guruvamsa published)

Vanivilas Sanskrit Series - Srirangam

Dr. Thibaut - Introduction to Sutra Bhasya

Dr. Radhakrishnan - Indian Philosophy Vol. KII

Sankara Bhasya

Bertrand Russell ABC of relativity.

Sir John Woodrooff

Lokamanya Balagangadhar Tilak - Bhagavathgeetha Rahasya

Bible old and new testament edited in English - Dr. Fr. Norsletfort

Islam - a true perspective - translation in English Michael Clerk and a host of Modern writers commentators

I deeply acknowledge their works and have taken care to see authenticity is accorded priority.

## ಒಂದು ವಿಮರ್ಶಾತ್ಮಕ ವಿವರಣೆ

ಶ್ರೀಶಂಕರಾಚಾರ್ಯರಿಗೆ ತಾವು ಬೋಧಿಸುವ ಅದ್ವೈತ ಸಿದ್ಧಾಂತವು ವ್ಯಾಸ ಸಮ್ಮತವಲ್ಲ ಅಂತ ತಿಳಿದಿದ್ದಿಲ್ಲವೇ ? ತಿಳಿದಿತ್ತು. ಆದರೂ ಬೌದ್ಧ ಮತದಲ್ಲಿನ ಅಂಶಗಳನ್ನು ಸ್ವೀಕರಿಸಿದರು.

| **ಬೌದ್ಧಮತ** | **ಶಂಕರ ಸಿದ್ಧಾಂತ** |
|---|---|
| ಬ್ರಹ್ಮನ ಅಸ್ತಿತ್ವ ಒಪ್ಪುವುದಿಲ್ಲ<br>ವೇದ ಪ್ರಾಮಾಣ್ಯ ಒಪ್ಪುವುದಿಲ್ಲ | ಬ್ರಹ್ಮನನ್ನು ಇದ್ದಾನೆನ್ನುತ್ತಾರೆ. ವೇದ ಪ್ರಾಮಾಣ್ಯ ಸಮ್ಮತಿಸಿದರೂ ಅವುಗಳಲ್ಲಿ ತತ್ವಾವೇದಕ, ಅತತ್ವಾವೇದಕವಿದೆ. ಪಂಚಮಹಾ ವಾಕ್ಯಗಳು ಮಾತ್ರ ಪ್ರಮಾಣ ಉಳಿದದ್ದೆಲ್ಲಾ ಅಪ್ರಮಾಣ. |
| ಜಗತ್ತು ಪರಿಣಾಮ (ಸಂವೃತಿ) | ಜಗತ್ತು ಮಿಥ್ಯ ಬ್ರಹ್ಮನ ಸ್ವರೂಪ. |
| ಜೀವರು ಜನ್ಮಗಳನ್ನು ಹೊಂದುತ್ತಾರೆ. | ಜೀವನೇ ಬ್ರಹ್ಮನಾಗುತ್ತಾನೆ. |
| ಮುಕ್ತಿ ಎಂದರೆ ಶೂನ್ಯ. | ಮುಕ್ತಿ ಬ್ರಹ್ಮನಲ್ಲಿ ಐಕ್ಯವಾಗುವುದು. |
| ತಾರತಮ್ಯ ಇರುವುದಿಲ್ಲ. | ಎಲ್ಲರೂ ಬ್ರಹ್ಮರಾದಾಗ ತಾರತಮ್ಯ ಪ್ರಶ್ನೆ ಬರುವುದೇ ಇಲ್ಲ |

ಹೀಗೆ ಬೌದ್ಧಧರ್ಮಕ್ಕೂ ಶಂಕರ ಸಿದ್ಧಾಂತಕ್ಕೂ ಅತಿ ಹತ್ತಿರ ಸಾಮ್ಯವಿರುವುದು.

ಆದರೂ ಶಂಕರರು ತಾವು ಮೊದಲೇ ಮಾಯಾವಾದವನ್ನು ಪ್ರತಿಪಾದನೆ ಮಾಡಬೇಕೆಂದು ತೀರ್ಮಾನಿಸಿ ಅದಕ್ಕೆ ಹೊಂದುವಂತೆ ವೇದಕ್ಕೆ ವ್ಯಾಖ್ಯಾನ ಭಾಷ್ಯ ಬರೆದರು. ಇದಕ್ಕೆ ಕಾರಣವೂ ಇರುವುದು. ಶಂಕರಾಚಾರ್ಯರಲ್ಲಿ ಮಣಿಮಂಥನೆಂಬ ದೈತ್ಯ ಬ್ರಹ್ಮದ್ವೇಷಿ ಆವಿಷ್ಟನಾಗಿದ್ದ. ಶಂಕರಾಚಾರ್ಯರು ಪರಮ ವೈಷ್ಣವರು. ಆದರೂ ಮಣಿಮಂಥನೆಂಬ ಅಸುರ ಇವರನ್ನು ಬಲವಾಗಿ ಅಪ್ಪಿದ್ದ. ಈ ಬಿಗಿತದಿಂದ ಬಿಡಿಸಿಕೊಳ್ಳಲು ಆಗಲಿಲ್ಲ. ಹೀಗಾಗಿ ಅವನು ಹೇಳಿದ್ದನ್ನು ಸ್ವಲ್ಪ ಬದಲಾಯಿಸಿ ಹೊಸ ರೀತಿಯಾಗಿ ಹೇಳಬೇಕಾಯಿತು. ಅಸುರನ ಆವೇಶ ಇಲ್ಲದಿದ್ದಾಗ ಶ್ರೀಹರಿಯನ್ನು ಭಜಿಸುತ್ತಿದ್ದರು. ಕಾಲಡಿಯಲ್ಲಿ ಶ್ರೀಕೃಷ್ಣ ಮಂದಿರ ಸ್ಥಾನ, ಬದರಿಯಲ್ಲಿ ವಿಷ್ಣುರೂಪ ನಾರಾಯಣ ಪುನಸ್ಥಾಪನೆ, ದ್ವಾರಕೆಯಲ್ಲಿ ಶ್ರೀಕೃಷ್ಣನ ಸಾನ್ನಿಧ್ಯ,



ಪೂರೀ ಜಗನ್ನಾಥನ ಸಾನ್ನಿಧ್ಯಗಳಲ್ಲಿ ವೈಷ್ಣವಾಗಮ ಪ್ರಕಾರ ಪೂಜಾದಿಗಳನ್ನು ಮಾಡಿದರು. ಭಜಗೋವಿಂದ ಎಂಬ ಸ್ತುತಿ ಲಕ್ಷ್ಮೀನೃಸಿಂಹ ಮಮದೇಹಿ ಕರಾವಲಂಬಂ ಎಂಬ ಸ್ತುತಿ ಇದಕ್ಕೆ ಸಾಕ್ಷಿ. ಶೃಂಗೇರಿಯನ್ನು ಹೊರತು ಎಲ್ಲಾ ಕಡೆ ಮಠಗಳನ್ನು ಸ್ಥಾಪಿಸಿದರು.

ಹೀಗಿದ್ದರೂ ಮಣಿಮಂಥನೆಂಬ ಹರಿದ್ವೇಷಿ ಆವೇಶಿಸಿ ಬ್ರಹ್ಮನೈರ್ಗುಣ್ಯ ಶೂನ್ಯವಾದಗಳನ್ನು ಪ್ರಚಾರ ಮಾಡುವಂತೆ ಆಯಿತು. ಶಂಕರರನ್ನು ಶಂಕರನ ಅವತಾರ ಎಂದು ಹೇಳಿಕೊಳ್ಳುತ್ತಾರೆ. ಆಧಾರವಿಲ್ಲ. ಹಾಗೇನಾದರೂ ಶಂಕರರು ಶಂಕರನ ಅವತಾರವೆನ್ನುವುದಾದರೆ ಪರಶಿವನಿಗೆ ಅಸುರಾವೇಷವು ಇದ್ದುದಾಗಿ ಪುರಾಣಗಳಲ್ಲಿ ಸಾಕಷ್ಟು ನಿದರ್ಶನಗಳಿವೆ. ಶಂಕರನಿಗೆ ಇದೇನು ಹೊಸತೇನಲ್ಲ.

ಇಂತಹ ಶಂಕರರು ಬದರಿಕಾಶ್ರಮದಲ್ಲಿ ತಮ್ಮ ಅದ್ವೈತ ಸಿದ್ಧಾಂತವನ್ನು ವೇದವ್ಯಾಸರಲ್ಲಿ ಮಂಡಿಸಿ ಅವರೊಂದಿಗೆ ಪಾದದಲ್ಲಿ ಜಯಗಳಿಸಿದರೆಂದು ಅವರ ಅನುಯಾಯಿಗಳು ಹೇಳಿಕೊಳ್ಳುತ್ತಾರೆ.

**ಸೂತ್ರೈರಪಿ ವ್ಯಾಸಃ ಸರ್ವಾರ್ಥಾನ ನೆರ್ನಿಬಬಂಧ ಸಂಗೃಹೀತ ವಾನ್ ।**
**ಶಂಕರಾಚಾರ್ಯಸ್ತು ಸೂತ್ರಾಣ್ಯನಾಶ್ರಿತ್ವಾಪಿ ಸರ್ವಾರ್ಥಾನ್**
**ಸಂಗೃಹೀತವಂತಃ ಸೂತ್ರಾನು ಕಾರ್ಯಾನಪಿ ವಕೃತ್ವಾತ್ ॥**

ಎಂದಿದ್ದಾರೆ. ಆದ್ದರಿಂದ ವ್ಯಾಸರಿಗಿಂತ ಶ್ರೇಷ್ಠರು ಶಂಕರಾಚಾರ್ಯರು ಎಂದು ಆದ್ದರಿಂದ ವ್ಯಾಸರನ್ನು ನಮಿಸುವುದಿಲ್ಲ.

**ನಸ್ತಂತಾಮಿ ತಂ ವ್ಯಾಸಮಶೇಮರ್ಥಂ**
**ಸಮ್ಯಕ್ ನ ಸೂತ್ರೈರಪಿ ಯೋ ಬಬಂಧ ।**
**ವಿನಾಪಿ ತೈಃ ಸಂಗೃಹೀತಾಖಿಲಾರ್ಥಂ**
**ತಂ ಶಂಕರಂ ಸೌಮಿಸೂರೇಶ್ವರಂ ಚ ॥**

ಹೀಗಿದ್ದರೂ ಶಂಕರಾಚಾರ್ಯರ ಭಾಷ್ಯಕ್ಕೆ ವಿವರಣೆ ಟೀಕಾ ಬರೆದ ಭಾಮತಿ ಹೀಗೆ ತಿಳಿಸುತ್ತಾರೆ.

**ಶಾಸ್ತ್ರಾಣಾಂ ಭೇದಏವ ಶೃತಿ ಶಿಖರಗಿರಾಮಾಗಮಾನಾಂಚನಿಷ್ಠಾ ಸಾಕಂ ಸರ್ವೈಪ್ರಮಾಣೈಃ ಸ್ಮೃತಿ ನಿರಮಹಾಭಾರತಾದಿ ಪ್ರಬಂಧೈಪ್ರತ್ತೈರಾಚಾರ್ಯ ರತ್ನೈರಪಿ ಪರಿಜಗೃಹೇಶಂಕರಾರ್ಯೈಃಸಚಾಪಿ ॥** ಎಂದು ಭೇದವೇ ಶಾಸ್ತ್ರಗಳ ಮುಖ್ಯ ತಾತ್ಪರ್ಯವೆಂದು ಸ್ಪಷ್ಟವಾಗಿ ತಿಳಿಸುತ್ತಾರೆ.

ಇಂತಹ ವಾಕ್ಯಗಳನ್ನು ಸಮರ್ಥಿಸಲು ವಿದ್ಯಾರಣ್ಯರ ಶಂಕರ ದಿಗ್ವಿಜಯ ನಿಸ್ಸಂದೇಹವಾಗಿ ತಿಳಿಸುತ್ತಾರೆ.

**ವ್ಯಾಸೋಪದಿಷ್ಟಸೂತ್ರಾಣಾಂ ದ್ವೈತ ವಾಕ್ಯಾತ್ಮನಾಂ ಶಿವೇ ।**
**ಅದ್ವೈತಮೇವ ಸೂತ್ರಾರ್ಥಂ ಪ್ರಾಮಾಣ್ಯೇನ ಕರಿಷ್ಯತಿ ।**
**ಅವಿಮುಕ್ತಿಸಮಾಪೀನಂ ವ್ಯಾಸಂ ವಾಕ್ಯೈರ್ವಿಜಗ್ಯ ಚ ॥**

ಶ್ರೀಶಂಕರಾಚಾರ್ಯರು ಮಾಯಾವಾದ ಸಿದ್ಧಾಂತವನ್ನು ಪ್ರಚಾರಮಾಡಿ "ಪ್ರಾಯಶಃ ನನ್ನ ಮತವೇ ಅಂತಿಮ"ವೆಂದು ಭಾವಿಸಿರಲಿಲ್ಲಕ್ಕೂ ಸಾಕು. ನನ್ನ ಸಿದ್ಧಾಂತವನ್ನು ವಿಮರ್ಶೆ ಮಾಡುವವರು ಹುಟ್ಟುವುದೇ ಇಲ್ಲವೆಂದು ನಂಬಿದ್ದರು. ಅದಕ್ಕೆ ಆಗಿನ ಜನಾಂಗ ಪ್ರೋತ್ಸಾಹವನ್ನು ಕೊಟ್ಟರು. ಇದೂ ಒಂದು ಕಾರಣವಿರಬಹುದು. ಅದ್ವೈತ ಮತ ಹೆಚ್ಚು ಜನಮನ್ನಣೆ ಕಂಡಿತು.